بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

**ವರ್ಷ:** 02

**ಸಂಚಿಕೆ:** 22

**ವಾರ್ಷಿಕ ಶುಲ್ಕ** ರೂ.575/–

**ಸಂಪಾದಕರು:** ತಾರಿಖ್ ಅಹ್ಮದ್ ಇದ್ರೀಸ್.

**03 ಜೂನ್ 2021, 03 ಎಹ್ಸಾನ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 21 ಶವ್ವಾಲ್ 1442 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

لَقَدْ كَفَرَ الَّذِيْنَ قَالُوْٓا اِنَّ اللّٰهَ
هُوَ الْمَسِيْحُ ابْنُ مَرْيَمَ ؕ قُلْ فَمَنْ يَّمْلِكُ
مِنَ اللّٰهِ شَيْـًٔا اِنْ اَرَادَ اَنْ يُّهْلِكَ الْمَسِيْحَ
ابْنَ مَرْيَمَ وَاُمَّهٗ وَمَنْ فِى الْاَرْضِ جَمِيْعًا

**(ಅಲ್‌ಮಾಇದ: 18)**

**ಅಂದರೆ: . 'ಖಂಡಿತವಾಗಿಯೂ ಅಲ್ಲಾಹನು ಮರ್ಯಮ್ ಪುತ್ರ ಮಸೀಹ್' ಎಂದು ಹೇಳುವವರು ನಿಸ್ಸಂಶಯವಾಗಿಯೂ ಅವಿಶ್ವಾಸಿಗಳಾಗಿದ್ದಾರೆ. ಹೇಳು: 'ಅಲ್ಲಾಹನು ಮರ್ಯಮ್ ಪುತ್ರ ಮಸೀಹನ್ನೂ ಅವರ ಮಾತೆಯನ್ನೂ ಭೂಮಿಯಲ್ಲಿರುವ ಎಲ್ಲರನ್ನೂ ನಾಶಪಡಿಸಲು ಬಯಸಿದರೆ ಅಲ್ಲಾಹನ ವಿರುದ್ಧವಾಗಿ ಯಾರಿಗೆ ಏನು ಶಕ್ತಿಯಿದೆ?' ಆಕಾಶಗಳ, ಭೂಮಿಯ ಮತ್ತು ಅವುಗಳ ಮಧ್ಯದಲ್ಲಿರುವ ಎಲ್ಲವುಗಳ ಆಧಿಪತ್ಯ ಅಲ್ಲಾಹನಿಗೆಯೇ ಇದೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ರಸೂಲುಲ್ಲಾಹ್(ಸ) ಯಾರ ಬೇಡಿಕೆಯನ್ನು ಎಂದೂ ತಿರಸ್ಕರಿಸುತ್ತಿರಲಿಲ್ಲ.

(1277) ಓರ್ವ ಮಹಿಳೆ ನಬಿ(ಸ) ರವರ ಬಳಿಗೆ ಒಂದು ಹೆಣೆದ ಚಾದರವನ್ನು ತಂದಳು. ಆಕೆ ಹೇಳುತ್ತಿದ್ದಳು. ನಾನು ಇದನ್ನು ತನ್ನ ಕೈಗಳಿಂದ ಹೆಣೆದು ತಂದಿರುವೆನು. ನಾನು ಅದನ್ನು ತಮಗೆ ಧರಿಸಲು ನೀಡುತ್ತಿದ್ದೇನೆ. ನಬಿ(ಸ) ಆ ಚಾದರವನ್ನು ಲುಂಗಿಯನ್ನಾಗಿ ಧರಿಸಿ ಹೊರಗೆ ಬಂದರು ಆಗ ಒಬ್ಬ ಅದನ್ನು ನೋಡಿ ಕೊಂಡಾಡಿದನು ಮತ್ತು ಹೇಳಿದನು. ನನಗೆ ಧರಿಸಲು ಕೊಡಿ. ಅದು ತುಂಬಾ ಚೆನ್ನಾಗಿದೆ. ಜನರು ಹೇಳಿದರು. ಹೀಗೆ ನೀನು ಹೇಳಿದ್ದು ಸರಿಯಲ್ಲ. ನಬಿ(ಸ) ಅದನ್ನು ಧರಿಸಿದ್ದಾರೆ. ಅವರಿಗೆ ಅಗತ್ಯವಿದ್ದ ಸ್ಥಿತಿಯಲ್ಲಿ ನೀನು ಹಝ್ರತ್ ರಸೂಲುಲ್ಲಾಹ್(ಸ) ರವರಿಂದ ಕೇಳಿರುವೆ. ಅವರು ಯಾರ ಬೇಡಿಕೆಯನ್ನು ತಿರಸ್ಕರಿಸುವುದಿಲ್ಲ ಎಂಬ ವಿಷಯವು ನಿನಗೆ ಗೊತ್ತು. ಆಗ ಅವನು ಉತ್ತರ ನೀಡಿದನು. ಅಲ್ಲಾಹನಾಣೆ ನಾನು ಅದನ್ನು ಧರಿಸುವ ಉದ್ದೇಶದಿಂದ ಕೇಳಲಿಲ್ಲ. ಬದಲು ಅದನ್ನು ಬೇಡಿದ ಕಾರಣ ನಾನು ಅದನ್ನು ನನ್ನ ಕಫನ್ (ಶವವಸ್ತ್ರ) ಮಾಡಿಕೊಳ್ಳ ಬಯಸಿದ್ದೆ. ವರದಿಗಾರರು ಹೇಳುತ್ತಾರೆ. ನಂತರ ಅದು (ಚಾದರ) ಅವರ ಶವವಸ್ತ್ರವೇ (ಕಫನ್) ಆಯಿತು.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ ಶಾಹ್ ಸಾಹಿಬ್(ರಹ) ಈ ಹದೀಸನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ. ಸಹಾಬರು ಅವರು ಹೀಗೆ ಬೇಡುವುದನ್ನು ಕೆಟ್ಟದಾಗಿ ಭಾವಿಸಿದರು. ಆದರೆ ಅವನು ಆ ಚಾದರವನ್ನು ತನ್ನ ಕಫನ್ (ಶವವಸ್ತ್ರ) ಮಾಡಿಕೊಳ್ಳಲು ಬಯಸಿದ್ದರಿಂದ ಮೌನವಹಿಸಿದ್ದರು. ಮತ್ತು ಯಾರೂ ಸಹ ಆಕ್ಷೇಪ ಎತ್ತಲಿಲ್ಲ. ಹಝ್ರತ್ ರಸೂಲುಲ್ಲಾಹ್(ಸ) ತನಗೆ ಅವಶ್ಯಕತೆ ಇದ್ದರೂ ಸಹ ಬೇಡಿದವನಿಗೆ ಅದನ್ನು ಕೊಟ್ಟುಬಿಟ್ಟರು. ಹೀಗೆ ಅವರು (ಸ) . . . . **"ಯುಸಿರೂನ ಅಲಾ ಅನ್‌ಫುಸಿಹಿಮ್ ವಲೌ ಕಾನ ಬಿಹಿಮ್ ಖಸಾಸ** ವಚನದ ಒಂದು ಪವಿತ್ರವಾದ ಮಾದರಿ ಸ್ಥಾಪಿಸಿದರು. **(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಯಝ್, ಮುದ್ರಣ ಖಾದಿಯಾನ್ 2006)**

**ಯಾವ ವಿಧದಿಂದಾಗಲಿ ಯಾವುದೇ ರೀತಿಯಿಂದಾಗಲಿ ನಮ್ಮ ಮಿತ್ರರು ತಮ್ಮ ತಮ್ಮ ಮನಸ್ಸಿನಲ್ಲಿ ಧರ್ಮ ಸೇವೆಯನ್ನು ನಿಶ್ಚಯ ಮಾಡಿಕೊಳ್ಳಬೇಕಾಗಿದೆ.**

**ನಾನು ಸತ್ಯವಾಗಿ ಹೇಳುತ್ತೇನೆ. ಅಲ್ಲಾಹನ ದೃಷ್ಟಿಯಲ್ಲಿ ಧರ್ಮ ಸೇವೆ ಮಾಡುವ ಮತ್ತು ಜನರ ಸೇವೆ ಮಾಡುವ ವ್ಯಕ್ತಿಯೇ ಗೌರವಾರ್ಹ ವ್ಯಕ್ತಿಯಾಗಿರುತ್ತಾನೆ. ಇಲ್ಲವಾದರೆ ಅವರು ನಾಯಿ ಕುರಿಗಳಾಗಿ ಸತ್ತು ಹೋದರು ಅಲ್ಲಾಹನು ಲೆಕ್ಕಿಸುವುದಿಲ್ಲ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ದುಆ (ಪ್ರಾರ್ಥನೆ) ಯ ನೈಜತೆ

ದುಆದ ಬಗ್ಗೆ ಇನ್ನೊಮ್ಮೆ ಲೇಖನಿ ಎತ್ತುವುದು ಅನಿವಾರ್ಯ ಅನಿಸುತ್ತದೆ. ಹಿಂದೆ ಹೇಳಿದ ವಿಷಯ ಸಾಕಾಗಲಿಕ್ಕಿಲ್ಲ. ದುಆ (ಪ್ರಾರ್ಥನೆ) ಎಂಬುದು ತುಂಬ ಸೂಕ್ಷ್ಮ ವಿಷಯವಾಗಿದೆ. ಅದರಲ್ಲಿ ದುಆ ಮಾಡುವವರ ಮತ್ತು ದುಆ ಆಲಿಸುವವನ ನಡುವೆ ಸಂಬಂಧ ಹೇಗಿರಬೇಕೆಂದರೆ ಇಬ್ಬರ ನೋವು ನಲಿವು ಒಂದಾಗಿರಬೇಕು, ಯಾವ ರೀತಿ ಹಾಲುಣಿಸುವ ಮಗುವಿನ ಅಳು ತಾಯಿಯ ಎದೆಯಿಂದ ಸಹಜವಾಗಿ ಹಾಲು ಎಳೆದು ತರುತ್ತದೆ ಅದರ ಹಾಗೆಯೇ ದುಆ ಮಾಡುವವನ ಸ್ಥಿತಿ ದಯನೀಯವಾಗಿರಬೇಕು.

ನೋವು ಮತ್ತು ಸೆಳೆತ ಸಹ ಅಲ್ಲಾಹನಿಂದ ಅವತರಿಸುವಂತಹದ್ದಾಗಿದೆ. ನಿಜ ಹೇಳಬೇಕಾದರೆ ಎಲ್ಲ ಅಧಿಕಾರವು ಅಲ್ಲಾಹನ ಬಳಿ ಇದೆ. ಅದರಲ್ಲಿ ದಾಸನು ವಿವಶನಾಗಿದ್ದಾನೆ. ನೋವು ಮತ್ತು ಸೆಳೆತ ಸಹ ಅಲ್ಲಾಹನಿಂದ ಅವತರಿಸುತ್ತದೆ. ಅಲ್ಲಾಹನು ಒಬ್ಬನ ಯಶಸ್ಸು ಬಯಸುವವನಾದರೆ ಅವನೇ ಅವನ ಯಶಸ್ಸಿನ ಮಾರ್ಗಗಳನ್ನು ತೆರೆಯುತ್ತಾನೆ. ಆದರೆ ಅದಕ್ಕಾಗಿ ಮನುಷ್ಯನಿಗೆ ಪ್ರಚೋದನೆ ನೀಡುವ ಸಾಧನಗಳು ಸಹ ಬೇಕಾಗುತ್ತದೆ. ಆ ಸಾಧನೆ ಮನುಷ್ಯನು ಪೂರ್ಣ ಕಳಕಳಿಯಿಂದ ಅಲ್ಲಾಹನೆಡೆಗೆ ತನ್ನ ಗಮನ ಸಮರ್ಪಿಸುವುದಾಗಿದೆ.

### ದುಆ ಮತ್ತು ಧರ್ಮ ಸೇವೆ

ನನ್ನ ಕಳಕಳಿಯ ಕಾರಣ, ತನ್ನೊಳಗೆ ದುಆ ಮಾಡುವ ಪ್ರಚೋದನೆಗೆ ಕಾರಣ ಒಂದೇ ಒಂದು ಆಗಿದೆ. ಅದೇನೆಂದರೆ ಯಾವ ವ್ಯಕ್ತಿ ಧರ್ಮ ಸೇವೆಯ ಅರ್ಹತೆ ಪಡಿದಿದ್ದಾನೆ, ಅವನ ವ್ಯಕ್ತಿತ್ವ ಅಲ್ಲಾಹ ಮತ್ತು ಅವನ ಪ್ರವಾದಿ, ಅಲ್ಲಾಹನ ಗ್ರಂಥಕ್ಕಾಗಿ ಮತ್ತು ಅಲ್ಲಾಹನ ದಾಸರ ಹಿತಕ್ಕಾಗಿ ಮುಡಿಪಾಗಿದೆ. ಕಂಡು ಹಿಡಿಯುವುದಾಗಿದೆ. ಇಂತಹ ಕಳಕಳಿಯುಳ್ಳ ವ್ಯಕ್ತಿ ನನಗೆ ಗುರುತಿಸುವನು. ಯಾವ ವಿಧದಿಂದಾಗಲಿ, ಯಾವ ರೀತಿಯಿಂದಾಗಲಿ ನಮ್ಮ ಸ್ನೇಹಿತರು ತಮ್ಮ ಮನಸ್ಸಿನಲ್ಲಿ ಧರ್ಮ ಸೇವೆಯ ನಿಶ್ಚಯ ಮಾಡಿಕೊಳ್ಳಬೇಕಾಗಿದೆ. ನಾನು ಸತ್ಯವಾಗಿ ಹೇಳುತ್ತೇನೆ. ಅಲ್ಲಾಹನ ದೃಷ್ಟಿಯಲ್ಲಿ ಧರ್ಮ ಸೇವೆ ಮಾಡುವ ಮತ್ತು ಜನರ ಹಿತಬಯಸುವ ವ್ಯಕ್ತಿಯೇ ಗೌರವಾರ್ಹವಾಗಿರುತ್ತದೆ. ಇಲ್ಲವಾದರೆ ಅವರು ನಾಯಿ ಕುರಿಗಳ ಹಾಗೆ ಸತ್ತುಬಿದ್ದರು. ಅಲ್ಲಾಹನು ಲೆಕ್ಕಿಸುವುದಿಲ್ಲ. **(ಮಲ್ಫೂಝಾತ್, ಸಂಪುಟ–1, ಪುಟ–295–296 ಮುದ್ರಣ ಖಾದಿಯಾನ್ 2018)**

**ದೇವನನ್ನು ಸಹಭಾಗಿಯಾಗಿ ಮಾಡುವ ಕಾರಣದಿಂದ ಮನುಷ್ಯನು ಸೃಷ್ಟಿಯಿಂದ, ಅಲ್ಲಾಹನ ಸೃಷ್ಟಿಯಲ್ಲಿ ಗೌಪ್ಯವಾಗಿದ್ದಂತಹ ಗುಣಗಳಿಂದ ಲಾಭಾನ್ವಿತನಾಗಲು ಸಾಧ್ಯವಾಗುವುದಿಲ್ಲ. ವೃಕ್ಷಗಳನ್ನು, ನದಿಗಳನ್ನು ದೇವನನ್ನಾಗಿ ಮಾಡುವವರು ಎಂದು ಅದರ ಮೇಲೆ ಪ್ರಭುತ್ವವಹಿಸಲು ಸಾಧ್ಯವಾದೀತು. ಮತ್ತು ಮನುಷ್ಯರನ್ನು ದೇವನನ್ನಾಗಿ ಮಾಡುವವರು ಎಂದು ಅದರಿಂದ ಲಾಭ ಪಡೆಯಲು ಸಾಧ್ಯ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅರ್ರಅದ್ ವಚನ 15ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಈ ವಚನದಲ್ಲಿ ಹೇಳಲಾದ ವಿಷಯವೆಂದರೆ ಯಾವ ರೀತಿ ಉನ್ನತ ಸ್ಥಾನ ಪಡೆದವನನ್ನು ಕೀಳು ಎಂದು ಭಾವಿಸುವವನು ನಷ್ಟವನ್ನು ಅನುಭವಿಸುತ್ತಾನೆ. ಅದೇ ರೀತಿ ನಿಕೃಷ್ಟವಾದ ವಸ್ತು ಒಂದನ್ನು ಉನ್ನತವೆಂದು ಭಾವಿಸುವವನು ಸಹ ನಷ್ಟವನ್ನು ಅನುಭವಿಸುತ್ತಾನೆ. ಅಸಲು ನಾಣ್ಯವನ್ನು ನಕಲಿ ಎಂದು ಭಾವಿಸುವವನು ಹಸಿವಿನಿಂದ ಸಾಯುವನು. ಏಕೆಂದರೆ ಅವನು ನಾಣ್ಯವನ್ನು ಬಳಸಲಾರ. ಅಂತೆಯೇ ನಕಲಿ ನಾಣ್ಯವನ್ನು ಅಸಲು ಎಂದು ಭಾವಿಸುವವನು ಸಹ ಕಷ್ಟವನ್ನು ಅನುಭವಿಸುವನು. ಏಕೆಂದರೆ ಅದು ಯಾವ

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

## ಮುಹಮ್ಮದ್ ಹುಸೇನ್ ಬಾಟೌಲ್ವಿ ಅವರಿಗೆ "ಸಿರ್ರುಲ್ ಖಿಲಾಫ್," ಎದುರಾಗಿ ಗ್ರಂಥ ಬರೆಯಲು 27 ರೂಪಾಯಿಗಳ ಬಹುಮಾನ.

ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ವಿರೋಧಿಸಲು ಯಾವ ಹಂತವು ಬಿಟ್ಟುಕೊಟ್ಟಿಲ್ಲ, ಅವರಿಗೆ ಸೋಲುಣಿಸಲು ಮತ್ತು ಅವಮಾನಿಸಲು ಬೇಕಾದ ಎಲ್ಲ ಉಪಾಯಗಳನ್ನು ಬಳಸಿಕೊಂಡರು. ಭಾರತದಲ್ಲೆಲ್ಲಾ ತಿರುಗಾಡಿ ಅವರ ವಿರುದ್ಧ ಕುಫ್ರ್ ಪತ್ವಾಗಳನ್ನು ಸಂಗ್ರಹಿಸಿದರು, ಸುಳ್ಳನ್ನು ನೆಚ್ಚಿಕೊಂಡರು, ಸುಳ್ಳು ಸಾಕ್ಷ್ಯ ವಹಿಸಿದರು. ಅವರ ವಿರೋಧದ ಭರಾಟೆಯಲ್ಲಿ ಇಸ್ಲಾಮ್‌ಗೆ ಹೊರತಾಗಿ ಕ್ರೈಸ್ತರಿಗೆ ನೆರವಾದರು. ಅಲ್ಲಾಹನು ಸಹ ತನ್ನ ವಾಗ್ದಾನ ಪ್ರಕಾರ– **"ಇನ್ನಿ ಮುಹೀನುನ್ ಮನ್ ಅರಾದ ಇಹಾನತಕ"** ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಅವಮಾನವೇ ಅವರ ಗತಿಯಾಯಿತು. ಅವರ ಇದ್ದ ಅಲ್ಪಸ್ವಲ್ಪ ಗೌರವವು ಹಾಳಾಯಿತು. ಮುಹಮ್ಮದ್ ಹುಸೇನ್ ಬಟೌಲ್ವಿ ತನ್ನ ಪತ್ರಿಕೆ "ಇಶಾಅತುಸ್ಸಿನಾ" ದಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅವರಿಗೆ ಅರಬಿ ಭಾಷೆಯ ಯಾವ ಜ್ಞಾನವು ಇಲ್ಲ ಎಂಬ ಪ್ರಚಾರ ಮಾಡಿದರು. ಅಲ್ಲದೇ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅದಕ್ಕೆ ಉತ್ತರವಾಗಿ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ ಬರೆಯಲು ಆಹ್ವಾನಿಸಿ ಹೇಳಿದರು. ಅವನು ತನ್ನ ಸಜ್ಜನ ದಾಸರಿಗೆ ಪವಿತ್ರ ಖುರ್‌ಆನ್‌ನ ಜ್ಞಾನವನ್ನು ನೀಡುತ್ತಾನೆ ಎಂದು ಅಲ್ಲಾಹನ ವಾಗ್ದಾನವಿದೆ. ಒಂದು ವೇಳೆ ತಾನು ಸುಳ್ಳುಗಾರನು ವಂಚಕನು ಮತ್ತು ನೀವು ಭಯಭಕ್ತಿಯುಳ್ಳವರು ಹಾಗೂ ಸಜ್ಜನರಾಗಿದ್ದರೆ ನನ್ನೊಡನೆ ವಾಕ್‌ಚಾತುರ್ಯ ಭರಿತ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ ಬರೆಯುವ ಸ್ಪರ್ಧೆಯನ್ನು ಸ್ವೀಕರಿಸಿರಿ. ಆದರೆ ಮುಹಮ್ಮದ್ ಹುಸೇನ್ ಬಟೌಲ್ವಿ ಅದನ್ನು ಮನ್ನಿಸಲಿಲ್ಲ ಮತ್ತು ಏನೇನೋ ನೆಪಗಳನ್ನು ಒಡ್ಡಿ ಮೈದಾನದಿಂದ ಪಲಾಯನ ಮಾಡಿದರು. ಮತ್ತೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಸೂರಃ ಫಾತಿಹದ ವ್ಯಾಖ್ಯಾನ ಹಾಗೂ ಹಝ್ರತ್ ರಸೂಲುಲ್ಲಾಹ್(ಸ) ರವರ ಪ್ರಶಂಸೆಯಲ್ಲಿ ಅರಬಿ ಸಾಹಿತ್ಯದಲ್ಲಿ ನಾಲ್ಕು ಖಸೀದಗಳನ್ನು ಕರಾಮತುಸ್ಸಾದಿಖೀನ್" ಗ್ರಂಥದಲ್ಲಿ ಬರೆದರು. ಮತ್ತು ಅದರಂತೆಯೇ ಸಾಹಿತ್ಯ ವಾಕ್‌ಚಾತುರ್ಯದಿಂದ ಕೂಡಿದ ಗ್ರಂಥವನ್ನು ರಚಿಸಲು ಮುಹಮ್ಮದ್ ಹುಸೇನ್ ಬಟೌಲ್ವಿ ಅವರನ್ನು ಆಹ್ವಾನಿಸಿದರು. ಒಂದು ಸಾವಿರ ರೂಪಾಯಿಯ ಬಹುಮಾನ ಘೋಷಿಸಿದರು. ಆದರೂ ಮುಹಮ್ಮದ್ ಹುಸೇನ್ ಬಟೌಲ್ವಿ ಎದುರಿಗೆ ಬರಲಿಲ್ಲ, ಯಾಕೆಂದರೆ ಅವರಲ್ಲಿ ಆ ಸಾಮರ್ಥ್ಯವಿದ್ದರೆ ತಾನೇ!! ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಸಾಹಿತ್ಯಕ ಅರಬಿಯಲ್ಲಿ ಒಂದು ಗ್ರಂಥ "ನೂರುಲ್ ಹಖ್" ಬರೆದರು. ವಿಶೇಷವಾಗಿ ಪಾದರಿ ಇಮಾಮುದ್ದೀನ್ ಅವರಿಗೆ ಈ ಗ್ರಂಥದ ಉತ್ತರ ಬರೆಯಲು ಆಹ್ವಾನಿಸುತ್ತ 5 ಸಾವಿರ ರೂಪಾಯಿಗಳ ಬಹುಮಾನವನ್ನು ಘೋಷಿಸಿದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಕೇವಲ ಇಮಾಮುದ್ದೀನ್ ಮಾತ್ರವಲ್ಲ ಬದಲು ಎಲ್ಲ ಪಾದರಿಗಳಿಗೂ ಅದರ ಎದುರಿಗೆ ಬರೆಯಲು ಆಹ್ವಾನಿಸಿದರು. ಅದೇರೀತಿ ಎಲ್ಲ ಮೌಲ್ವಿಗಳನ್ನು ಸಹ ವಿಶೇಷವಾಗಿ ಮುಹಮ್ಮದ್ ಹುಸೇನ್ ಬಟೌಲ್ವಿ, ರಸಲ್ ಬಾಬಾ ಅಮೃತ್ಸರಿ, ಅವರನ್ನು ಆಹ್ವಾನಿಸಿದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

"ನೆನಪಿರಲಿ ನಾನು ಬರೆದ ಈ ಖಸೀದಗಳು ಯಾವುದೇ ಹೆಸರು ಪಡೆಯಲು ಅಥವಾ ತಮ್ಮ ಘನತೆಯನ್ನು ತೋರಿಸಲು ಅಲ್ಲ. ಬದಲು ಮಿಂಯಾ ಬಟೌಲ್ವಿ ಮತ್ತು ಅವರ ಸಂಗಡಿಗರಿಗೆ ಈ ಸಂದೇಶ ರವಾನಿಸಬೇಕಾಗಿತ್ತು. ಅವರುಗಳು ನನ್ನನ್ನು ಸುಳ್ಳುಗಾರ, ವಂಚಕ ಎಂದು ಕರೆಯುವುದಲ್ಲದೇ ನನಗೆ ಯಾವ ರೀತಿಯ ಅರಬಿ ಭಾಷೆಯ ಜ್ಞಾನವಿಲ್ಲ, ಪವಿತ್ರ ಖುರ್‌ಆನ್‌ನ ವಾಕ್‌ಚಾತುರ್ಯ ಮತ್ತು ಜ್ಞಾನದಿಂದ ಲವಲೇಶವು ಸಂಬಂಧವಿಲ್ಲ. ನನ್ನ ಬರವಣಿಗೆಯ ಉದ್ದೇಶ. ಜನರು ಅದರ ಸತ್ಯಾಸತ್ಯತೆ ತಿಳಿಯುವಂತಾಗಲಿ ಮತ್ತು ಯಾರು ಮೋಸಗಾರ, ಸುಳ್ಳುಗಾರ ಎಂದು ನಿರ್ಣಯಿಸಲಿ ಎಂದಾಗಿದೆ. **(ಕರಾಮತು ಸ್ಸಾದಿಖೀನ್, ರೂಹಾನಿ ಖಝಾಯಿನ್, ಸಂಪುಟ–7, ಪುಟ–62)**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು."

ಶೇಖ್ ಮುಹಮ್ಮದ್ ಹುಸೇನ್ ಸಾಹಿಬ್ ಬಟೌಲ್ವಿ ಬರೆದ ಪತ್ರಿಕೆ "ಇಶಾಅತಸ್ಸಿನಾ" ನೋಡಿದ ಜನರು, ಅಥವಾ ಅವರ ಭಾಷಣಗಳನ್ನು ಕೇಳಿದ ಜನರು, ಅಥವಾ ಅವರ ಪತ್ರಗಳನ್ನು ಓದಿದ ಜನರು ಈ ಮಾತುಗಳಿಗೆ ಸಾಕ್ಷ್ಯವಾಗಿದ್ದಾರೆ. ಶೇಖ್ ಸಾಹಿಬ್ ಈ ವಿನೀತನ ಬಗ್ಗೆ ಯಾವ ರೀತಿಯ ಅವಹೇಳನಕಾರಿ ಪದಗಳನ್ನು ಬಳಸಿದ್ದಾರೆ ಮತ್ತು ತಮ್ಮ ಬಗ್ಗೆ ಯಾವ ರೀತಿಯಲ್ಲಿ ಅಹಂಭಾವದಿಂದ ದೊಡ್ಡಸ್ತಿಕೆಯ ಮಾತುಗಳನ್ನು ಆಡಿಕೊಂಡಿದ್ದಾರೆ. ಒಂದೆಡೆ ನನ್ನನ್ನು ಅವರು ಸುಳ್ಳುಗಾರ ಮತ್ತು ಮಿಥ್ಯವಾದಿ ಎಂದು ಜರಿದರು. ಇನ್ನೊಂದೆಡೆ ತಾನು ಉನ್ನತ ದರ್ಜೆಯ ಅರಬಿ ಭಾಷೆಯ ಪಂಡಿತನೆಂದು ನಂಬಬೇಕು, ಇನ್ನೊಂದೆಡೆ ನನ್ನನ್ನು ಅಜ್ಞಾನಿ ಎಂದು ಸಾಬೀತುಪಡಿಸ ಬಯಸುತ್ತಿದ್ದರು. ಹೀಗೆ ಜನರನ್ನು ನನ್ನಿಂದ ದೂರಮಾಡ ಬಯಸುತ್ತಿದ್ದರು. ನಾನು ಆ ದೊಡ್ಡ ಮನುಷ್ಯನಿಗೆ ಲಾಹೋರಿನ ಒಂದು ಬೃಹತ್ ಸಮಾವೇಶದಲ್ಲಿ ಈ ದೇವವಾಣಿ – "ಇನ್ನಿ ಮುಹೀನುನ್ ಮನ್ ಅರಾದ ಇಹಾನತಕ" ಬಗ್ಗೆ ತಿಳಿಸಿದ್ದೆ. 'ಅಂದರೆ ಯಾರು ನಿನ್ನ ಅವಮಾನ ಮಾಡ ಬಯಸುವನೋ ನಾನು ಅವನನ್ನು ಅವಮಾನಿಸುವೆನು. ಆದರೆ ಅವರ ಮನಸ್ಸಿನಲ್ಲಿ ದ್ವೇಷ ಎಷ್ಟೊಂದು ತುಂಬಿ ಹೋಗಿತ್ತೆಂದರೆ ಈ ಧ್ವನಿ ಕೇಳಿಸದಂತಾಯಿತು. ಅವರು ಹೇಗೋ ಮಾಡಿ ಜನರಿಗೆ ನಾನು ಈ ಅರಬಿ ಭಾಷೆಯಿಂದ ಸಂಪೂರ್ಣ ಅಜ್ಞಾನಿ ಎಂದು ಮನವರಿಕೆ ಮಾಡಿಕೊಡಬೇಕು ಅನಿಸುತ್ತಿತ್ತು. ಆದರೆ ಅದು ಅವರಿಗೆಯೇ ತಿರುಗುಬಾಣವಾಯಿತು. ಇದು ಆ ದೇವವಾಣಿಯ ಫಲವೇ ಆಗಿದೆ. ಯಾರು ನಿನ್ನನ್ನು ಅವಮಾನ ಮಾಡಬಯಸುವರೋ ಅವರೇ ಅವಮಾನಿತರಾಗುವರು. ಸುಬ್‌ಹಾನಲ್ಲಾಹ್! ನೋಡಿ ಅಲ್ಲಾಹನು ಎಷ್ಟೊಂದು ಸರ್ವಶಕ್ತನು ಹಾಗೂ ನಿರ್ಗತಿಕರಿಗೆ ಆಶ್ರಯ ನೀಡುವವನಾಗಿದ್ದಾನೆ. ಆದರೂ ಜನರು ಹೆದರುತ್ತಿಲ್ಲ. ಇದು ಅಲ್ಲಾಹನ ದೃಷ್ಟಾಂತ ಅಲ್ಲವೇ, ಯಾರನ್ನು ಅವರು ಅಜ್ಞಾನಿ ಎಂದು ಕರೆಯುತ್ತಿದ್ದರು. ಒಂದು ಅಕ್ಷರ ಅರಬಿಯು ತಿಳಿದಿಲ್ಲ ಅನ್ನುತ್ತಿದ್ದರು, ತಮ್ಮನ್ನು ತಾನು ದೊಡ್ಡ ಮೌಲ್ವಿಗಳು ಎಂದು ಕರೆಯಿಸಿಕೊಳ್ಳುತ್ತಿದ್ದರು. ಅವರುಗಳಿಗೆ ತನ್ನ ಆಹ್ವಾನವಿತ್ತು. ನನ್ನ ವ್ಯಾಖ್ಯಾನದಂತೆ ನೀವು ವ್ಯಾಖ್ಯಾನ ಬರೆದು ತೋರಿಸಿ ಸಾವಿರ ರೂಪಾಯಿಯ ಬಹುಮಾನವನ್ನು ಪಡೆಯಬಹುದಾಗಿತ್ತು. ನೂರುಲ್ – ಹಖ್ ಗ್ರಂಥದ ಬದಲಿ ರೂಪ ಬರೆದು ಐದು ಸಾವಿರ ರೂಪಾಯಿಗಳ ಬಹುಮಾನ ಮುಂಗಡವಾಗಿ ಇಟ್ಟುಕೊಳ್ಳಿರಿ. ಆದರೂ ಯಾವ ಮೌಲ್ವಿಗೂ ಎದುರಿಗೆ ಬರಲು ಸಾಧ್ಯವಾಗಿಲ್ಲ. ಅದೇ ಅವರ ಮೌಲ್ವಿತನವೇ ಅದರ ಭರವಸೆಯ ಮೇಲೆಯೇ ನನ್ನನ್ನು ಕಾಫಿರ್ ಎಂದಿರುವರೆ. ಓ ಶೇಖ್ ಈಗಲಾದರೂ ಆ ದೇವವಾಣಿ ಪೂರ್ತಿಯಾಯಿತೆ ಅಥವಾ ಏನಾದರೂ ಬಾಕಿ ಇದೆಯೇ. ಲೋಕವೇ ತಿಳಿದಿದೆ. ಆ ಸತ್ಯ ಬಯಲಿಗೆ ಬರಬೇಕು ಎಂಬ ಉದ್ದೇಶದಿಂದಲೇ, ಅವರ ಮೌಲ್ವಿತನ ಮತ್ತು ಕಾಫಿರ್ ಫತ್ವಾಗಳ ಸತ್ಯಾಸತ್ಯತೆ ಬಯಲಿಗೆ ಬರಬೇಕು ಎಂಬುದಕ್ಕಾಗಿಯೇ "ಕರಾಮತುಸ್ಸಾದಿಖೀನ್" ಗ್ರಂಥ ಅರಬಿಯಲ್ಲಿ ಬರೆದಿರುವೆನು. ಅದಾದ ನಂತರ "ನೂರುಲ್ ಹಖ್" ಎಂಬ ಸಂಪೂರ್ಣ ಗ್ರಂಥ ಅರಬಿಯಲ್ಲಿ ಬರೆದಿರುವೆನು. ನಾನು ಸ್ಪಷ್ಟವಾಗಿ ಜಾಹೀರಾತು ನೀಡಿರುವೆನು. ಶೇಖ್ ಸಾಹಿಬ್ ಅಥವಾ ನನ್ನನ್ನು ಕಾಫಿರ್ ಎಂದಿರುವ ಎಲ್ಲಾ ಮೌಲ್ವಿಗಳಲ್ಲಿ ಯಾರಾದರೊಬ್ಬರು "ಕರಾಮತುಸ್ಸಾದಿಖೀನ್" ಗ್ರಂಥದ ಎದುರಾಗಿ ಒಂದು ಗ್ರಂಥ ರಚಿಸಿ ತೋರಿಸಿದರೆ ಒಂದು ಸಾವಿರ ರೂಪಾಯಿ ಬಹುಮಾನ ಅವರಿಗೆ ದೊರೆಯುವುದು. ನೂರುಲ್ ಹಖ್ ಗ್ರಂಥಧ ಎದುರಿಗೆ ಗ್ರಂಥ ಬರೆದು ತೋರಿಸಿದರೆ ಐದು ಸಾವಿರ ರೂಪಾಯಿಗಳ ಬಹುಮಾನ ದೊರೆಯುವುದು. ಆದರೂ ಅ ಜನರಿಗೆ ಎದುರಿಗೆ ಬರಲು ಸಾಧ್ಯವಾಗಲಿಲ್ಲ. ಯಾವ ದಿನಾಂಕ ಅದಕ್ಕಾಗಿ ನಾವು ಕೊಟ್ಟಿದ್ದೆವು (ಅಂದರೆ ಜೂನ್ 1894 ರ ಕೊನೆಯವರೆಗೆ) ಅದು ಮುಗಿದು ಹೋಯಿತು. ಶೇಖ್ ಸಾಹಿಬರ ಮೌನದಿಂದ ಸಾಬೀತಾಯಿತು. ಅವರಿಗೆ ಅರಬಿ ತಿಳಿದಿಲ್ಲ. ಅಷ್ಟೇ ಅಲ್ಲ, ಅವರು ಅಪ್ಪಟ ಸುಳ್ಳುಗಾರರು ಎಂದೂ ಸಾಬೀತಾಯಿತು. ಅದನ್ನು ಅವರು ತನ್ನ ಭಾಷಣ ಮತ್ತು ಜಾಹೀರಾತಿನ ಮೂಲಕ ಸ್ಪಷ್ಟಪಡಿಸಿದರು. ಈ ವ್ಯಕ್ತಿ ಅರಬಿ ಭಾಷೆಯಿಂದ ಕಿಂಚಿತ್ತು ಜ್ಞಾನ ಹೊಂದಿರಲಿಲ್ಲ. ಅಂದರೆ ಒಂದು ಅಕ್ಷರವು ತಿಳಿದಿಲ್ಲ. ಅನಿವಾರ್ಯ ಸ್ಪರ್ಧೆಯ ವೇಳೆ ತಮ್ಮ ಜ್ಞಾನ ತೋರಿಸುವುದು ಅವರ ಪ್ರಥಮ ಕರ್ತವ್ಯವಾಗಿತ್ತು. ಏಕೆ ಮೌನವಹಿಸಿದರು. ಯೋಚಿಸಿರಿ. ಯಾವುದೆಲ್ಲ ರೀತಿಯಲ್ಲಿ ಪ್ರೋತ್ಸಾಹಿಸಿ ಅವರಿಗೆ ಮೈದಾನಕ್ಕೆ ಕರೆ ನೀಡಿದ್ದೆ. ಯಾವ ಯಾವ ಪದಗಳಿಂದ ಅವರ ಸ್ವಾಭಿಮಾನವನ್ನು ಕಣಕಿ ಪ್ರಶ್ನಿಸಿದೆ. ಆದರೆ ಅವರು ಕಿಂಚಿತ್ತು ಸಹ ಇತ್ತ ಗಮನಹರಿಸಲಿಲ್ಲ. ನಾವು ಜನರು ಶೇಖ್ ಸಾಹಿಬರ ಅರಬಿ ಪಾಂಡಿತ್ಯ ತಿಳಿಯುವಂತಾಗಬೇಕು ಎಂಬ ಉದ್ದೇಶದಿಂದ ನೂರುಲ್ ಹಖ್ ಪತ್ರಿಕೆಯಲ್ಲಿ ಈ ಜಾಹೀರಾತು ನೀಡಿದ್ದೆವು. ಆದರೂ ಶೇಖ್ ಸಾಹಿಬ್ ಮೂರು ತಿಂಗಳ ಅವಧಿಯಲ್ಲಿ ನಾನು ಬರೆದಷ್ಟೇ ಬರಹ ಬರೆದು ಪ್ರಕಟಪಡಿಸಿದರೆ ಅದು ನಿಜವಾಗಿಯೂ ನೂರುಲ್ ಹಖ್ ಗ್ರಂಥದಂತೆ ಅರಬಿ ಸಾಹಿತ್ಯದಿಂದ ವಾಕ್‌ಚಾತುರ್ಯದಿಂದ ತುಂಬಿದ್ದಾಗಿದ್ದರೆ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಲ್ಲಾಹನ ಸಂಪ್ರೀತಿಯನ್ನು ಪಡೆದುಕೊಂಡು ನರಕದಿಂದ ರಕ್ಷಣೆ ಪಡೆಯುವವರಾಗಲಿಕ್ಕಾಗಿ ಈ ರಮಝಾನಿನ ಕೊನೆಯ ದಿನಗಳಲ್ಲಿ ವಿಶೇಷವಾಗಿ ನಮ್ಮ ಆರಾಧನೆಗಳನ್ನು ಮನೋಹರಗೊಳಿಸಲಿಕ್ಕಾಗಿ ದುರೂದ್, ತೌಬ, ಇಸ್ತಿಗ್‌ಫಾರ್ ಹಾಗೂ ಜನರ ಹಕ್ಕುಗಳನ್ನು ಈಡೇರಿಸುವ ಕಡೆಗೆ ಬಹಳ ಹೆಚ್ಚು ಗಮನಹರಿಸಬೇಕಾಗಿದೆ**

**ನಮ್ಮ ಪ್ರತಿಯೊಂದು ಕೃತ್ಯ ಮತ್ತು ನಮ್ಮ ಪ್ರತಿಯೊಂದು ಚಲನೆ ಈ ವಾದವನ್ನು ಸಾಬೀತುಪಡಿಸುವಂತಾಗಿರಬೇಕು. ಈ ವ್ಯಕ್ತಿ ಹಝ್ರತ್ ಪೈಗಂಬರ್‌ರನ್ನು(ಸ) ಅತ್ಯಂತ ಪ್ರೀತಿಸುವವರಾಗಿರುವರು ಎಂದು ಯಾರ ಬಗ್ಗೆ ಆಕಾಶದ ದೇವದೂತರು ಕೂಡ ಹೇಳಿದ್ದರೋ ಆ ವ್ಯಕ್ತಿಯನ್ನು ನಾವು ನಂಬುವವರಾಗಿದ್ದೇವೆ ಎಂಬುದನ್ನು ಆ ಸತ್ಕರ್ಮಗಳು ಸಾಬೀತುಪಡಿಸಬೇಕು**

**ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಇಂದು ಲೋಕದಲ್ಲಿ ಇರುವ ಸ್ಥಾನಕ್ಕೆ ಕಾರಣವೇನೆಂದರೆ ಅವರು ಹಝ್ರತ್ ಪೈಗಂಬರ್‌ರ(ಸ) ದಾಸರಾಗಿದ್ದರು ಎಂಬುದಾಗಿದೆ. ಹಝ್ರತ್ ಪೈಗಂಬರ್‌ರನ್ನು ಪ್ರೀತಿಸುತ್ತಿದ್ದರು ಎಂಬ ಕಾರಣದಿಂದಾಗಿದೆ**

**ಹಝ್ರತ್ ಪೈಗಂಬರರ(ಸ) ಪ್ರೇಮಿಯ ಜಮಾಅತಿನಲ್ಲಿ ಸೇರಿಕೊಂಡಿರುವ, ಎಲ್ಲ ಸಂದರ್ಭಗಳಲ್ಲೂ ಧರ್ಮಕ್ಕೆ ಭೌತಿಕತೆಯ ಮೇಲೆ ಆದ್ಯತೆ ನೀಡುವ ಪ್ರತಿಜ್ಞೆ ಮಾಡಿರುವ ನಮ್ಮ ಕರ್ತವ್ಯ ಧರ್ಮೋದ್ಧಾರಕನ ಮಹತ್ಕಾರ್ಯವನ್ನು ಮುಂದಕ್ಕೆ ಕೊಂಡು ಹೋಗುವುದಲ್ಲವೇ? ನಾವು ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಮತ್ತು ಸ್ವಲಾತಿನ ಪ್ರಾರ್ಥನೆಯನ್ನು ಮಾಡುತ್ತಾ ಈ ಮಸೀಹ್ ಮತ್ತು ಮಹ್‌ದಿಯ ಸಹಾಯಕರಾಗಬೇಕು**

**ದುರೂದಿನ ಯಥಾರ್ಥ ಗ್ರಹಿಕೆ ಮತ್ತು ಅರಿವು ಇಂದು ಅಹ್ಮದಿಗಳು ಇತರರಿಗೆ ನೀಡಬೇಕು. ಆದ್ದರಿಂದ ಈ ರಮಝಾನಿನಲ್ಲಿ ದುರೂದ್ ಕಡೆಗೆ ಹೆಚ್ಚು ಗಮನಹರಿಸುವುದರೊಂದಿಗೆ ನಮ್ಮೊಳಗೆ ಪರಿಶುದ್ಧವಾದ ಪರಿವರ್ತನೆಗಳನ್ನು ಮಾಡಲು ಪ್ರಯತ್ನವನ್ನು ಮಾಡಬೇಕು. ಅದು ದುರೂದಿನ ಸ್ವೀಕಾರಕ್ಕೆ ಆವಶ್ಯಕವಾದುದಾಗಿದೆ**

**ನಮ್ಮನ್ನು ಸ್ವತಃ ಪಾಪಗಳಿಂದ ದೂರವಿರಿಸಲಿಕ್ಕಾಗಿಯೂ ಮಾಡಿದ ಪಾಪಗಳಿಗೆ ಕ್ಷಮೆಯಾಚಿಸಲಿಕ್ಕಾಗಿಯೂ ಅಲ್ಲಾಹನ ಕಡೆಗೆ ಧಾವಿಸಬೇಕು ಮತ್ತು ನರಕದಿಂದ ರಕ್ಷಣೆ ಪಡೆಯಲು ಪ್ರಯತ್ನಿಸಬೇಕು**

**ಅಲ್ಲಾಹನ ಕ್ಷಮಾಪನೆಯ ಬಾಗಿಲುಗಳು ತೆರೆದಿರುತ್ತವೆ. ಆದರೆ ಮನುಷ್ಯನು ಉತ್ತಮ ಸ್ಥಿತಿಯಲ್ಲಿರುವಾಗ ಪಶ್ಚಾತ್ತಾಪವನ್ನು ಮಾಡಬೇಕು. ಕೊನೆಯ ಉಸಿರು ತೆಗೆಯುವ ವೇಳೆ ಕ್ಷಮಾಪನೆ ಮತ್ತು ಪಶ್ಚಾತ್ತಾಪವನ್ನು ಮಾಡುವುದಲ್ಲ**

**ಈ ರಮಝಾನಿನ ತಿಂಗಳು ದುಆ ಸ್ವೀಕಾರದ ಮಾಸ ಸಹ ಆಗಿದೆ. ಇದರ ಕೊನೆಯ ಹತ್ತು ದಿವಸ ನರಕದಿಂದ ರಕ್ಷಣೆ ಪಡೆಯಬಹುದಾದ ದಿನಗಳಾಗಿವೆ. ಪಾಪಗಳಿಂದ ಕ್ಷಮೆ ಮತ್ತು ಸತ್ಕರ್ಮಗಳನ್ನು ಮಾಡಲು ಬೇಕಾದ ಸೌಭಾಗ್ಯ ಮತ್ತು ಶಕ್ತಿ ಅಲ್ಲಾಹನಿಂದ ಲಭಿಸುತ್ತದೆ. ನಾವು ಅಲ್ಲಾಹನೊಂದಿಗೆ ಸೇರಿಕೊಂಡಿರುವವರಾದರೆ, ನಮ್ಮ ಇಹಲೋಕ ಮತ್ತು ಪರಲೋಕ ಜೀವಿತಗಳು ಮನೋಹರವಾಗುವುವು**

**ರಮಝಾನಿನ ದುಆಗಳಲ್ಲಿ ವಿರೋಧಿಗಳ ಉಪದ್ರಗಳಿಂದ ರಕ್ಷಣೆ ಪಡೆಯಲು ಸಹ ಬಹಳವಾಗ ದುಆ ಮಾಡಿರಿ. ಪಾಕಿಸ್ತಾನದ ಅಹ್ಮದಿಯರು ಸಹ ವಿಶೇಷವಾಗಿ ಈ ದಿನಗಳಲ್ಲಿ ಅವರಿಗಾಗಿಯೂ ಜಮಾಅತಿಗಾಗಿಯೂ ಬಹಳ ದುಆಗಳನ್ನು ಮಾಡಬೇಕು. ಈಗ ಹರಡಿರುವ ಕೊರೋನ ಮಹಾಮಾರಿಯಿಂದ ಸುರಕ್ಷಿತಗೊಳ್ಳಲು ಸಹ ದುಆ ಮಾಡಿರಿ. ಅಲ್ಲಾಹನು ಈ ವಿಪತ್ತಿನಿಂದ ಲೋಕಕ್ಕೆ ಮುಕ್ತಿ ನೀಡಲಿ. ನಮ್ಮನ್ನು ಸುರಕ್ಷಿತಗೊಳಿಸಲಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30-04-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ
اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔
إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔
صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅಲ್ಲಾಹನ ಅನುಗ್ರಹದಿಂದ ಈಗ ನಾವು ರಮಝಾನ್ ತಿಂಗಳಿಂದ ಸಾಗುತ್ತಿದ್ದೇವೆ ಮತ್ತು ಕೊನೆಯ ಹತ್ತು ಅನುಗ್ರಹೀತ ದಿನಗಳನ್ನು ಪ್ರವೇಶಿಸುತ್ತಿದ್ದೇವೆ. ಅಲ್ಲಾಹನು ನರಕದಿಂದ ಮುಕ್ತಿ ನೀಡುತ್ತಾನೆ ಎಂದು ರಮಝಾನಿನ ಕೊನೆಯ ಹತ್ತು ದಿನಗಳ ಕುರಿತು ಹಝ್ರತ್ ಪೈಗಂಬರ್(ಸ) ಹೇಳಿದ್ದರು.
(ಕನ್‌ಝುಲ್ ಅಮಾಲ್, ಭಾಗ-8, ಪುಟ-463, ಹದೀಸ್-23668, ಮುಅಸ್ಸಸುರ್ರಿಸಾಲ ಬೈರೂತ್ 1985)

ಆದ್ದರಿಂದ ನಾವು ಅಲ್ಲಾಹನ ಸಂಪ್ರೀತಿಯನ್ನು ಪಡೆದುಕೊಂಡು ನರಕದಿಂದ ರಕ್ಷಣೆ ಪಡೆಯುವವರಾಗಲಿಕ್ಕಾಗಿ ಈ ದಿನಗಳಲ್ಲಿ ವಿಶೇಷವಾಗಿ ನಮ್ಮ ಆರಾಧನೆಗಳನ್ನು ಮನೋಹರಗೊಳಿಸಲಿಕ್ಕಾಗಿ ದುರೂದ್, ತೌಬ, ಇಸ್ತಿಗ್‌ಫಾರ್ ಹಾಗೂ ಜನರ ಹಕ್ಕುಗಳನ್ನು ಈಡೇರಿಸುವ ಕಡೆಗೆ ಬಹಳ ಹೆಚ್ಚು ಗಮನಹರಿಸಬೇಕಾಗಿದೆ. ಸಾಮಾನ್ಯ ದಿನಗಳಲ್ಲೂ ಹಝ್ರತ್ ಪೈಗಂಬರರ(ಸ) ಆರಾಧನೆಯ ಮಟ್ಟ ಹೇಗಿತ್ತೆಂಬುದರ ಬಗ್ಗೆ ಕೂಡ ನಾವು ಮಾತುಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ರಮಝಾನಿನ ಕೊನೆಯ ಹತ್ತು ದಿನಗಳಲ್ಲಿ ಹಝ್ರತ್ ಪೈಗಂಬರರ(ಸ) ಮಾದರಿ ಮತ್ತು ರೀತಿ ಹೇಗಿತ್ತು ಎಂಬುದರ ಬಗ್ಗೆ ಹಝ್ರತ್ ಆಇಶ(ರ) ಹೀಗೆ ಹೇಳಿರುವರು: "ಬೇರೆ ಯಾವ ದಿನಗಳಲ್ಲಿ ಕಾಣದಷ್ಟು ಪರಿಶ್ರಮವನ್ನು ಹಝ್ರತ್ ಪೈಗಂಬರ್(ಸ) ರಮಝಾನ್ ತಿಂಗಳಲ್ಲಿ ಮಾಡುತ್ತಿದ್ದರು." (ಸಹೀಹ್ ಬುಖಾರಿ, ಕಿತಾಬ್ ಫಝ್ಲುಲ್ ಲೈಲತುಲ್ ಖದರ್, ಹದೀಸ್-2024)

ಒಟ್ಟಿನಲ್ಲಿ ಅವರ ಪರಿಶ್ರಮ ಮತ್ತು ಆರಾಧನೆ ಹೇಗಿತ್ತು ಎಂಬುದನ್ನು ನಮ್ಮಿಂದ ಊಹಿಸಲು ಸಾಧ್ಯವಿಲ್ಲ. ಹಝ್ರತ್ ಆಇಶರಿಗೂ(ರ) ಆ ಆರಾಧನೆ ಮತ್ತು ಪ್ರಯತ್ನಗಳ ಬಗ್ಗೆ ಸರಿಯಾಗಿ ವಿವರಿಸಲು ಸಾಧ್ಯವಾಗಿಲ್ಲ. ಹೀಗಿದ್ದರೂ ಹಝ್ರತ್ ಪೈಗಂಬರ್(ಸ) ಸತ್ಯವಿಶ್ವಾಸಿಗಳಿಗೆ ಅತ್ಯುತ್ತಮ ಮಾದರಿಯಾಗಿರುವರು ಆದ್ದರಿಂದ ಅವರನ್ನು ಅನುಸರಿಸಬೇಕೆಂದು ಸತ್ಯವಿಶ್ವಾಸಿಗಳೊಡನೆ ಅಲ್ಲಾಹನು ಆಜ್ಞಾಪಿಸಿದ್ದಾನೆ. ಆದ್ದರಿಂದ ನಾವು ನಮ್ಮ ಸಾಮರ್ಥ್ಯಗಳ ಪ್ರಕಾರ ಹಝ್ರತ್ ಪೈಗಂಬರ್(ಸ) ನೆಲೆನಿಲ್ಲಿಸಿದ ಆ ಉನ್ನತ ಮಟ್ಟಗಳನ್ನು ತಲುಪಲು ಪ್ರಯತ್ನಿಸಬೇಕಾಗಿದೆ. ಆಗಲೇ ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಆಲಿಸುವನು. ಒಬ್ಬ ಸತ್ಯವಿಶ್ವಾಸಿಯ ಮಾರ್ಗವಾದ ಮತ್ತು ಒಬ್ಬ ಸತ್ಯವಿಶ್ವಾಸಿ ಗಳಿಸಲು

ಪ್ರಯತ್ನಿಸಬೇಕಾದ ಪದವಿಯಾದ ಆ ಮಾರ್ಗದಲ್ಲಿ ನಾವು ಚಲಿಸುವವರೂ ಆ ಪದವಿಯ ಕಡೆಗೆ ಧಾವಿಸುವವರೂ ಆಗಬೇಕು.

ಆದ್ದರಿಂದ ನಾವು ಈ ದಿನಗಳಲ್ಲಿ ವಿಶೇಷವಾಗಿ ಪ್ರಾರ್ಥನೆಗಳಲ್ಲಿ ನಿರತರಾಗಬೇಕು, ಅಹ್ಮದಿಯರು ವಿಶೇಷವಾಗಿ ಈ ಕಡೆಗೆ ಗಮನಹರಿಸಬೇಕಾದ ಆವಶ್ಯಕತೆಯಿದೆ. ಪಾಕಿಸ್ತಾನದಲ್ಲೂ ಇತರ ಮುಸ್ಲಿಂ ರಾಷ್ಟ್ರಗಳಲ್ಲೂ ಜಮಾಅತಿನ ವಿರುದ್ಧ ಹಲವು ಪ್ರಯತ್ನಗಳು ನಡೆಯುತ್ತಿವೆ. ನಮ್ಮ ವಿರುದ್ಧ ಹಗೆಯ ಬೆಂಕಿಯನ್ನು ಹೊತ್ತಿಸಲು ಬಹಳ ಪ್ರಯತ್ನಗಳನ್ನು ಮಾಡಲಾಗುತ್ತಿವೆ. ಅಲ್ಲಾಹನು ಇವುಗಳಿಂದ ನಮ್ಮನ್ನು ರಕ್ಷಿಸಲಿ. ಶತ್ರುಗಳ ಉಪದ್ರಗಳು ಅವರಿಗೆ ತಿರುಗೇಟಾಗಲಿ. ಅದೇ ರೀತಿಯಲ್ಲಿ ಈಗ ಹರಡಿರುವ ಮಹಾಮಾರಿಯಿಂದಲೂ ಅಲ್ಲಾಹನು ನಮ್ಮನ್ನು ಸುರಕ್ಷಿತಗೊಳಿಸಲು ನಾವು ದುಆ ಮಾಡಬೇಕು.

ಹಝ್ರತ್ ಪೈಗಂಬರ್(ಸ) ಮತ್ತು ಈ ಕಾಲಘಟ್ಟದಲ್ಲಿ ಅವರ ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್‌ರ(ಸ) ಮೂಲಕ ದುಆಗಳು ಸ್ವೀಕಾರ ಆಗುವ ಮಾರ್ಗದ ಕಡೆಗೆ ಅಲ್ಲಾಹನು ನಮ್ಮ ಗಮನವನ್ನು ಸೆಳೆದಿದ್ದಾನೆ ಎಂದು ಮಾತ್ರವಲ್ಲ, ಬದಲಾಗಿ ಅದು ಸ್ವೀಕಾರವಾಗಲು ಇರುವ ಮಾರ್ಗಗಳನ್ನು ಸಹ ಅಲ್ಲಾಹನು ನಮಗೆ ಕಲಿಸಿ ಕೊಟ್ಟಿದ್ದಾನೆ. ಅಲ್ಲಾಹನ ಸ್ತುತಿಕೀರ್ತನೆ ಮಾಡುವುದರೊಂದಿಗೆ ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆ ಮಾಡುವುದು ದುಆ ಸ್ವೀಕಾರಕ್ಕೆ ಬಹಳ ಆವಶ್ಯಕವಾದುದಾಗಿದೆ. ಇಲ್ಲದಿದ್ದರೆ ದುಆಗಳು ಭೂಮಿ ಮತ್ತು ಆಕಾಶದ ನಡುವೆ ಬಾಕಿಯಾಗಿ ಉಳಿಯುತ್ತವೆ. (ಜಾಮಿ ಅತ್ತಿರ್‌ಮಿಧಿ, ಅಬ್ವಾಬುಲ್ ವಿತರ್, ಹದೀಸ್-486)

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: ಯಾರು ನನ್ನ ಮೇಲೆ ದುರೂದ್ ಪ್ರಾರ್ಥನೆಯನ್ನು ಮಾಡುವುದನ್ನು ಬಿಟ್ಟುಬಿಡುತ್ತಾನೋ ಅವನು ಸ್ವರ್ಗದ ಮಾರ್ಗವನ್ನು ಕಳೆದುಕೊಳ್ಳುವನು. (ಸನನ್ ಇಬ್ನೆ ಮಾಜ, ಕಿತಾಬ್ ಇಖಾಮತಿಸ್ಸಲಾತ್, ಹದೀಸ್-908)

ನನ್ನ ಮೇಲೆ ದುರೂದ್ ಪ್ರಾರ್ಥನೆಗಳನ್ನು ಮಾಡಿರಿ, ನೀವು ದುರೂದ್ ಪ್ರಾರ್ಥನೆಗಳನ್ನು ಮಾಡುವುದರಿಂದ ಅದು ನಿಮ್ಮದೇ ಪರಿಶುದ್ಧಿ ಮತ್ತು ಪ್ರಗತಿಗೆ ಕಾರಣವಾಗುವುದು. (ಕನ್ಝುಲ್ ಅಮಾಲ್, ಭಾಗ-1, ಪುಟ-249, ಕಿತಾಬುಲ್ ಅಝ್ಕಾರ್, ವರದಿ-9892, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1991)

ಯಾರು ಹೃದಯ ನಿಷ್ಠೆಯಿಂದ ನನ್ನ ಮೇಲೆ ದುರೂದ್ ಪ್ರಾರ್ಥನೆ ಮಾಡುತ್ತಾರೋ ಅವರ ಮೇಲೆ ಅಲ್ಲಾಹನು ಹತ್ತು ಪಟ್ಟು ಅನುಗ್ರಹವನ್ನು ಸುರಿಸುತ್ತಾನೆ, ಹತ್ತು ಪದವಿಗಳನ್ನು ಉನ್ನತಗೊಳಿಸುತ್ತಾನೆ ಹಾಗೂ ಹತ್ತು ಸತ್ಕರ್ಮಗಳನ್ನು ಅವನ ಹೆಸರಲ್ಲಿ ಬರೆಯುವನು. ಈ ವರದಿಗಳಿಂದ ದುರೂದ್ ಪ್ರಾರ್ಥನೆಯ ಪ್ರಾಮುಖ್ಯತೆ ಸ್ಪಷ್ಟವಾಗುತ್ತದೆ. ನಾವು ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ನಂಬುವವರಾಗಿರುವೆವು ಮತ್ತು ಅವರ ಮೂಲಕ ಹಝ್ರತ್ ಪೈಗಂಬರರ(ಸ) ಸ್ಥಾನಮಾನಗಳು ಮತ್ತು ಪದವಿಗಳ ಬಗ್ಗೆ ಚೆನ್ನಾಗಿ ತಿಳಿದಿದ್ದೇವೆ ಎಂದು ನಾವು ವಾದಿಸುತ್ತೇವೆ. ಬೇರೆ ರೀತಿಯಲ್ಲಿ ಅದನ್ನು ತಿಳಿಯಲು ಸಾಧ್ಯವಿರಲಿಲ್ಲ. ಹೀಗಿರುವಾಗ ದುರೂದಿನ ಪ್ರಾಧಾನ್ಯವನ್ನು ಅರಿತುಕೊಂಡು ಬಹಳ ಹೆಚ್ಚಾಗಿ ದುರೂದ್ ಪ್ರಾರ್ಥನೆಗಳನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ಅಲ್ಲಾಹನು ನಮ್ಮ ದುಆಗಳನ್ನು ಅಂಗೀಕರಿಸಲಿ ಎಂಬ ಉದ್ದೇಶದಿಂದ ಮಾತ್ರ ನಾವು ದುರೂದ್ ಪ್ರಾರ್ಥನೆಗಳನ್ನು ಮಾಡಬಾರದು. ಬದಲಾಗಿ ಸ್ಥಿರವಾದ ಪರಿಶುದ್ಧಿ ನಮ್ಮ ಜೀವನದ ಭಾಗವಾಗಬೇಕು ಎಂಬ ಉದ್ದೇಶದಿಂದ ಮಾಡಬೇಕು. ಈ ದುರೂದ್ ಪ್ರಾರ್ಥನೆಯ ಮೂಲಕ ನಾವು ಅಲ್ಲಾಹನ ಸಾಮೀಪ್ಯವನ್ನು ಗಳಿಸುವವರಾಗಬೇಕು. ನಾವು ಈ ದುರೂದಿನ ಮೂಲಕ ನಮ್ಮ ಜೀವಿತವನ್ನು ಸದಾ ಪರಿಶುದ್ಧವನ್ನಾಗಿ ಇರಿಸುವವರಾಗಬೇಕು. ನಾವು ಧಾರ್ಮಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯನ್ನು ಗಳಿಸುವವರಾಗಬೇಕು. ನಾವು ಹಝ್ರತ್ ಪೈಗಂಬರರ ಯಥಾರ್ಥ ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ನಂಬಿದ್ದೇವೆ ಎಂದು ಹೇಳುವುದು ಕೇವಲ ನಮ್ಮ ಬಾಯಿಮಾತಾಗಬಾರದು. ಬದಲಾಗಿ ನಮ್ಮ ಪ್ರತಿಯೊಂದು ಕೃತ್ಯ ಮತ್ತು ನಮ್ಮ ಪ್ರತಿಯೊಂದು ಚಲನೆ ಈ ವಾದವನ್ನು ಸಾಬೀತುಪಡಿಸುವಂತಾಗಿರಬೇಕು. ಈ ವ್ಯಕ್ತಿ ಹಝ್ರತ್ ಪೈಗಂಬರ್‌ರನ್ನು(ಸ) ಅತ್ಯಂತ ಪ್ರೀತಿಸುವವರಾಗಿರುವರು ಎಂದು ಯಾರ ಬಗ್ಗೆ ಆಕಾಶದ ದೇವದೂತರು ಕೂಡ ಹೇಳಿದ್ದರೋ ಆ ವ್ಯಕ್ತಿಯನ್ನು ನಾವು ನಂಬುವವರಾಗಿದ್ದೇವೆ ಎಂಬುದನ್ನು ಆ ಸತ್ಕರ್ಮಗಳು ಸಾಬೀತುಪಡಿಸಬೇಕು. (ಬರಾಹೀನೆ ಅಹ್ಮದಿಯ್ಯ ಭಾಗ-4, ರೂಹಾನಿ ಖಝಾಇನ್ ಸಂಪುಟ-1, ಪುಟ-598, ಅಡಿಟಿಪ್ಪಣಿ ಸಂಖ್ಯೆ-3)

**"ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದಿನ್ ಸಯ್ಯಿದಿ ವುಲ್‌ದೇ ಆದಮ ವ ಖಾತಮಿನ್ನಬಿಯ್ಯೀನ"** ಎಂದರೆ, ಆದಮ್ ಸಂತತಿಗಳ ಸರದಾರ ಮತ್ತು ಖಾತಮುನ್ನಬಿಯ್ಯೀನ್ ಆದ ಮುಹಮ್ಮದ್(ಸ) ಮತ್ತು ಮುಹಮ್ಮದ್‌ರ(ಸ) ಕುಟುಂಬದ ಮೇಲೆ ದುರೂದ್ ಪ್ರಾರ್ಥನೆಯನ್ನು ಮಾಡು" ಎಂಬುದಾಗಿ ತನಗೆ ಲಭಿಸಿದ ದಿವ್ಯವಾಣಿಯ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎಲ್ಲ ಪದವಿಗಳು, ಶ್ರೇಷ್ಠತೆಗಳು ಮತ್ತು ವರದಾನಗಳು ದುರೂದ್ ಪ್ರಾರ್ಥನೆಗಳ ಮೂಲಕ ಮತ್ತು ಹಝ್ರತ್ ಪೈಗಂಬರರೊಡನೆ(ಸ) ಇರಿಸುವ ಪ್ರೇಮದ ಪ್ರತಿಫಲವಾಗಿ ಲಭಿಸುವುವು ಎಂಬುದಕ್ಕೆ ಈ ದಿವ್ಯವಾಣಿ ಸೂಚನೆ ನೀಡುತ್ತದೆ. ಸುಬ್‌ಹಾನಲ್ಲಾಹ್! ಏಕದೇವನಾದ ಅಲ್ಲಾಹನ ಮುಂದೆ ಪ್ರಪಂಚದ ಸರದಾರರಾದ ಹಝ್ರತ್ ಪೈಗಂಬರರಿಗೆ(ಸ) ಎಂತಹ ಶ್ರೇಷ್ಠವಾದ ಸ್ಥಾನಗಳಿವೆ ಎಂದರೆ, ಅವರನ್ನು ಪ್ರೀತಿಸುವವನನ್ನು ಅಲ್ಲಾಹನು ಪ್ರೀತಿಸುವನು. ಅವರ ಸೇವಕನಾಗುವವನು ಒಂದು ಲೋಕದ ಯಜಮಾನನಾಗುತ್ತಾನೆ. ಎಂದರೆ ಹಝ್ರತ್ ಪೈಗಂಬರರನ್ನು(ಸ) ಒಬ್ಬ ಸೇವಕನಂತೆ ಅನುಸರಿಸುವವನು ಎಂತಹ ಪದವಿಯನ್ನು ಪಡೆಯುತ್ತಾನೆ ಎಂದರೆ, ಒಂದು ಪ್ರಪಂಚವೇ ಅವನ ಕೈಯಲ್ಲಿ ಒಟ್ಟುಗೂಡಿಕೊಂಡು ಅವನ ಸೇವೆ ಮಾಡುವುದು. ಹಝ್ರತ್ ಮಸೀಹ್ ಮೌಊದ್‌ರಿಗೆ(ಅ) ಇಂದು ಲೋಕದಲ್ಲಿ ಇರುವ ಸ್ಥಾನಕ್ಕೆ ಕಾರಣವೇನೆಂದರೆ ಅವರು ಹಝ್ರತ್ ಪೈಗಂಬರ್‌ರ(ಸ) ದಾಸರಾಗಿದ್ದರು ಎಂಬುದಾಗಿದೆ. ಹಝ್ರತ್ ಪೈಗಂಬರ್‌ರನ್ನು ಪ್ರೀತಿಸುತ್ತಿದ್ದರು ಎಂಬ ಕಾರಣದಿಂದಾಗಿದೆ. ಈ ಪ್ರೀತಿಯ ಕಾರಣದಿಂದಲೇ ಹಝ್ರತ್ ಮಸೀಹ್ ಮೌಊದ್‌ರನ್ನು(ಅ) ಹಝ್ರತ್ ಪೈಗಂಬರರ(ಸ) ದಾಸ್ಯದಲ್ಲಿ ಉಮ್ಮತಿ ನಬಿಯನ್ನಾಗಿ ಮಾಡಿರುವನು. ಅವರನ್ನು ಹಝ್ರತ್ ಪೈಗಂಬರರ(ಸ) ಕೆಲಸಗಳನ್ನು ಹರಡಲಿಕ್ಕಾಗಿ, ಮುಂದಕ್ಕೆ ಕೊಂಡುಹೋಗಲಿಕ್ಕಾಗಿ ಮತ್ತು ಇಸ್ಲಾಂ ಧರ್ಮವನ್ನು ಪ್ರಚಾರ ಮಾಡಲಿಕ್ಕಾಗಿ ಅಲ್ಲಾಹನು ಕಳುಹಿಸಿದ್ದಾನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನಗೆ ನೆನಪಿದೆ. ಒಂದು ರಾತ್ರಿ ನಾನು ನನ್ನ ಹೃದಯ ಮತ್ತು ಮನಸ್ಸು ಸುಗಂಧಭರಿತವಾಗುವಷ್ಟರ ಮಟ್ಟಿಗೆ ದುರೂದ್ ಶರೀಫ್ ಪ್ರಾರ್ಥನೆಗಳನ್ನು ಮಾಡಿದೆ. ಅದೇ ರಾತ್ರಿ ನಾನು ಕನಸಿನಲ್ಲಿ ಹೀಗೆ ಕಂಡೆನು: ದೇವದೂತರು ಪ್ರಕಾಶದ ತೊಗಲ ಚೀಲಗಳನ್ನು ಸಿಹಿ ಮತ್ತು ಸ್ವಚ್ಛವಾದ ನೀರಿನಿಂದ ತುಂಬಿಸಿ ನನ್ನ ಮನೆಗೆ ಕೊಂಡುಬರುತ್ತಾರೆ ಮತ್ತು ಅವರಲ್ಲಿ ಒಬ್ಬ ದೇವದೂತರು ಹೇಳಿದರು: "ಇವು ನೀವು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಳುಹಿಸಿದ ದುರೂದ್ ಪ್ರಾರ್ಥನೆಗಳ ಅನುಗ್ರಹಗಳಾಗಿವೆ." ಇಂತಹದ್ದೇ ಒಂದು ವಿಸ್ಮಯಕರವಾದ ಘಟನೆ ನನಗೆ ನೆನಪಿಗೆ ಬರುತ್ತಿದೆ. ಒಂದು ಬಾರಿ ನನಗೆ ಇಲ್‌ಹಾಂ ಉಂಟಾಯಿತು. ಆಕಾಶದ ಜನರು ವಾಗ್ವಾದದಲ್ಲಿ ತೊಡಗಿರುವರು. ಧರ್ಮದ ಸುಧಾರಣೆ ಮಾಡುವ ನಿರ್ಧಾರದಲ್ಲಿ ಅಲ್ಲಾಹನು ಉತ್ಸುಕನಾಗಿದ್ದನು. ಆದರೆ ಧರ್ಮೋದ್ಧಾರನಾಗಿ ಯಾರನ್ನು ನಿಶ್ಚಯಿಸುವುದು ಎಂಬುದರ ಮಾಹಿತಿ ಆಕಾಶದ ಜನರಿಗೆ ಅದುವರೆಗೂ ಗೊತ್ತಿರಲಿಲ್ಲ. ಆದ್ದರಿಂದ ಅವರು ವಾಗ್ವಾದಗಳಲ್ಲಿ ತೊಡಗಿಕೊಂಡಿದ್ದರು. ಈ ನಡುವೆ ಜನರು ಒಬ್ಬ ಧರ್ಮೋದ್ಧಾರಕನನ್ನು ಹುಡುಕುತ್ತ ಸುತ್ತಾಡುತ್ತಿರುವುದನ್ನು ನಾನು ಕನಸಿನಲ್ಲಿ ಕಂಡೆನು. ಅಷ್ಟರಲ್ಲಿ ಒಬ್ಬ ವ್ಯಕ್ತಿ ನನ್ನ ಮುಂದಕ್ಕೆ ಬಂದು ನನ್ನ ಕಡೆಗೆ ಬೊಟ್ಟು ಮಾಡುತ್ತಾ ಹೇಳಿದರು: **"ಹಾದ್ಹಾ ರಜುಲುನ್ ಯುಹಿಬ್ಬು ರಸೂಲಲ್ಲಾಹ್"** ಎಂದರೆ, ಇವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವ ವ್ಯಕ್ತಿಯಾಗಿರುವರು. ಈ ವಾಕ್ಯದ ತಾತ್ಪರ್ಯವೇನೆಂದರೆ, ಧರ್ಮೋದ್ಧಾರ ಮಾಡಲು ಇರಬೇಕಾದ ಯೋಗ್ಯತೆ ಮತ್ತು ಹಿರಿದಾದ ನಿಬಂಧನೆಯೇನೆಂದರೆ, ಹಝ್ರತ್ ಪೈಗಂಬರರೊಡನೆ(ಸ) ಪ್ರೇಮವಿರಬೇಕು ಎಂದಾಗಿದೆ. ಅದು ಈ ವ್ಯಕ್ತಿಯಲ್ಲಿದೆ ಎಂದು ಅವರು ಹೇಳುತ್ತಿದ್ದರು. (ಬರಾಹೀನೆ ಅಹ್ಮದಿಯ ಭಾಗ-4, ರೂಹಾನ ಖಝಾಇನ್ ಸಂಪುಟ-1, ಪುಟ-597-598, ಅಡಿಟಿಪ್ಪಣಿ ಸಂಖ್ಯೆ-3)

ಒಟ್ಟಿನಲ್ಲಿ, ನಾವು ಧರ್ಮ ಸುಧಾರಣೆಗಾಗಿ ಅಲ್ಲಾಹನು ಕಳುಹಿಸಿದ ಹಝ್ರತ್ ಮಸೀಹ್ ಮತ್ತು ಮಹ್‌ದಿಯನ್ನು ನಂಬುವವರಾಗಿದ್ದೇವೆ. ಅವರನ್ನು ಇಸ್ಲಾಮಿನ ಪುನರುಜ್ಜೀವನಕ್ಕಾಗಿ ಕಳುಹಿಸಲಾಗಿತ್ತು. ಪ್ರಪಂಚವನ್ನು ಸಂಪೂರ್ಣವಾಗಿ ಹಝ್ರತ್ ಪೈಗಂಬರರ(ಸ) ಧ್ವಜದ ಕೆಳಗೆ ತರಲು ಮತ್ತು ಹಝ್ರತ್ ಪೈಗಂಬರರ(ಸ) ದಾಸ್ಯದಲ್ಲಿ ತರಲು ಅವರನ್ನು ಕಳುಹಿಸಲಾಗಿದೆ. ಹಝ್ರತ್ ಪೈಗಂಬರರ(ಸ) ಪ್ರೇಮದಲ್ಲಿ ಮುಳುಗಿಕೊಂಡೇ ಅವರು ಆ ಸ್ಥಾನವನ್ನು ಪಡೆದಿದ್ದರು. ಹೀಗಿರುವಾಗ ಹಝ್ರತ್ ಪೈಗಂಬರರ(ಸ) ಪ್ರೇಮಿಯ ಜಮಾಅತಿನಲ್ಲಿ ಸೇರಿಕೊಂಡಿರುವ, ಎಲ್ಲ ಸಂದರ್ಭಗಳಲ್ಲೂ ಧರ್ಮಕ್ಕೆ ಭೌತಿಕತೆಯ ಮೇಲೆ ಆದ್ಯತೆ ನೀಡುವ ಪ್ರತಿಜ್ಞೆ ಮಾಡಿರುವ ನಮ್ಮ ಕರ್ತವ್ಯ ಧರ್ಮೋದ್ಧಾರಕನ ಮಹತ್ಕಾರ್ಯವನ್ನು ಮುಂದಕ್ಕೆ ಕೊಂಡು ಹೋಗುವುದಲ್ಲವೇ? ನಾವು ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಮತ್ತು ಸ್ವಲಾತಿನ ಪ್ರಾರ್ಥನೆಯನ್ನು ಮಾಡುತ್ತಾ ಈ ಮಸೀಹ್ ಮತ್ತು ಮಹ್‌ದಿಯ ಸಹಾಯಕರಾಗಬೇಕು. ಯಾರನ್ನು ಹಝ್ರತ್ ಪೈಗಂಬರರ(ಸ) ನಿಂದಕರು ಎಂದು ಭಾವಿಸುತ್ತೀರೋ ಅವರು ಸತ್ಯದಲ್ಲಿ ಹಝ್ರತ್ ಪೈಗಂಬರರನ್ನು(ಸ) ಅತ್ಯಂತ ಹೆಚ್ಚು ಪ್ರೀತಿಸುವವರಾಗಿರುವರು ಎಂದು ಲೋಕಕ್ಕೆ ತಿಳಿಸಿಕೊಡಿರಿ. ಅವರೇ ದುರೂದ್ ಮತ್ತು ಸಲಾಮಿನ ಸರಿಯಾದ ಅರಿವು ಪಡೆದುಕೊಂಡು ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆ ಮಾಡುವವರಾಗಿರುವರು. ಹಝ್ರತ್ ಪೈಗಂಬರ್(ಸ)

ಮತ್ತು ಹಝ್ರತ್ ಮಸೀಹ್ ಮೌಊದ್‌ರಿಂದ(ಸ) ದುರೂದಿನ ಸರಿಯಾದ ಗ್ರಹಿಕೆ ಪಡೆದುಕೊಂಡು ಅವರ ಮೇಲೆ ದುರೂದ್ ಮತ್ತು ಸಲಾಮಿನ ಪ್ರಾರ್ಥನೆಯನ್ನು ಮಾಡುವವರಾಗಿರುವರು. ನಾವು ರಮಝಾನಿನಲ್ಲಿ ಕೇವಲ ಸ್ವಂತಕ್ಕಾಗಿ ದುಆಗಳನ್ನು ಮಾಡುವುದರೊಂದಿಗೆ ಕಳವಳದೊಂದಿಗೆ ಹಝ್ರತ್ ಪೈಗಂಬರರ(ಸ) ಹೆಸರನ್ನು ಉನ್ನತಿಗೆ ಎತ್ತಿಸಲು ಮತ್ತು ಹಝ್ರತ್ ಪೈಗಂಬರರ(ಸ) ಧ್ವಜ ಲೋಕದಲ್ಲೆಡೆ ಹಾರಿಸುವಂತಾಗಲು, ಜನರು ಹಝ್ರತ್ ಪೈಗಂಬರರ(ಸ) ದಾಸ್ಯದಲ್ಲಿ ಬಂದು ಇಹಪರ ಲೋಕವನ್ನು ಸುಂದರಗೊಳಿಸುವಂತಾಗಲು ದುಆ ಮಾಡಬೇಕು.

ಒಟ್ಟಿನಲ್ಲಿ, ಇದು ನಮ್ಮ ಹೆಗಲುಗಳಲ್ಲಿ ಹಾಕಲಾಗಿರುವ ಬಹಳ ದೊಡ್ಡದಾದ ಜವಾಬ್ದಾರಿಯಾಗಿದೆ. ನಾವು ಎಷ್ಟು ಸತ್ಯಸಂಧ ಮತ್ತು ಆಳವಾಗಿ ಈ ಕರ್ತವ್ಯವನ್ನು ಈಡೇರಿಸುತ್ತಿದ್ದೇವೆ ಎಂದು ನೋಡಬೇಕಾಗಿದೆ. ಹೀಗೆ ನಾವು ಅಲ್ಲಾಹನ ಅನುಗ್ರಹಗಳು ಮತ್ತು ವರದಾನಗಳಿಂದ ಪ್ರಯೋಜನ ಪಡೆಯುವವರಾಗುವೆವು. ಖಿಯಾಮತ್ ದಿನದ ತನಕ ನಾವು ಈ ಅನುಗ್ರಹಗಳ ಮತ್ತು ಶ್ರೇಷ್ಠತೆಗಳ ವಾರಸುದಾರರಾಗಬೇಕಾದರೆ, ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆಗಳನ್ನು ಮಾಡುತ್ತಾ ಹೋಗುವುದು ನಮ್ಮ ಕರ್ತವ್ಯವಾಗಿದೆ. ಹೀಗೆ ಮಾಡಿದರೆ ಶತ್ರುಗಳ ಕುತಂತ್ರಗಳು ಮತ್ತು ಅವರ ಆಕ್ರಮಣಗಳು ಅಲ್ಲಾಹನ ಅನುಗ್ರಹದಿಂದ ನಾಶವಾಗುವುವು. ಅಲ್ಲಾಹನು ಸ್ವತಃ ಶತ್ರುಗಳನ್ನು ಹಿಡಿಯುವನು. ನಾವು ಮತ್ತು ನಮ್ಮ ಸಂತಾನಗಳು ಆಧ್ಯಾತ್ಮಿಕವಾಗಿಯೂ ಪ್ರಗತಿಯ ಮಜಲುಗಳನ್ನು ಏರುವುದನ್ನು ನಾವು ನೋಡುವೆವು. ನಾವು ವೈಯಕ್ತಿಕವಾದ ದುಆಗಳ ಸ್ವೀಕಾರದ ದೃಷ್ಟಾಂತವನ್ನೂ ಮತ್ತು ಸಾಮೂಹಿಕವಾದ ಪ್ರಾರ್ಥನೆಗಳ ಸ್ವೀಕಾರ ದೃಷ್ಟಾಂತಗಳನ್ನೂ ನೋಡುವವರಾಗುವೆವು. ಈ ಮಾತು ಎಂದಿಗೂ ಸುಳ್ಳಾಗಲಾರವು. ಏಕೆಂದರೆ, ಅಲ್ಲಾಹನ ಸ್ತುತಿಕೀರ್ತನೆ ಮತ್ತು ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆ ಮಾಡುತ್ತಾ ಮಾಡುವ ದುಆಗಳು ಸ್ವೀಕಾರವಾಗುವುದು ಎಂದು ಅಲ್ಲಾಹನು ಮತ್ತು ಅವನ ಪ್ರವಾದಿ ನಮಗೆ ಖಾತರಿಪಡಿಸಿರುವರು. ಆದರೆ ಹೃದಯ ನಿಷ್ಠೆಯಿಂದ ಮಾಡಿದ ದುರೂದ್ ಮತ್ತು ಪ್ರಾರ್ಥನೆ ಆಗಿರಬೇಕೆಂಬುದು ಮಾತ್ರವಾಗಿದೆ ಅದಕ್ಕಿರುವ ನಿಬಂಧನೆ. ಹಝ್ರತ್ ಪೈಗಂಬರರ(ಸ) ಸ್ಥಾನ ಮತ್ತು ಪದವಿಯನ್ನು ಉನ್ನತಗೊಳಿಸಲು ಒಂದು ಕಳವಳ ಇರಬೇಕು. ಅಲ್ಲಾಹನ ಮುಂದೆ ನಿಷ್ಠೆಯಿಂದ ಕೂಡಿದ ಪ್ರಾರ್ಥನೆ ಇರಬೇಕು. ಅದು ದುಆದ ಬಗ್ಗೆ ಆಳವಾದ ಅರಿವು ಮತ್ತು ಅದರ ಯುಕ್ತಿಯ ಬಗ್ಗೆ ತಿಳಿಯುವುದರಿಂದ ಸಾಧ್ಯವಾಗುವುದು. ಈ ಬಗ್ಗೆ ನಾನು ಸಂಕ್ಷೇಪವಾಗಿ ಹೇಳುತ್ತೇನೆ. ದುಆ ಮಾಡುತ್ತಿದ್ದೇನೆ ಎಂದು ಅರಿತು ದುಆ ಮಾಡುವಾಗಲೇ ನೋವಿನಿಂದ ಕೂಡಿದ ದುಆ ಹೊರಡುತ್ತದೆ. ಬಾಯಿಯಿಂದ ಪದಗಳನ್ನು ಹೇಳುವುದರಿಂದ ಪದಗಳ ಆಳ ಮತ್ತು ಅದರ ಅರ್ಥದ ಬಗ್ಗೆ ತಿಳಿಯಲು ಸಾಧ್ಯವಿಲ್ಲ. ಅದು ಹೃದಯದಲ್ಲಿ ಪ್ರಭಾವವನ್ನು ಸಹ ಬೀರುವುದಿಲ್ಲ. ಹೃದಯದಲ್ಲಿ ಪ್ರಭಾವ ಬೀರದಿದ್ದರೆ ಆವೇಶ ಮತ್ತು ದುಃಖದ ಒಂದು ಅವಸ್ಥೆ ಉಂಟಾಗುವುದಿಲ್ಲ. ಆದ್ದರಿಂದ ದುಆ ಮಾಡುತ್ತಿರುವನೆಂದೂ ಏಕೆ ದುಆ ಮಾಡುತ್ತಿದ್ದೇನೆ ಎಂದೂ ಅರಿತುಕೊಂಡು ದುಆ ಮಾಡಿದರೆ ಅದು ಹೃದಯದಲ್ಲಿ ಪ್ರಭಾವವನ್ನು ಬೀರುತ್ತದೆ. ಕೋಟಿಗಟ್ಟಲೆ ಜನರು ಬಾಯಿಯಿಂದ ದುರೂದ್ ಪ್ರಾರ್ಥನೆಯ ಪದಗಳನ್ನು ಹೇಳುತ್ತಾರೆ. ಆದರೆ ಅದರ ಅರ್ಥ ಅವರಿಗೆ ಗೊತ್ತಿರುವುದಿಲ್ಲ. ದುರೂದ್ ಹೇಳುವುದರಿಂದ ನಮಗೆ ಇರುವ ಪ್ರಯೋಜನವೇನು ಮತ್ತು ಇದರಿಂದ ಹಝ್ರತ್ ಪೈಗಂಬರರಿಗೆ(ಸ) ಇರುವ ಪ್ರಯೋಜನವೇನೆಂದು ಅವರಿಗೆ ಗೊತ್ತಿರುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಬಾರಿ ಇದರ ಕುರಿತು ಹೇಳಿದ್ದರು. ಅದರ ಸಂಕ್ಷೇಪವನ್ನು ಅಲ್ಪಮಟ್ಟಿಗೆ ಹೇಳುತ್ತೇನೆ: ದುರೂದಿನಲ್ಲಿ **ಅಲ್ಲಾಹುಮ್ಮ ಸಲ್ಲಿ** ಎಂದು ಮೊದಲು ಇರಿಸಲಾಗಿದೆ. **ಅಲ್ಲಾಹುಮ್ಮ ಬಾರಿಕ್** ನಂತರ. ಸ್ವಲಾತಿನ ಅರ್ಥ ದುಆ ಎಂದಾಗಿದೆ. **ಅಲ್ಲಾಹುಮ್ಮ ಸಲ್ಲಿ** ಎಂಬುದರ ಅರ್ಥ, ಹೇ ಅಲ್ಲಾಹ್ ನೀನು ಹಝ್ರತ್ ಪೈಗಂಬರರಿಗೆ(ಸ) ದುಆ ಮಾಡು ಎಂದಾಗುತ್ತದೆ. ಅಲ್ಲಾಹನು ದುಆ ಮಾಡುತ್ತಾನೆ ಎಂದು ನಾವು ಅವನ ಬಗ್ಗೆ ಹೇಳುವುದರ ಅರ್ಥವೇನೆಂದರೆ, ನನ್ನ ದಾಸನಿಗೆ ನೆರವು ನೀಡು ಎಂದು ಅಲ್ಲಾಹನು ತಾನು ಸೃಷ್ಟಿಸಿದ ಎಲ್ಲ ವಸ್ತುಗಳೊಂದಿಗೆ ಹೇಳುತ್ತಾನೆ ಎಂದಾಗಿದೆ. ಒಟ್ಟಿನಲ್ಲಿ **ಅಲ್ಲಾಹುಮ್ಮ ಸಲ್ಲಿ** ಎಂಬುದರ ಅರ್ಥ, ಹೇ ಅಲ್ಲಾಹ್, ನೀನು ಎಲ್ಲ ರೀತಿಯ ಒಳಿತುಗಳನ್ನು ಹಝ್ರತ್ ಪೈಗಂಬರರಿಗೆ(ಸ) ಕೊಡಲು ಬಯಸುತ್ತಿರು ಮತ್ತು ಅವರಿಗೆ ಗೌರವ ಮತ್ತು ಶ್ರೇಷ್ಠತೆಯನ್ನು ನೀಡು, ಅವರ ಗೌರವಾದರಗಳನ್ನು ವರ್ಧಿಸುಕೊಡು ಎಂದಾಗಿದೆ. ಅಲ್ಲಾಹನು ನೀಡುವುದಕ್ಕಿಂತ ಶ್ರೇಷ್ಠವಾದುದು ಬೇರೆ ಏನೂ ಇಲ್ಲ. ಅಲ್ಲಾಹನು ಅವರಿಗಾಗಿ ಏನನ್ನು ಬಯಸುತ್ತಾನೆ ಎಂಬುದನ್ನು ಊಹಿಸಲು ಕೂಡ ನಮಗೆ ಸಾಧ್ಯವಲ್ಲ. ಹೀಗೆ ಅಲ್ಲಾಹನು ಏನನ್ನು ಬಯಸುತ್ತಾನೋ ಅದನ್ನು ಕೊಡು ಎಂದು ನಾವು ಅಲ್ಲಾಹನಲ್ಲಿ ದುಆ ಮಾಡುತ್ತೇವೆ. **ಅಲ್ಲಾಹುಮ್ಮ ಬಾರಿಕ್** ಎಂಬುದರ ಅರ್ಥ, ಹೇ ಅಲ್ಲಾಹ್, ಸಕಲ ಪ್ರಪಂಚದ ಕಾರುಣ್ಯಗಳು ಮತ್ತು ಅನುಗ್ರಹಗಳು ಒಟ್ಟುಗೂಡುವಷ್ಟು ನಿನ್ನ ಕೃಪೆಗಳನ್ನು, ಅನುಗ್ರಹಗಳನ್ನು ಮತ್ತು ವರದಾನಗಳನ್ನು ನೀನು ಹಝ್ರತ್ ಪೈಗಂಬರರಿಗಾಗಿ(ಸ) ಪ್ರದಾನಿಸು ಎಂದಾಗಿದೆ. ಒಟ್ಟಿನಲ್ಲಿ, ನಾವು ಹೃದಯದಲ್ಲಿ ನೋವನ್ನು ಇರಿಸುಕೊಂಡು ಹಝ್ರತ್ ಪೈಗಂಬರರ(ಸ) ಧರ್ಮದ ಏಳಿಗೆಗಾಗಿ ದುಆ ಮಾಡುವರಾದರೆ, ಅಲ್ಲಾಹನು ನಮ್ಮನ್ನು ಸಹ ಈ ದುಆಗಳಿಂದ ಮತ್ತು ದುರೂದ್‌ಗಳಿಂದ ಅನುಗ್ರಹಿಸುವನು. ಏಕೆಂದರೆ ಅದರಲ್ಲಿ ಉಮ್ಮತಿಗೂ ದುಆ ಇದೆ. ನಾವು ಬಿತ್ತುವ ಬೀಜದಿಂದ ಉಂಟಾಗುವ ಫಲದಿಂದ ನಾವು ಸಹ ಪ್ರಯೋಜನ ಪಡೆಯುವೆವು. (ಖುತ್‌ಬಾತೆ ಮಹ್ಮೂದ್, ಸಂಪುಟ-7, ಪುಟ-77-78)

ಆದರೆ, ನಿಬಂಧನೆಯೇನೆಂದರೆ, ಹಝ್ರತ್ ಪೈಗಂಬರರ(ಸ) ಅಧ್ಯಾಪನೆ ಪ್ರಕಾರ ನಡೆಯಬೇಕು ಮತ್ತು ಸೃಷ್ಟಿಗಳ ಹಕ್ಕುಗಳ ಕಡೆಗೆ ಗಮನಹರಿಸಬೇಕು ಮತ್ತು ಹಝ್ರತ್ ಪೈಗಂಬರರ(ಸ) ಕುಟುಂಬದ ಯಥಾರ್ಥ ಸದಸ್ಯರಾಗುವ ಯೋಗ್ಯತೆ ಇರಬೇಕು. ಅಲ್ಲಾಹನ ಮತ್ತು ಅವನ ಪ್ರವಾದಿಯ ಹೆಸರಲ್ಲಿ ದೌರ್ಜನ್ಯವನ್ನು ಮಾಡುವುದಲ್ಲ, ಕಾನೂನು ನಿಯಮಗಳನ್ನು ಲಂಘಿಸಿಕೊಂಡು, ಜನರಿಗೆ ತೊಂದರೆ ಕೊಟ್ಟು, ರೋಗಿಗಳು ಆಸ್ಪತ್ರೆಗಳಿಗೆ ಹೋಗದಂತೆ ರಸ್ತೆಗಳನ್ನು ತಡೆಗಟ್ಟಿಕೊಂಡು ನಾವು ಹಝ್ರತ್ ಪೈಗಂಬರರ(ಸ) ಪ್ರೇಮಿಗಳಾಗಿದ್ದೇವೆ ಎಂದು ಹೇಳಿಕೊಂಡು ದುರೂದ್ ಪ್ರಾರ್ಥನೆ ಮಾಡುತ್ತಾ ನಮ್ಮ ಬಗ್ಗೆ ಏನೂ ಹೇಳಬೇಡಿರಿ ಎಂದು ಹೇಳುವುದಲ್ಲ. ಇವೆಲ್ಲ ಸಂಗತಿಗಳು ಅಲ್ಲಾಹ್ ಮತ್ತು ಅವನ ಪ್ರವಾದಿಯ ಆಜ್ಞೆಗಳನ್ನು ಕಿಂಚಿತ್ತೂ ಅನುಸರಿಸದೇ ಇರುವುದಾಗಿದೆ. ಇದರ ಅನುಮತಿ ಅಲ್ಲಾಹನು ಅಥವಾ ಹಝ್ರತ್ ಪೈಗಂಬರ್(ಸ) ನೀಡಿಲ್ಲ. ಇಂತಹ ಜನರ ದುರೂದ್‌ನಿಂದ ಯಾವುದೇ ಪ್ರಯೋಜನವಿಲ್ಲ. ಇದಂತು ಹಝ್ರತ್ ಪೈಗಂಬರರ(ಸ) ಸ್ಥಾನ ಮತ್ತು ಪದವಿಯನ್ನು ವರ್ಧಿಸುವುದಕ್ಕೆ ಬದಲಾಗಿ ಕಡಿಮೆ ಮಾಡಲು ಇರುವ ಕೀಳುಮಟ್ಟದ ಪ್ರಯತ್ನವಾಗಿದೆ. ಇಸ್ಲಾಮಿಗೆ ಕೆಟ್ಟ ಹೆಸರನ್ನು ತರಲು ಇರುವ ಪ್ರಯತ್ನವಾಗಿದೆ.

ಒಟ್ಟಿನಲ್ಲಿ, ದುರೂದಿನ ಯಥಾರ್ಥ ಗ್ರಹಿಕೆ ಮತ್ತು ಅರಿವು ಇಂದು ಅಹ್ಮದಿಗಳು ಇತರರಿಗೆ ನೀಡಬೇಕು. ಆದ್ದರಿಂದ ಈ ರಮಝಾನಿನಲ್ಲಿ ದುರೂದ್ ಕಡೆಗೆ ಹೆಚ್ಚು ಗಮನಹರಿಸುವುದರೊಂದಿಗೆ ನಮ್ಮೊಳಗೆ ಪರಿಶುದ್ಧವಾದ ಪರಿವರ್ತನೆಗಳನ್ನು ಮಾಡಲು ಪ್ರಯತ್ನವನ್ನು ಮಾಡಬೇಕು. ಅದು ದುರೂದಿನ ಸ್ವೀಕಾರಕ್ಕೆ ಆವಶ್ಯಕವಾದುದಾಗಿದೆ. ಅದು ಸ್ವೀಕಾರವಾದರೆ ಅದರಿಂದ ಮನುಷ್ಯನಿಗೆಯೇ ಪ್ರಯೋಜನ ಲಭಿಸುತ್ತದೆ. ಅವನ ದುಆಗಳು ಸ್ವೀಕಾರವಾಗುತ್ತವೆ. ಅವನ ಆಧ್ಯಾತ್ಮಿಕ ಸ್ಥಿತಿ ಉತ್ತಮವಾಗುತ್ತದೆ. ಹಝ್ರತ್ ಪೈಗಂಬರರ(ಸ) ಪ್ರೇಮದಲ್ಲಿ ಯಥಾರ್ಥವಾದ ಅಭಿವೃದ್ಧಿಯುಂಟಾಗಿ ಮನುಷ್ಯನು ಅಲ್ಲಾಹನ ಯಥಾರ್ಥವಾದ ಸಾಮೀಪ್ಯವನ್ನು ಪಡೆಯುತ್ತಾನೆ. ನೈಜವಾದ ದುರೂದ್ ಹಝ್ರತ್ ಪೈಗಂಬರರಿಗೆ(ಸ) ತಲುಪಿಕೊಂಡು ಅದು ಅವರ ಉಮ್ಮತಿನ ಪ್ರಗತಿಗೆ ಕಾರಣವಾಗುತ್ತದೆ.

ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆಗಳನ್ನು ಮಾಡಲು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳೊಡನೆ ಹೇಳಿರುವುದರಿಂದಲೂ ದುರೂದ್ ಪ್ರಾರ್ಥನೆಯ ಪ್ರಾಮುಖ್ಯತೆಯ ಅಂದಾಜು ಇನ್ನೂ ಹೆಚ್ಚಾಗಿ ಗೊತ್ತಾಗುತ್ತದೆ. ಅಲ್ಲಾಹನು ಹೇಳುತ್ತಾನೆ: **ಇನ್ನಲ್ಲಾಹ ವ ಮಲಾಇಕತುಹೂ ಯುಸಲ್ಲೂನ ಅಲನ್ನಬಿಯ್ಯೀ. ಯಾ ಅಯ್ಯುಹಲ್ಲಧೀನ ಆಮನೂ ಸಲ್ಲೂ ಅಲೈಹಿ ವ ಸಲ್ಲಿಮೂ ತಸ್‌ಲೀಮ.** (ಅಲ್‌ಅಹ್‌ಝಾಬ್:57)

ಒಟ್ಟಿನಲ್ಲಿ, ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆಯನ್ನು ಮಾಡುವುದು ಎಷ್ಟು ಮುಖ್ಯವೆಂದರೆ, ಅಲ್ಲಾಹನು ಮತ್ತು ಅವನ ದೇವದೂತರು ಸಹ ಪ್ರವಾದಿಯ ಮೇಲೆ ದುರೂದ್ ವರ್ಷಿಸುತ್ತಾರೆ. ಇಲ್ಲಿ ಅಲ್ಲಾಹನು ದುರೂದ್ ಪ್ರಾರ್ಥನೆ ಮಾಡುವುದರ ಅರ್ಥವೇನೆಂದು ಸಹ ಸ್ಪಷ್ಟವಾಯಿತು. ಅಲ್ಲಾಹನು ಪ್ರತಿ ಕ್ಷಣ ಹಝ್ರತ್ ಪೈಗಂಬರರ(ಸ) ಪದವಿಗಳನ್ನು ಉನ್ನತಗೊಳಿಸುತ್ತಿರುತ್ತಾನೆ. ಅವರ ಶ್ರೇಷ್ಠತೆ ಮತ್ತು ಮಹಿಮೆಯನ್ನು ವರ್ಧಿಸುತ್ತಾ ಹೋಗುತ್ತಾನೆ. ಅಲ್ಲಾಹನು ಈ ಆಜ್ಞೆಯನ್ನು ಸರಿಯಾಗಿ ಪಾಲಿಸುತ್ತಾ ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆಯನ್ನು ಮಾಡುವ ಜವಾಬ್ದಾರಿಯನ್ನು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರ(ಅ) ಜಮಾಅತಿಗೆ ವಹಿಸಿ ಕೊಟ್ಟಿದ್ದಾನೆ. ಇದರಿಂದ ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುವೆವು, ದೇವದೂತರ ಪ್ರಾರ್ಥನೆಗಳಿಂದಲೂ ಪ್ರಯೋಜನ ಪಡೆಯುವೆವು. ಏಕೆಂದರೆ ಹಝ್ರತ್ ಪೈಗಂಬರರ(ಸ) ಮೇಲೆ ದೇವದೂತರು ದುರೂದ್ ಪ್ರಾರ್ಥನೆಗಳನ್ನು ಮಾಡುವಾಗ ಅದರ ಲಾಭ ಅವರ ಯಥಾರ್ಥ ಉಮ್ಮತಿಗೂ ಲಭಿಸುತ್ತದೆ. ಅವರನ್ನು ನಂಬುವವರಿಗೂ ಲಭಿಸುವುದು. ನಮಗೆ ಈ ಅನುಗ್ರಹಗಳು ಲಭಿಸುವಾಗ, ನಾವು ಕೃತಜ್ಞತೆಯ ರೂಪದಲ್ಲಿ ಹೆಚ್ಚು ದುರೂದ್ ಪ್ರಾರ್ಥನೆಗಳನ್ನು ಮಾಡಬೇಕು. ಈ ದುರೂದ್ ಮತ್ತು ಕೃತಜ್ಞತೆ ಎಂದಿಗೂ ಕೊನೆಗೊಳ್ಳದ ಒಂದು ಪರಂಪರೆಯಾಗಿದೆ. ಅದು ಯಥಾರ್ಥ ಸತ್ಯವಿಶ್ವಾಸಿಯನ್ನು ಅನುಗ್ರಹಿಸುತ್ತಾ ಹೋಗುವುದು.

ಹಝ್ರತ್ ಮಸೀಹ್ ಮೌಊದ್(ಅ) ಈ ವಚನವನ್ನು ವಿವರಿಸುತ್ತಾ ಹೇಳುತ್ತಾರೆ: ನಮ್ಮ ನೇತಾರರಾದ ಹಝ್ರತ್ ಪೈಗಂಬರರ(ಸ) ಸತ್ಯಸಂಧತೆ ಮತ್ತು ನಿಷ್ಠೆಯನ್ನು ನೋಡಿರಿ. ಅವರು ಪ್ರತಿಯೊಂದು ವಿಧದ ಕೆಟ್ಟ ಯೋಜನೆಗಳನ್ನು ಎದುರಿಸಿದರು. ಹಲವು ರೀತಿಯ ಆಪತ್ತುಗಳನ್ನು ಮತ್ತು ಕಷ್ಟತೆಗಳನ್ನು ಅನುಭವಿಸಿದರು. ಆದರೆ ಅದರ ಪರಿವೆ ಮಾಡಲಿಲ್ಲ. ಇದೇ ಸತ್ಯಸಂಧತೆ ಮತ್ತು ನಿಷ್ಠೆಯ ಕಾರಣದಿಂದ ಅಲ್ಲಾಹನು ಅನುಗ್ರಹಿಸಿದನು. ಆದ್ದರಿಂದಲೇ ಅಲ್ಲಾಹನು ಹೇಳಿದನು: **ಇನ್ನಲ್ಲಾಹ ವ ಮಲಾಇಕತುಹೂ ಯುಸಲ್ಲೂನ ಅಲನ್ನಬಿಯ್ಯೀ ಯಾ ಅಯ್ಯುಹಧೀನ ಆಮನೂ ಸಲ್ಲೂ ಅಲೈಹಿ ವಸಲ್ಲಿಮೂ ತಸ್ಲೀಮ.** ಎಂದರೆ, ಅಲ್ಲಾಹನು ಮತ್ತು ಅವನ ಎಲ್ಲ ದೇವದೂತರು ಪೈಗಂಬರರ(ಸ) ಮೇಲೆ ದುರೂದ್ ವರ್ಷಿಸುತ್ತಾರೆ. ಎಲೈ ಸತ್ಯವಿಶ್ವಾಸಿಗಳೇ, ನೀವು ಸಹ ಈ ಪ್ರವಾದಿಯ ಮೇಲೆ ದುರೂದ್ ಪ್ರಾರ್ಥನೆಯನ್ನು ಮಾಡಿರಿ. ಈ ವಚನದಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಪೈಗಂಬರರ(ಸ) ಸತ್ಕರ್ಮಗಳು ಹೇಗಿತ್ತೆಂದರೆ, ಅಲ್ಲಾಹನು ಅವರ ಪ್ರಶಂಸೆ ಮತ್ತು ಸ್ವಭಾವ ಗುಣವೈಶಿಷ್ಟ್ಯಗಳನ್ನು ಸಂಪೂರ್ಣವಾಗಿ ವಿವರಿಸಲಿಕ್ಕಾಗಿ ಒಂದು ವಿಶೇಷವಾದ ಪದವನ್ನು ಪ್ರಯೋಗಿಸಲಿಲ್ಲ. ಎಂದರೆ, ಅವರ ಸತ್ಕರ್ಮಗಳು ಪ್ರಶಂಸೆಯ ಪರಿಮಿತಿಯಲ್ಲಿ ನಿಲುಕುವಂತದ್ದಾಗಿರಲಿಲ್ಲ. ಈ ರೀತಿಯ ಆಯತ್ತನ್ನು ಬೇರೆ ಯಾವುದೇ ಪ್ರವಾದಿಯ ಪರವಾಗಿ ಉಪಯೋಗಿಸಲಿಲ್ಲ. ಅವರ ಆತ್ಮದಲ್ಲಿ ಸತ್ಯ ಮತ್ತು ಪರಿಶುದ್ಧತೆಯಿತ್ತು. ಹಝ್ರತ್ ಪೈಗಂಬರರ(ಸ) ಸತ್ಕರ್ಮಗಳು ಅಲ್ಲಾಹನ ದೃಷ್ಟಿಯಲ್ಲಿ ಎಷ್ಟು ಪ್ರಿಯಕರವಾಗಿತ್ತು ಎಂದರೆ, ಇನ್ನು ಮುಂದೆ ಜನರು ಕೃತಜ್ಞತೆಯ ರೂಪದಲ್ಲಿ ಹಝ್ರತ್ ಪೈಗಂಬರರ(ಸ) ಮೇಲೆ ಯಾವಾಗಲೂ ದುರೂದ್ ಪ್ರಾರ್ಥನೆಗಳನ್ನು ಮಾಡಬೇಕೆಂದು ಅಲ್ಲಾಹನು ಆಜ್ಞಾಪಿಸಿದನು. (ಮಲ್‌ಫೂಝಾತ್, ಸಂಪುಟ–1, ಪುಟ–37–38)

ಒಟ್ಟಿನಲ್ಲಿ ಈ ಕೃತಜ್ಞತೆ ಕೊನೆಗೆ ನಮಗೆಯೇ ಪ್ರಯೋಜನವನ್ನು ನೀಡುವುದು. ಈ ರಮಝಾನಿನಲ್ಲೂ ಅನಂತರವೂ ದುರೂದ್ ಪ್ರಾರ್ಥನೆಯ ಪ್ರಾಮುಖ್ಯತೆಯನ್ನು ಅರಿಯುತ್ತಾ ಸದಾ ದುರೂದ್ ಪ್ರಾರ್ಥನೆ ಮಾಡುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುಮ್ಮಜೀದ್.**

ನಾನು ನಿಮ್ಮ ಗಮನವನ್ನು ವಿಶೇಷವಾಗಿ ಸೆಳೆಯಲು ಬಯಸುವ ಎರಡನೇ ಸಂಗತಿ ಇಸ್ತಿಗ್‌ಫಾರ್ ಆಗಿದೆ. **ಅಸ್ತಗ್‌ಫಿರುಲ್ಲಾಹಿ ರಬ್ಬೀ ಮಿನ್‌ಕುಲ್ಲಿ ಧಂಬಿ ಅ ಅತೂಬಿ ಇಲೈಹಿ** ಎಂದರೆ, ನಾನು ಸಕಲ ಪಾಪಗಳಿಂದ, ನನ್ನ ಪರಿಪಾಲಕನಾದ ಅಲ್ಲಾಹನಲ್ಲಿ ಕ್ಷಮೆ ಯಾಚಿಸುತ್ತೇನೆ. ಅವನೆಡೆಗೆ ಪಶ್ಚಾತ್ತಾಪ ಮಾಡುತ್ತಾ ಬಾಗುತ್ತೇನೆ. ಈ ದುಆ ಅತ್ಯಂತ ಮುಖ್ಯವಾದ ಪ್ರಾರ್ಥನೆಯಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಈ ಕುರಿತು ಹೇಳುತ್ತಾರೆ:

ಮಾನುಷಿಕವಾದ ಯಾವುದೇ ದೌರ್ಬಲ್ಯ ಪ್ರಕಟವಾಗಬಾರದೆಂದೂ ಮತ್ತು ಅಲ್ಲಾಹನು ನಮ್ಮನ್ನು ಅವನ ಶಕ್ತಿಯ ಸಹಾಯ ಮತ್ತು ನೆರವಿನಿಂದ ಸುರಕ್ಷಿತಗೊಳಿಸು ಎಂದು ಅಲ್ಲಾಹನೊಡನೆ ವಿನಂತಿಸುವುದನ್ನು ಯಥಾರ್ಥ ಮತ್ತು ನೈಜವಾದ ಅರ್ಥದಲ್ಲಿ ಇಸ್ತಿಗ್‌ಫಾರ್" ಎಂದು ಹೇಳಲಾಗುತ್ತದೆ. ಇಸ್ತಿಗ್‌ಫಾರ್ ಎಂಬುದು ಗ್ಫರ ಎಂಬ ಮೂಲಪದದಿಂದ ಬಂದದ್ದಾಗಿದೆ. ಅದರ ಅರ್ಥ ಮುಚ್ಚುವುದು ಅಥವಾ ಮರೆಸುವುದು ಎಂದಾಗಿದೆ. ಆದ್ದರಿಂದ ಇಸ್ತಿಗ್‌ಫಾರ್ ಎಂದರೆ, ಅಲ್ಲಾಹನು ತನ್ನ ಶಕ್ತಿ ಮತ್ತು ಸಾಮರ್ಥ್ಯದಿಂದ ಯಾಚನೆ ಮಾಡುವವನ ಮನುಷ್ಯ ಸಹಜವಾದ ದೌರ್ಬಲ್ಯಗಳನ್ನು ಮರೆಸು ಎಂದಾಗಿದೆ. ಆದರೆ ಸಾಮಾನ್ಯ ಜನರಿಗಾಗಿ ಈ ಪದದ ಅರ್ಥವನ್ನು ವಿಸ್ತೀರ್ಣಗೊಳಿಸಲಾಗಿದೆ. ಹೀಗೆ ಮಾಡಲಾದ ಪಾಪಗಳನ್ನು ಸಹ ಮರೆಸು ಎಂದು ಅಲ್ಲಾಹನಲ್ಲಿ ಪ್ರಾರ್ಥಿಸುವುದನ್ನೂ ಇಸ್ತಿಗ್‌ಫಾರ್ ಎಂದು ಹೇಳಲಾಗುತ್ತದೆ. ಆದರೆ ಅಲ್ಲಾಹನು ತನ್ನ ದೈವಿಕ ಶಕ್ತಿಯಿಂದ ಯಾಚಿಸುವವನ ಸಹಜ ದೌರ್ಬಲ್ಯಗಳಿಂದ ರಕ್ಷಿಸು, ಅವನ ಶಕ್ತಿಯಿಂದ ನಮಗೆ ಶಕ್ತಿ ನೀಡು, ಅವನ ಅರಿವಿನಿಂದ ಅರಿವು ನೀಡು, ಅವನ ಬೆಳಕಿನಿಂದ ಬೆಳಕು ನೀಡು ಎಂದಾಗಿದೆ ಇದರ ಯಥಾರ್ಥ ಮತ್ತು ನೈಜವಾದ ಅರ್ಥ. ಏಕೆಂದರೆ, ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿ ಅವನಿಂದ ದೂರ ಹೋಗುವುದಿಲ್ಲ. ಅಲ್ಲಾಹನು ಮನುಷ್ಯನ ಸೃಷ್ಟಿಕರ್ತ ಮತ್ತು ಅವನ ಆಂತರಿಕವಾದ ಹಾಗೂ ಬಾಹ್ಯವಾದ ಎಲ್ಲ ಶಕ್ತಿಗಳ ಸೃಷ್ಟಿಕರ್ತನಾಗಿರುವ ಹಾಗೆಯೇ ಅಲ್ಲಾಹನು ಮನುಷ್ಯನ **ಖಯ್ಯೂಮ್** ಸಹ ಆಗಿದ್ದಾನೆ. ಎಂದರೆ, ಅವನು ಸೃಷ್ಟಿಸಿದ ಎಲ್ಲವನ್ನು ಅವನ ವಿಶೇಷವಾದ ನೆರವಿನಿಂದ ಸುರಕ್ಷಿತಗೊಳಿಸುವವನೂ ನೆಲೆನಿಲ್ಲಿಸುವವನೂ ಆಗಿದ್ದಾನೆ. ಅಲ್ಲಾಹನ ಒಂದು ಗುಣನಾಮ **ಖಯ್ಯೂಮ್**, ಎಂದರೆ ತನ್ನ ನೆರವಿನಿಂದ ಸೃಷ್ಟಿಗಳನ್ನು ನೆಲೆನಿಲ್ಲಿಸುವವನು ಎಂದಾಗಿರುವಾಗ, ಸೃಷ್ಟಿಕರ್ತನಾದ ಅಲ್ಲಾಹನಿಂದ ಸೃಷ್ಟಿಸಲ್ಪಟ್ಟ ಮನುಷ್ಯನು ಅಲ್ಲಾಹನ ಖಯ್ಯೂಮ್ ಎಂಬ ಗುಣದಿಂದ ಪ್ರಯೋಜನ ಪಡೆಯುತ್ತಾ ಹಾಳಾಗುವುದರಿಂದ ರಕ್ಷಣೆ ಪಡೆಯಬೇಕು. ಆದ್ದರಿಂದ ಮನುಷ್ಯನ ಈ ಸಹಜವಾದ ಆವಶ್ಯಕತೆಯನ್ನು ಪೂರೈಸಲು ಇಸ್ತಿಗ್‌ಫಾರ್ ಮಾಡಲು ಉಪದೇಶಿಸಲಾಗಿದೆ. ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಈ ರೀತಿಯಲ್ಲಿ ಸೂಚನೆ ನೀಡಲಾಗಿದೆ. **ಅಲ್ಲಾಹು ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಖಯ್ಯೂಂ.** ಎಂದರೆ, ಅವನು ಸೃಷ್ಟಿಕರ್ತನು ಮಾತ್ರವಲ್ಲ, ಅವನು ಎಲ್ಲವನ್ನು ನೆಲೆನಿಲ್ಲಿಸುವವನೂ ಆಗಿದ್ದಾನೆ. ಮನುಷ್ಯನನ್ನು ಸೃಷ್ಟಿಸಲಾಗುವಾಗ ಸೃಷ್ಟಿ ಮಾಡುವ ಕೆಲಸ ಈಡೇರುತ್ತದೆ. ಆದರೆ ನೆಲೆ ನಿಲ್ಲಿಸುವ ಕೆಲಸ ಸದಾ ಇರುತ್ತದೆ. ಆದ್ದರಿಂದ ಯಾವಾಗಲೂ ಇಸ್ತಿಗ್‌ಫಾರ್ ಮಾಡುವ ಅಥವಾ ಕ್ಷಮೆಯಾಚಿಸುವ ಆವಶ್ಯಕತೆಯಿದೆ. ತಮ್ಮ ಸ್ಥಿತಿಗತಿಗಳು ಹಾಳಾಗದಂತೆ ಇರಲು, ಮನುಷ್ಯನು ಯಾವಾಗಲೂ ಇಸ್ತಿಗ್‌ಫಾರ್ ಮಾಡುತ್ತಾ ಅಲ್ಲಾಹನ ಸದಾ ನೆಲೆನಿಲ್ಲಿಸುವವನು ಎಂಬ ಗುಣನಾಮದಿಂದ ಪ್ರಯೋಜನ ಪಡೆಯಬೇಕಾಗುತ್ತದೆ. ಒಟ್ಟಿನಲ್ಲಿ ಅಲ್ಲಾಹನ ಪ್ರತಿಯೊಂದು ಗುಣದಲ್ಲಿ ಒಂದು ಅನುಗ್ರಹವಿದೆ. ಇಸ್ತಿಗ್‌ಫಾರ್ ಅಥವಾ ಕ್ಷಮೆಯಾಚನೆ ಎಂಬುದು ಅಲ್ಲಾಹನ ಸದಾ ನೆಲೆನಿಲ್ಲಿಸುವವನು ಎಂಬ ಅನುಗ್ರಹದಿಂದ ಪ್ರಯೋಜನ ಪಡೆಯಲಿಕ್ಕಾಗಿದೆ. ಇದರ ಕಡೆಗೆ ಸೂರಃ ಫಾತಿಹದ **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್** ಎಂಬ ವಚನ ಬೊಟ್ಟು ಮಾಡುತ್ತದೆ. ಎಂದರೆ ನಾವು ನಿನ್ನನ್ನೇ ಆರಾಧಿಸುತ್ತೇವೆ ಹಾಗೂ ನಿನ್ನ ಖಯ್ಯೂಮಿಯ್ಯತ್ ಎಂದರೆ, ಸದಾ ನೆಲೆನಿಲ್ಲಿಸುವವನು ಮತ್ತು ರುಬೂಬಿಯ್ಯತ್ ಎಂದರೆ ಪರಿಪಾಲಕನು ಎಂಬ ಗುಣದಿಂದ ನಮಗೆ ಸಹಾಯ ಮಾಡು ಹಾಗೂ ನಮ್ಮನ್ನು ಎಡವಿ ಬೀಳುವುದರಿಂದ ರಕ್ಷಿಸು. ದೌರ್ಬಲ್ಯವುಂಟಾಗಿ ನಾವು ನಿನ್ನ ಆರಾಧನೆ ಮಾಡಲು ಸಾಧ್ಯವಾಗದಂತೆ ಆಗದಿರಲಿ. (ಅಸ್ಮತೆ ಅಂಬಿಯಾ, ರೂಹಾನಿ ಖಝಾಇನ್, ಸಂಪುಟ–18, ಪುಟ–671–672)

ಒಟ್ಟಿನಲ್ಲಿ, ಆರಾಧನೆಗಳನ್ನು ಮಾಡಲು, ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು, ಅಲ್ಲಾಹನ ಆಜ್ಞೆಗಳನ್ನು ಪಾಲಿಸಲಿಕ್ಕಾಗಿ ಇಸ್ತಿಗ್‌ಫಾರ್ ಅಥವಾ ಕ್ಷಮಾಯಾಚನೆ ಮಾಡುವುದು ಅತ್ಯಂತ ಮುಖ್ಯವಾದ ಕಾರ್ಯವಾಗಿದೆ. ಏನಾದರೂ ಪಾಪ ಮಾಡಿದರೆ ಮಾತ್ರ ಇಸ್ತಿಗ್‌ಫಾರ್ ಮಾಡುವುದಲ್ಲ. ನಿಸ್ಸಂಶಯವಾಗಿಯೂ ಆಗಲೂ ಬಹಳ ಕ್ಷಮೆಯಾಚನೆ ಮತ್ತು ಪಶ್ಚಾತ್ತಾಪ ಮಾಡಬೇಕು. ಏಕೆಂದರೆ, ಮುಂದೆ ಆಗಬಹುದಾದ ಪಾಪಗಳಿಂದ ರಕ್ಷಣೆ ಪಡೆಯಲು ಮತ್ತು ಹಿಂದೆ ಮಾಡಿದ ಪಾಪಗಳು ಕ್ಷಮಿಸುವಂತೆ ಆಗಲು ಇಸ್ತಿಗ್‌ಫಾರ್ ಮಾಡಬೇಕಾಗುತ್ತದೆ. ಇದರಿಂದ ಅಲ್ಲಾಹನ ಸಹಾಯ ಲಭಿಸುತ್ತದೆ. ಪಾಪಗಳನ್ನು ಮಾಡಿದರೂ ಮಾಡದಿದ್ದರೂ ಎರಡೂ ಸ್ಥಿತಿಗಳಲ್ಲೂ ಇಸ್ತಿಗ್‌ಫಾರ್ ಮಾಡುವುದು ಬಹಳ ಮುಖ್ಯವಾದ ಸಂಗತಿಯಾಗಿದೆ. ಶೈತಾನನು ನಮ್ಮ ಮಾರ್ಗದಲ್ಲಿ ನಿಂತಿದ್ದಾನೆ. ಮನುಷ್ಯನು ತನ್ನ ಪ್ರಯತ್ನಗಳ ಮೂಲಕ ಶೈತಾನನಿಂದ ರಕ್ಷಣೆ ಪಡೆಯಲು ಸಾಧ್ಯವಲ್ಲ. ಅಲ್ಲಾಹನಿಂದ ಸಹಾಯ ಕೇಳುವುದೇ ಇದಕ್ಕಿರುವ ಏಕ ಮಾರ್ಗವಾಗಿದೆ. ಅಲ್ಲಾಹನ ಸಹಾಯವನ್ನು ಪಡೆಯಲು ಮತ್ತು ಯಾಚಿಸಲು ಬಹಳವಾಗಿ ಇಸ್ತಿಗ್‌ಫಾರ್ ಮಾಡಬೇಕೆಂದು ಅಲ್ಲಾಹನು ಹೇಳಿದ್ದಾನೆ. ಇದರ ಮೂಲಕವೇ ಶೈತಾನನ ಮುಂದಿನ ಆಕ್ರಮಣಗಳಿಂದ ಸುರಕ್ಷಿತಗೊಳ್ಳಬಹುದಾಗಿದೆ ಮತ್ತು ಹಿಂದಿನ ಪಾಪಗಳು ಕ್ಷಮಿಸಲ್ಪಡುವುವು. ಮನುಷ್ಯನು ಬಹಳ ದುರ್ಬಲನಾಗಿದ್ದಾನೆ, ಆದ್ದರಿಂದ ಇಸ್ತಿಗ್‌ಫಾರ್ ಬಹಳ ಮುಖ್ಯ. ಏಕೆಂದರೆ ಇಸ್ತಿಗ್‌ಫಾರ್ ನಮಗೆ ಶಕ್ತಿ ನೀಡುತ್ತದೆ. ಮಾನುಷಿಕವಾದ ದೌರ್ಬಲ್ಯಗಳಿಂದ ರಕ್ಷಣೆ ಪಡೆಯಲು ಮತ್ತು ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲಿಕ್ಕಾಗಿ ಇಸ್ತಿಗ್‌ಫಾರ್ ಶಕ್ತಿ ನೀಡುತ್ತದೆ. ಆದ್ದರಿಂದ ನಿರಂತರವಾಗಿ ಇಸ್ತಿಗ್‌ಫಾರ್ ಮಾಡುವುದರಿಂದ ಅಲ್ಲಾಹನು **ಖಯ್ಯೂಮಿಯತ್** ಎಂದರೆ ಸದಾ ನೆಲೆನಿಲ್ಲಿಸುವವನು ಎಂಬ ಗುಣ ನಿಮ್ಮ ಮೇಲೆ ಕೆಲಸ ಮಾಡಲು ಶುರುಮಾಡುವುದು ಮತ್ತು ಇಸ್ತಿಗ್‌ಫಾರ್ ಮಾಡುವವನು ಎಲ್ಲ ಪಾಪಗಳು ಮತ್ತು ಕೆಡುಕುಗಳಿಂದ ಸುರಕ್ಷಿತಗೊಳ್ಳುವನು. ಅಲ್ಲಾಹನು ತನ್ನ ಕಡೆಗೆ ಬರುವವನನ್ನು ತನ್ನ ಕಡೆಗೆ ಜೋಡಿಸಿಡುತ್ತಾನೆ. ಒಬ್ಬ ವ್ಯಕ್ತಿ ಪಾಪಗಳನ್ನು ಮಾಡಿದ ನಂತರ ಪಶ್ಚಾತ್ತಾಪವನ್ನು ಮಾಡುತ್ತಾ ಅಲ್ಲಾಹನ ಕಡೆಗೆ ಬರುವಾಗ ಅಲ್ಲಾಹನು ಅವನ ಪಶ್ಚಾತ್ತಾಪವನ್ನು ಸ್ವೀಕಾರ ಮಾಡುತ್ತಾನೆ. ಅದೇ ರೀತಿಯಲ್ಲಿ ಪಾಪಗಳಿಂದ ರಕ್ಷಣೆ ಪಡೆಯಲು ಮತ್ತು ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಅವನ ಕಡೆಗೆ ಓಡಿಹೋಗುವವನ ಇಸ್ತಿಗ್‌ಫಾರ್ ಪ್ರಾರ್ಥನೆಯನ್ನು ಸಹ ಅಲ್ಲಾಹನು ಸ್ವೀಕರಿಸುತ್ತಾನೆ. ಅವನನ್ನು ಶೈತಾನನ ಆಕ್ರಮಣಗಳಿಂದ ರಕ್ಷಿಸುತ್ತಾನೆ. ಅಲ್ಲಾಹನ ಕಾರುಣ್ಯ ಮತ್ತು ಕ್ಷಮಿಸುವ ಗುಣ ಎಷ್ಟು ಹೆಚ್ಚಿಗೆ ಇವೆ ಎಂಬುದರ ಬಗ್ಗೆ ಅಲ್ಲಾಹನು ಸ್ವತಃ ಹೇಳಿದ್ದೇನೆಂದರೆ, ಅದು ಎಲ್ಲ ವಸ್ತುಗಳನ್ನು ಆವರಿಸಿದೆ. ಎಂದರೆ ಎಲ್ಲಕ್ಕಿಂತ ಮೇಲೆ ಅಲ್ಲಾಹನ ಕಾರುಣ್ಯವೆಂಬ ಗುಣವಿದೆ. ಇದರ ಬಗ್ಗೆ ಹಝ್ರತ್ ಪೈಗಂಬರ್(ಸ) ಒಂದು ಕಥೆಯ ರೂಪದಲ್ಲಿ ನಮಗೆ ಹೇಳಿಕೊಟ್ಟಿದ್ದಾರೆ: ಒಬ್ಬ ವ್ಯಕ್ತಿ ತೊಂಬತ್ತೊಂಬತ್ತು ಕೊಲೆಗಳನ್ನು ಮಾಡುತ್ತಾನೆ. ಕೊನೆಗೆ ಲಜ್ಜಿತನಾಗಿ ಪಶ್ಚಾತ್ತಾಪ ಮಾಡುವ ಚಿಂತೆ ಅವನಿಗೆ ಬಂತು. ಕೊನೆಗೆ ಒಬ್ಬ ಪಂಡಿತನ ಬಳಿಗೆ ಹೋದನು. ಅವರೊಡನೆ ತೌಬ ಮಾಡುವುದರ ಬಗ್ಗೆ, ಪಶ್ಚಾತ್ತಾಪ ಮಾಡುವುದರ ಬಗ್ಗೆ ಕೇಳುತ್ತಾನೆ. ಪಂಡಿತ

ಹೇಳಿದರು: ಇಷ್ಟೆಲ್ಲ ಪಾಪಗಳನ್ನು ಮಾಡಿದ ನಂತರ ಮತ್ತು ಇಷ್ಟೆಲ್ಲ ಕೊಲೆಗಳನ್ನು ಮಾಡಿದ ನಂತರ ನಿನ್ನನ್ನು ಅಲ್ಲಾಹನು ಹೇಗೆ ಕ್ಷಮಿಸುವುದು? ಇದನ್ನು ಕೇಳಿದ ವ್ಯಕ್ತಿ ಆ ಪಂಡಿತನನ್ನು ಸಹ ಕೊಲೆ ಮಾಡುತ್ತಾನೆ. ಹೀಗೆ ನೂರು ಕೊಲೆಗಳು ಭರ್ತಿಯಾಗುತ್ತದೆ. ನೂರು ಕೊಲೆ ಮಾಡಿದ ನಂತರ, 'ನಾನು ಎಂತಹ ಕೆಲಸ ಮಾಡಿದೆ' ಎಂದು ಯೋಚಿಸಿ ಅವನಗೆ ಪುನಃ ಪಶ್ಚಾತ್ತಾಪ ಮಾಡುವ ಭಾವನೆ ಉಂಟಾಗುತ್ತದೆ. ಅನಂತರ ಮತ್ತೊಬ್ಬ ಹಿರಿಯ ಪಂಡಿತನ ಬಳಿಗೆ ಹೋದನು. ಅವರೊಡನೆ ಇದರ ಬಗ್ಗೆ ಹೇಳಿದನು. ಆ ಪಂಡಿತರು ಹೇಳಿದರು: ಹೌದು ಪಶ್ಚಾತ್ತಾಪದ ಬಾಗಿಲು ಸದಾ ತೆರೆದಿದೆ ಎಂದು ಅಲ್ಲಾಹನು ಹೇಳಿದ್ದಾನೆ. ನೀನು ನಿಜವಾಗಿಯೂ ಪಶ್ಚಾತ್ತಾಪ ಮಾಡಲು ಬಯಸುವನಾದರೆ, ಕೇಳು, ನೀನು ಇಂತಿಂತಹ ಪ್ರದೇಶಕ್ಕೆ ಹೋಗು. ಅಲ್ಲಿ ಜನರು ಆರಾಧನೆಯಲ್ಲಿ ನಿರತರಾಗಿದ್ದಾರೆ, ಧಾರ್ಮಿಕ ಕೆಲಸಗಳನ್ನು ಮಾಡುತ್ತಿರಬಹುದು. ನೀನು ಅವರೊಂದಿಗೆ ಸೇರಿಕೊಳ್ಳು. ಆದರೆ ನೆನಪಿಡು, ಪುನಃ ನಿನ್ನ ಪ್ರದೇಶಕ್ಕೆ ಮರಳಿ ಹೋಗಬಾರದು. ಪಾಪಗಳಿಗೆ ಕಾರಣವಾಗುವ ಹಳೆಯ ಸಂಪರ್ಕ ಮತ್ತು ಮಾರ್ಗಗಳನ್ನು ಕೊನೆಗೊಳಿಸುವುದು ಮತ್ತು ಕಡಿತಗೊಳಿಸುವುದರಿಂದ ನೈಜವಾದ ಪಶ್ಚಾತ್ತಾಪ ಮಾಡಲು ಸಾಧ್ಯವಾಗುವುದು. ಹೀಗೆ ಅವನು ಸಜ್ಜನರು ಇದ್ದ ಪ್ರದೇಶದ ಮಾರ್ಗದ ಕಡೆಗೆ ತೆರಳಿದನು. ಪ್ರದೇಶಕ್ಕೆ ತಲುಪಲು ಇನ್ನೂ ಅರ್ಧದಷ್ಟು ಬಾಕಿಯಿರುವಾಗಲೇ ಅವನು ಮೃತಪಟ್ಟನು. ಮೃತಪಟ್ಟಾಗ, ಕಾರುಣ್ಯ ಮತ್ತು ಶಿಕ್ಷೆಯ ದೇವದೂತರು ಅಲ್ಲಿಗೆ ತಲುಪಿದರು. ಅವನನ್ನು ನಾನು ಕೊಂಡುಹೋಗುತ್ತೇನೆ ಎಂದು ಹೇಳಿ ಇಬ್ಬರೂ ಪರಸ್ಪರ ಜಗಳಮಾಡಲು ತೊಡಗಿದರು. ಅವನು ಪಶ್ಚಾತ್ತಾಪ ಮಾಡಿದ್ದಾನೆ, ಆದ್ದರಿಂದ ನಾನು ಅವನನ್ನು ಸ್ವರ್ಗಕ್ಕೆ ಕೊಂಡು ಹೋಗುವೆನು ಎಂದು ಕಾರುಣ್ಯದ ದೇವದೂತ ಹೇಳುತ್ತಿದ್ದರು. ಅವನು ಜೀವನದಲ್ಲಿ ಯಾವುದೇ ಸತ್ಕರ್ಮವನ್ನು ಮಾಡಿಲ್ಲ, ಅವನು ಹೇಗೆ ಸ್ವರ್ಗಕ್ಕೆ ಹೋಗುವನು, ಅವನು ಕ್ಷಮಿಸಲ್ಪಡಲಾರನು ಎಂದು ಶಿಕ್ಷೆಯ ದೇವದೂತ ಹೇಳುತ್ತಿದ್ದರು. ಅಷ್ಟರಲ್ಲಿ, ಮೂರನೆಯವನಾಗಿ ಒಬ್ಬ ದೇವದೂತ ಬಂದರು. ಈ ಸ್ಥಿತಿಯಲ್ಲಿ ಅವರು ಮಧ್ಯಸ್ಥರಾಗಿ ನಿಂತರು. ಅವರು ಹೀಗೆ ತೀರ್ಮಾನ ಮಾಡಿದರು: ಆ ವ್ಯಕ್ತಿ ಹೊರಟಿದ ಪ್ರದೇಶದಿಂದ ಅವನು ಮೃತಪಟ್ಟಿದ ಪ್ರದೇಶದ ತನಕದ ದೂರ ಮತ್ತು ಅವನು ಮೃತಪಟ್ಟ ಪ್ರದೇಶದಿಂದ ಅವನು ಹೋಗಲಿದ್ದ ಪ್ರದೇಶದ ವರೆಗೆ ಇರುವ ದೂರ. ಇವರೆಡನ್ನೂ ಅಳತೆ ಮಾಡಬೇಕು. ಅವನು ಯಾವ ಪ್ರದೇಶಕ್ಕೆ ಹೆಚ್ಚು ಸಮೀಪವಾಗಿರುವನೋ ಅವನನ್ನು ಅಲ್ಲಿಗೆ ಕೊಂಡು ಹೋಗಬೇಕೆಂದು ತೀರ್ಮಾನಿಸಲಾಯಿತು. ಹೀಗೆ ನೋಡಲಾದಾಗ, ಪಾಪಗಳಿಂದ ಪಶ್ಚಾತ್ತಾಪ ಮಾಡಲು ಮತ್ತು ಸತ್ಕರ್ಮಗಳನ್ನು ಮಾಡಲು ಅವನು ಹೋಗುತ್ತಿದ್ದ ಪ್ರದೇಶ ಹೆಚ್ಚು ಸಮೀಪವಾಗಿತ್ತು. ಆದ್ದರಿಂದ ಕಾರುಣ್ಯದ ದೇವದೂತ ಅವನನ್ನು ಸ್ವರ್ಗಕ್ಕೆ ಕೊಂಡುಹೋದರು. (ಸಹೀಹ್ ಮುಸ್ಲಿಮ್, ಕಿತಾಬುತ್ತೌಬ, ಹದೀಸ್–7008)

ಇದಾಗಿದೆ ಅಲ್ಲಾಹನು ನಮ್ಮನ್ನು ಕ್ಷಮಿಸಲು ಮಾಡುವ ಏರ್ಪಾಡು. ಅತ್ಯಂತ ದೌರ್ಜನ್ಯವಂತನೂ ಕೊಲೆಗಾರನೂ ಆದ ವ್ಯಕ್ತಿ ಉತ್ತಮ ಸ್ಥಿತಿಯಲ್ಲಿರುವಾಗಲೇ ಪಶ್ಚಾತ್ತಾಪ ಮಾಡಿದಾಗ, ಅಲ್ಲಾಹನು ಅವನನ್ನು ಕ್ಷಮಿಸಲು ಏರ್ಪಾಡು ಮಾಡಿದನು. ಅಲ್ಲಾಹನು ಎಷ್ಟರ ಮಟ್ಟಿಗೆ ಕ್ಷಮಿಸುವನು ಎಂದು ಮಕ್ಕಳು ಮತ್ತು ಯುವಕರು ಇತ್ತೀಚಿನ ದಿನಗಳಲ್ಲಿ ಕೇಳುತ್ತಿರುತ್ತಾರೆ. ಈ ಹದೀಸ್‌ನಿಂದ ಇದು ಸ್ಪಷ್ಟವಾಗುತ್ತದೆ. ಅಲ್ಲಾಹನು ಹೇಳುತ್ತಾನೆ: ನಾನು ಪಶ್ಚಾತ್ತಾಪವನ್ನು ಸ್ವೀಕರಿಸುತ್ತೇನೆ, ನನ್ನ ಕಾರುಣ್ಯ ಬಹಳ ವಿಶಾಲವಾದುದಾಗಿದೆ. ಅದಕ್ಕೆ ಯಾವುದೇ ಮಿತಿಯಿಲ್ಲ. ಆದರೆ ಮನುಷ್ಯನು ನಿಜವಾಗಿಯೂ ಪಶ್ಚಾತ್ತಾಪ ಮಾಡಬೇಕು ಎಂಬುದಾಗಿದೆ ಅದರ ನಿಬಂಧನೆ ಅಥವಾ ಶರತ್ತು. ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಾಣೆ, ಮರುಭೂಮಿಯಲ್ಲಿ ಕಾಣೆಯಾದ ಒಂಟೆ ಮರಳಿ ಪತ್ತೆಯಾಗುವಾಗ ಅದರ ಯಜಮಾನನಿಗೆ ಉಂಟಾಗುವ ಸಂತೋಷಕ್ಕಿಂತ ಹೆಚ್ಚಿನ ಸಂತೋಷವನ್ನು ಅಲ್ಲಾಹನು ಪಶ್ಚಾತ್ತಾಪ ಮಾಡುವ ವ್ಯಕ್ತಿಯ ಮೇಲೆ ತೋರಿಸುತ್ತಾನೆ.
(ಸಹೀಹ್ ಬುಖಾರಿ, ಕಿತಾಬುದ್ದಅವ, ಹದೀಸ್–6309)

ಅಲ್ಲಾಹನ ಕಡೆಗೆ ಧಾವಿಸುವವನ, ಅವನ ಕಡೆಗೆ ಹೋಗುವವನ ಕಡೆಗೆ ಅಲ್ಲಾಹನು ಸಹ ಹೋಗುತ್ತಾನೆ. ಹಝ್ರತ್ ಪೈಗಂಬರ್(ಸ) ಹೇಳಿದ್ದರು: ಒಂದು ಮೊಳದಷ್ಟು ಅಲ್ಲಾಹನ ಕಡೆಗೆ ಬರುವವನ ಕಡೆಗೆ ಅಲ್ಲಾಹನು ಎರಡು ಮೊಳದಷ್ಟು ಸಮೀಪವಾಗುತ್ತಾನೆ. ಒಬ್ಬ ವ್ಯಕ್ತಿ ನಡೆದುಕೊಂಡು ಅಲ್ಲಾಹನ ಕಡೆಗೆ ಹೋಗುವವನಾದರೆ, ಅಲ್ಲಾಹನ ಅವನ ಕಡೆಗೆ ಓಡಿಬರುತ್ತಾನೆ.
(ಸಹೀಹ್ ಬುಖಾರಿ, ಕಿತಾಬುತ್ತೌಹೀದ್, ಹದೀಸ್–7405)

ಆದ್ದರಿಂದ ನಮ್ಮನ್ನು ಸ್ವತಃ ಪಾಪಗಳಿಂದ ದೂರವಿರಿಸಲಿಕ್ಕಾಗಿಯೂ ಮಾಡಿದ ಪಾಪಗಳಿಗೆ ಕ್ಷಮೆಯಾಚಿಸಲಿಕ್ಕಾಗಿಯೂ ಅಲ್ಲಾಹನ ಕಡೆಗೆ ಧಾವಿಸಬೇಕು ಮತ್ತು ನರಕದಿಂದ ರಕ್ಷಣೆ ಪಡೆಯಲು ಪ್ರಯತ್ನಿಸಬೇಕು. ಅಲ್ಲಾಹನು ಈ ತಿಂಗಳನ್ನು ವಿಶೇಷವಾಗಿ ಈ ಕೆಲಸಕ್ಕಾಗಿ ನೀಡಿದ್ದಾನೆ. ಅದರಿಂದ ಪ್ರಯೋಜನ ಪಡೆಯಬೇಕು.

ತೌಬ ಮತ್ತು ಇಸ್ತಿಗ್ಫಾರ್‌ನ ಅರ್ಥವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ನೆನಪಿಡಿರಿ, ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆಯನ್ನು ನಿರಾಕರಿಸುವುದು, (ಎಂದರೆ ಮನುಷ್ಯನ ಪಶ್ಚಾತ್ತಾಪ ಮತ್ತು ಕ್ಷಮೆಯಾಚನೆಯನ್ನು ಅಲ್ಲಾಹನು ಸ್ವೀಕರಿಸುವುದಿಲ್ಲ ಎಂದು ಹೇಳುವುದು) ಸತ್ಯದಲ್ಲಿ, ಮನುಷ್ಯನ ಅಭಿವೃದ್ಧಿಗಳ ಬಾಗಿಲನ್ನು ಮುಚ್ಚುವುದಕ್ಕೆ ಸಮ. ಏಕೆಂದರೆ, ಮನುಷ್ಯನು ಸ್ವತಃ ಪರಿಪೂರ್ಣನಲ್ಲವೆಂಬುದು ಎಲ್ಲರಿಗೂ ಸ್ಪಷ್ಟವಾದ ಸಂಗತಿಯಾಗಿದೆ. ಬದಲಾಗಿ ಪರಿಪೂರ್ಣತೆಯನ್ನು ತಲುಪಲು ಬೇರೆಯವರ ನೆರವಿನ ಆವಶ್ಯಕತೆಯಿದೆ. ಮನುಷ್ಯನು ತನ್ನ ಬಾಹ್ಯವಾದ ಸ್ಥಿತಿಯಲ್ಲಿ ಜನಿಸಿ ಮೆಲ್ಲಮೆಲ್ಲನೆ ತನ್ನ ಅರಿವನ್ನು ವರ್ಧಿಸುತ್ತಾನೆ. ಆರಂಭದಲ್ಲೇ ಮಹಾ ಪಂಡಿತನಾಗಿರುವುದಿಲ್ಲ. ಅದೇ ರೀತಿಯಲ್ಲಿ ಅವನು ಜನಿಸಿ ಸ್ವಲ್ಪ ದೊಡ್ಡವನಾಗುವಾಗಲೂ ಅವನ ನೈತಿಕ ಅಥವಾ ಸ್ವಭಾವಗುಣ ಅತ್ಯಂತ ಕೀಳು ಮಟ್ಟದ್ದಾಗಿರುತ್ತದೆ. ನೋಡಿರಿ, ಕಿರುಪ್ರಾಯದ ಹುಡುಗನ ಅವಸ್ಥೆಗಳನ್ನು ಗಮನಿಸುವಾಗ ಸ್ಪಷ್ಟವಾಗಿ ತಿಳಿದುಬರುವ ಸಂಗತಿಯೇನೆಂದರೆ, ಸಣ್ಣ ಸಣ್ಣ ಜಗಳಗಳ ಸಂದರ್ಭಗಳಲ್ಲೂ ಇತರ ಮಕ್ಕಳನ್ನು ಹೊಡೆಯಲು ಮಕ್ಕಳಲ್ಲಿ ಹೆಚ್ಚಿನವರು ಮುಂದಾಗುತ್ತಾರೆ. ಹೆಚ್ಚಿನ ಮಕ್ಕಳು ಮಾತುಮಾತಿಗೆ ಸುಳ್ಳಾಡುತ್ತಾರೆ, ಇತರ ಮಕ್ಕಳನ್ನು ಕೆಟ್ಟ ಪದಗಳಿಂದ ಬೈಯ್ಯುವ ಸ್ವಭಾವವನ್ನು ಹೊಂದಿರುತ್ತಾರೆ. ಕೆಲವು ಮಕ್ಕಳಿಗೆ ಕಳ್ಳತನ, ಚಾಡಿಮಾತು, ಅಸೂಯೆ ಮತ್ತು ಜಿಪುಣತನದ ಸ್ವಭಾವವಿರುತ್ತದೆ. ಅನಂತರ ಯೌವ್ವನ ಪ್ರಾಯಕ್ಕೆ ತಲುಪುವಾಗ ಯೌವ್ವನದ ಆವೇಶ ಶಕ್ತವಾಗಿ ಇರುತ್ತದೆ. **ನಫ್ಸೇ ಅಮ್ಮಾರ**, ಎಂದರೆ, ಕೆಟ್ಟ ಕೃತ್ಯಗಳಿಗೆ ಕೊಂಡುಹೋಗುವ ದುರಾತ್ಮದ ಗುಣ ಅವರ ಮೇಲೆ ಸವಾರವಾಗಿರುತ್ತದೆ. ಹೆಚ್ಚಿನವರು ಅಯೋಗ್ಯ ಮತ್ತು ಕೆಟ್ಟ ಕೃತ್ಯಗಳನ್ನು ಮಾಡುತ್ತಾರೆ. ಅವು ಸ್ಪಷ್ಟವಾದ ಪಾಪಗಳು ಮತ್ತು ದುಷ್ಕೃತ್ಯಗಳು ಆಗಿರುತ್ತವೆ. ಸಂಕ್ಷೇಪವಾಗಿ ಹೇಳುವುದಾದರೆ, ಹೆಚ್ಚಿನ ಮನುಷ್ಯರ ಜೀವನದ ಆರಂಭ ಘಟ್ಟ ಕೊಳಕಾಗಿರುತ್ತದೆ. ಅನಂತರ ಕೆಲವು ಸೌಭಾಗ್ಯಶಾಲಿಗಳು ಆರಂಭ ಪ್ರಾಯದ ತೀವ್ರ ಬಿರುಗಾಳಿಯಿಂದ ಹೊರಗೆ ಬಂದರೆ, ಅವರು ತನ್ನ ದೇವನ ಕಡೆಗೆ ಶ್ರದ್ಧೆವಹಿಸುತ್ತಾರೆ ಮತ್ತು ನಿಜವಾದ ರೀತಿಯಲ್ಲಿ ಪಶ್ಚಾತ್ತಾಪವನ್ನು ಮಾಡಿಕೊಂಡು ಮಾಡಬಾರದ ಸಂಗತಿಗಳಿಂದ ದೂರವಿರುತ್ತಾರೆ. ತನ್ನ ಪ್ರಕೃತ ಮತ್ತು ಸಹಜಗುಣದ ನಿಲುವಂಗಿಯನ್ನು ಪರಿಶುದ್ಧಗೊಳಿಸುವ ಚಿಂತೆಯಲ್ಲಿ ಮಗ್ನರಾಗುತ್ತಾರೆ. ಇದು ಸಾಮಾನ್ಯವಾಗಿ ಮನುಷ್ಯನ ಜೀವನಚರಿತ್ರೆಯಾಗಿದೆ. ಇದನ್ನು ಮಾನವಕುಲಕ್ಕೆ ದಾಟಬೇಕಾಗಿ ಬರುತ್ತದೆ. ಹೀಗಾಗಿ ಈ ಸಂಗತಿಗಳಿಂದ ಗೊತ್ತಾಗುವುದೇನೆಂದರೆ, ಅಲ್ಲಾಹನು ಪಶ್ಚಾತ್ತಾಪವನ್ನು ಸ್ವೀಕರಿಸುವುದಿಲ್ಲವೆಂಬುದು ಸತ್ಯವೆಂದಾದರೆ, ಮನುಷ್ಯನಿಗೆ ಮುಕ್ತಿ ನೀಡಲು ಅಲ್ಲಾಹನು ಉದ್ದೇಶಿಸಿಯೇ ಇರಲಿಲ್ಲವೆಂದು ಸಾಬೀತಾಗುವುದು. (ಚಶ್ಮ ಎ ಮಾರಿಫತ್, ರೂಹಾನಿ ಖಝಾಇನ್, ಸಂಪುಟ–23, ಪುಟ–192–193)

ಮನುಷ್ಯನಿಗೆ ಮುಕ್ತಿ ನೀಡಲು ಅಲ್ಲಾಹನು ಉದ್ದೇಶಿಸಿಲ್ಲವೆಂದು ಹೇಳುವುದು ಸರಿಯಲ್ಲ. ಏಕೆಂದರೆ, ಮುಕ್ತಿ ನೀಡಲು ಬಯಸುತ್ತಾನೆ ಎಂದು ಅಲ್ಲಾಹನು ಹೇಳಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತೌಬ ಎಂಬುದಕ್ಕೆ ಅರಬೀ ನಿಘಂಟುವಿನಲ್ಲಿ ಕೊಟ್ಟಿರುವ ಅರ್ಥ ಮರಳುವುದು ಎಂದಾಗಿದೆ. ಆದ್ದರಿಂದಲೇ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನ ಹೆಸರು ಸಹ **ತವ್ವಾಬ್** ಎಂದು ಹೇಳಲಾಗಿದೆ. ಎಂದರೆ ಬಹಳವಾಗಿ ಮರಳುವವನು. ಅದರ ಅರ್ಥವೇನೆಂದರೆ, ಮನುಷ್ಯನು ಪಾಪಗಳನ್ನು ಬಿಟ್ಟುಕೊಂಡು, ಸತ್ಯ ಹೃದಯದೊಂದಿಗೆ ಅಲ್ಲಾಹನ ಕಡೆಗೆ ಮರಳುವಾಗ, ಅಲ್ಲಾಹನು ಆ ವ್ಯಕ್ತಿಗಿಂತ ಹೆಚ್ಚು ವೇಗವಾಗಿ ಅವನ ಕಡೆಗೆ ಮರಳುತ್ತಾನೆ. ಈ ಕಾರ್ಯವು ಪ್ರಕೃತಿ ನಿಯಮಕ್ಕೆ ಅನುಸಾರವಾಗಿರುವುದಾಗಿದೆ. ಏಕೆಂದರೆ, ಒಬ್ಬ ವ್ಯಕ್ತಿ ಸತ್ಯ ಹೃದಯದೊಂದಿಗೆ ಮತ್ತೊಬ್ಬ ಮನುಷ್ಯನ ಕಡೆಗೆ ಕ್ಷಮೆಯಾಚನೆ ಮಾಡುತ್ತಾ ಹೋಗುವಾಗ, ಮತ್ತೊಬ್ಬ ವ್ಯಕ್ತಿಯ ಮನಸ್ಸು ಆ ವ್ಯಕ್ತಿಗಾಗಿ ಕರಗಿಹೋಗುತ್ತದೆ. ಅವನೊಡನೆ ಕರುಣೆ ತೋರಿಸುತ್ತಾನೆ. ಈ ಗುಣವನ್ನು ಅಲ್ಲಾಹನು ಮನುಷ್ಯಕುಲದ ಸಹಜ ಸ್ವಭಾವದಲ್ಲಿ ಇರಿಸಿದ್ದಾನೆ. ಹೀಗಿರುವಾಗ, ಮನುಷ್ಯನು ಸತ್ಯ ಹೃದಯದಿಂದ ಅಲ್ಲಾಹನ ಕಡೆಗೆ ಪಶ್ಚಾತ್ತಾಪ ಮಾಡುತ್ತಾ ಮರಳುವಾಗ ಅಲ್ಲಾಹನು ಅವನ ಕಡೆಗೆ ಮರಳದೇ ಇರಲು ಸಾಧ್ಯವಿಲ್ಲ. ಇಬ್ಬರು ವ್ಯಕ್ತಿಗಳ ಮಧ್ಯ ಇರುವ ಸಂಬಂಧ ಹೀಗಿದೆ. ಅದು ಸಹಜವಾದುದಾಗಿದೆ. ಹೀಗಿರುವಾಗ ಅಲ್ಲಾಹನು ಪಶ್ಚಾತ್ತಾಪದಿಂದ ಬರುವವನನ್ನು ಕ್ಷಮಿಸುವುದಿಲ್ಲ ಅಥವಾ ಅವನ ಕಡೆಗೆ ಮರಳುವುದಿಲ್ಲವೆಂದು ಹೇಳುವುದನ್ನು ಹೇಗೆ ನಂಬಲು ಸಾಧ್ಯ? ಸತ್ಯದಲ್ಲಿ ಅಲ್ಲಾಹನು ಅತ್ಯಂತ ಕೃಪಾಳು ಮತ್ತು ದಯಾಳು ಆಗಿರುವನು. ಅವನಂತು ಮನುಷ್ಯನ ಕಡೆಗೆ ಬಹಳ ಹೆಚ್ಚಾಗಿ ಮರಳುತ್ತಾನೆ. ಆದ್ದರಿಂದಲೇ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಒಂದು ಗುಣನಾಮ **ತವ್ವಾಬ್** ಎಂದು ಬಂದಿದೆ. ಎಂದರ, ಬಹಳವಾಗಿ ಮರಳುವವನು. ಆದ್ದರಿಂದ ಮನುಷ್ಯನ ಮರಳುವಿಕೆ ಪಶ್ಚಾತ್ತಾಪ, ಲಜ್ಜೆ, ನಾಚಿಕೆಭಾವ, ವಿನಯ ಮತ್ತು ನಮ್ರತೆಯಿಂದ ಆಗಿರುತ್ತದೆ.

ಅಲ್ಲಾಹನ ಮರಳುವಿಕೆ ಕಾರುಣ್ಯ ಮತ್ತು ಕ್ಷಮೆ ನೀಡುವಿಕೆಯಿಂದ ಕೂಡಿರುತ್ತದೆ. ಕಾರುಣ್ಯವೆಂಬುದು ಅಲ್ಲಾಹನ ಗುಣಗಳಲ್ಲಿ ಇರದಿದ್ದರೆ, ಯಾವನೇ ಮನುಷ್ಯನಿಗೆ ಮುಕ್ತಿ ಪಡೆಯಲು ಸಾಧ್ಯವಲ್ಲ. ಈ ಜನರು ಅಲ್ಲಾಹನು ಗುಣಗಳ ಬಗ್ಗೆ ಚಿಂತಿಸಿಲ್ಲವೆಂಬುದು ದುಃಖಕರ. ಎಲ್ಲವೂ ಮನುಷ್ಯನ ಕೃತ್ಯಗಳಿಂದ ಮಾತ್ರವೆಂದು ಭಾವಿಸುತ್ತಾರೆ. ಯಾವನೇ ಮನುಷ್ಯನ ಸತ್ಕರ್ಮವಿಲ್ಲದೇ ಸಾವಿರಾರು ಅನುಗ್ರಹಗಳನ್ನು ಮತ್ತು ವಸ್ತುಗಳನ್ನು ಭೂಮಿಯಲ್ಲಿ ಮನುಷ್ಯನಿಗಾಗಿ ಸೃಷ್ಟಿಸಿದ ಅಲ್ಲಾಹನು, ದುರ್ಬಲನಾದ ಮನುಷ್ಯನಿಗೆ ತನ್ನ ಅಜಾಗರೂಕತೆಯ ಮತ್ತು ಪಾಪ ಕೃತ್ಯಗಳ ಬಗ್ಗೆ ಸರಿಯಾದ ಅರಿವು ಮತ್ತು ತಿಳುವಳಿಕೆಯುಂಟಾದ ಕಾರಣದಿಂದ ಅಲ್ಲಾಹನ ಕಡೆಗೆ ಮರಳುವಾಗ, ಅದು ಸಹ ಸಾಯುವ ಸ್ಥಿತಿಗೆ ತಲುಪುವ ರೀತಿಯಲ್ಲಿ ಮರಳುವಾಗ ಮತ್ತು ತನ್ನ ಪಾಪಗಳ ಕೊಳಕು ನಿಲುವಂಗಿಯನ್ನು ಮೈಯಿಂದ ಕಳಚಿಕೊಂಡು ಅಲ್ಲಾಹನ ಪ್ರೇಮದ ಬೆಂಕಿಯಲ್ಲಿ ಉರಿಯುವಾಗಲೂ ಅಲ್ಲಾಹನು ಮನುಷ್ಯನ ಕಡೆಗೆ ಕಾರುಣ್ಯದಿಂದ ಮರಳದೇ ಇರಲು ಸಾಧ್ಯವೇ? ಇದು ಅಲ್ಲಾಹನ ಪ್ರಕೃತಿ ನಿಯಮವಾಗಲು ಸಾಧ್ಯವೇ? (ಚಶ್ಮ ಎ ಮಾರಿಫತ್, ರೂಹಾನಿ ಖಝಾಇನ್ ಸಂಪುಟ–23, ಪುಟ–133–134)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನ ಅನುಗ್ರಹ ಮತ್ತು ಕಾರುಣ್ಯದ ಬಾಗಿಲು ಎಂದಿಗೂ ಮುಚ್ಚಲ್ಪಡುವುದಿಲ್ಲ. ಮನುಷ್ಯನು ಸತ್ಯ ಹೃದಯದೊಂದಿಗೆ ನಿಷ್ಠೆಯಿಂದ ಅಲ್ಲಾಹನ ಕಡೆಗೆ ಮರಳುವನಾದರೆ ಅವನು ಕ್ಷಮಿಸುವವನೂ ಕಾರುಣ್ಯವಂತನೂ ಪಶ್ಚಾತ್ತಾಪವನ್ನು ಸ್ವೀಕರಿಸುವವನೂ ಎಂದು ನಿಮಗೆ ಗೊತ್ತಾಗುವುದು. ಅನೇಕ ಪಾಪಿಗಳನ್ನು ಕ್ಷಮಿಸಲು ಅಲ್ಲಾಹನಿಗೆ ಹೇಗೆ ಸಾಧ್ಯವೆಂದು ಕೇಳುವುದು ಅಪಮರ್ಯಾದೆ ಮತ್ತು ನಿಂದನೆಯಾಗಿದೆ. ಅವನ ಕಾರುಣ್ಯದ ಭಂಡಾರ ವಿಶಾಲ ಮತ್ತು ಅಪರಿಮಿತವಾದುದಾಗಿದೆ. ಅವನಿಗೆ ಯಾವುದರ ಕೊರತೆಯೂ ಇಲ್ಲ. ಅವನ ಬಾಗಿಲು ಯಾರ ಮೇಲೂ ಮುಚ್ಚಲ್ಪಡುವುದಿಲ್ಲ. ಇಷ್ಟೆಲ್ಲ ವಿದ್ಯಾವಂತರಿಗೆ ಹೇಗೆ ಉದ್ಯೋಗ ಕೊಡುವುದು ಎಂದು ಚಿಂತಿಸಬೇಕಾಗಿ ಬರುವ ಆಂಗ್ಲೇಯ ಸರ್ಕಾರದ ಹಾಗೆ ಅಲ್ಲ ಅಲ್ಲಾಹನ ಕಾರುಣ್ಯ. ಅಲ್ಲಾಹನು ಬಳಿಗೆ ಎಷ್ಟು ಜನರು ತಲುಪಿದರೂ ಅವರೆಲ್ಲರೂ ಉನ್ನತ ಪದವಿಗಳನ್ನು ಪಡೆಯುವರು. ಇದು ನಿಶ್ಚಿತವಾದ ವಾಗ್ದಾನವಾಗಿದೆ. ಅಲ್ಲಾಹನಲ್ಲಿ ನಿರಾಶೆಗೊಳ್ಳುವವನು ಮತ್ತು ಅಲ್ಲಾಹನ ಬಗ್ಗೆ ಯಾವುದೇ ಚಿಂತೆಯಿಲ್ಲದೇ ಅಜಾಗರೂಕತೆಯ ಸ್ಥಿತಿಯಲ್ಲಿ ಮರಣವನ್ನು ಎದುರಿಸಬೇಕಾಗಿ ಬರುವ ವ್ಯಕ್ತಿ ಬಹಳ ದೌರ್ಭಾಗ್ಯವಂತನು. ಅಲ್ಲಾಹನಲ್ಲಿ ನಿರಾಶೆಗೊಂಡು ಅವನ ಮರಣ ಅಜಾಗರೂಕತೆಯ ಸ್ಥಿತಿಯಲ್ಲಿ ಬರುವಾಗ ನಿಸ್ಸಂಶಯವಾಗಿಯೂ ಬಾಗಿಲು ಮುಚ್ಚಲ್ಪಟ್ಟಿರುತ್ತದೆ.
(ಮಲ್‌ಫೂಝಾತ್, ಸಂಪುಟ–3, ಪುಟ–296–297)

ಒಟ್ಟಿನಲ್ಲಿ ಅಲ್ಲಾಹನ ಕ್ಷಮಾಪನೆಯ ಬಾಗಿಲುಗಳು ತೆರೆದಿರುತ್ತವೆ. ಆದರೆ ಮನುಷ್ಯನು ಉತ್ತಮ ಸ್ಥಿತಿಯಲ್ಲಿರುವಾಗ ಪಶ್ಚಾತ್ತಾಪವನ್ನು ಮಾಡಬೇಕು. ಕೊನೆಯ ಉಸಿರು ತೆಗೆಯುವ ವೇಳೆ ಕ್ಷಮಾಪನೆ ಮತ್ತು ಪಶ್ಚಾತ್ತಾಪವನ್ನು ಮಾಡುವುದಲ್ಲ. ಆದ್ದರಿಂದ ಈ ದಿನಗಳಲ್ಲಿ ಬಹಳ ಹೆಚ್ಚು ಕ್ಷಮೆ ಮತ್ತು ಪಶ್ಚಾತ್ತಾಪವನ್ನು ನಾವು ಮಾಡಬೇಕು. ಈ ರಮಝಾನಿನ ತಿಂಗಳು ದುಆ ಸ್ವೀಕಾರದ ಮಾಸ ಸಹ ಆಗಿದೆ. ಇದರ ಕೊನೆಯ ಹತ್ತು ದಿವಸ ನರಕದಿಂದ ರಕ್ಷಣೆ ಪಡೆಯಬಹುದಾದ ದಿನಗಳಾಗಿವೆ. ಪಾಪಗಳಿಂದ ಕ್ಷಮೆ ಮತ್ತು ಸತ್ಕರ್ಮಗಳನ್ನು ಮಾಡಲು ಬೇಕಾದ ಸೌಭಾಗ್ಯ ಮತ್ತು ಶಕ್ತಿ ಅಲ್ಲಾಹನಿಂದ ಲಭಿಸುತ್ತದೆ. ನಾವು ಅಲ್ಲಾಹನೊಂದಿಗೆ ಸೇರಿಕೊಂಡಿರುವವರಾದರೆ, ನಮ್ಮ ಇಹಲೋಕ ಮತ್ತು ಪರಲೋಕ ಜೀವಿತಗಳು ಮನೋಹರವಾಗುವುವು. ನಾನು ಹೇಳಿದಂತೆ, ಕೆಲವು ಸ್ಥಳಗಳಲ್ಲಿ ಅಹ್ಮದಿಯರಿಗೆ ಜೀವನ ಸಾಗಿಸುವುದು ಬಹಳ ಕಷ್ಟವಾಗುತ್ತಿದೆ. ಈ ಕಷ್ಟತೆಗಳಿಂದ ಹೊರಗೆ ಬರಲಿರುವ ಒಂದೇ ಪರಿಹಾರ ಮಾರ್ಗವೇನೆಂದರೆ, ನಾವು ನಮ್ಮ ಸಂಬಂಧವನ್ನು ಅಲ್ಲಾಹನೊಂದಿಗೆ ಜೋಡಿಸಬೇಕು. ನಮ್ಮ ಸಂಬಂಧ ಅಲ್ಲಾಹನೊಂದಿಗೆ ಆಗುವುದಾದರೆ, ನಮ್ಮ ದುರೂದ್ ಪ್ರಾರ್ಥನೆಗಳು ಮತ್ತು ನಮ್ಮ ಇಸ್ತಿಗ್‌ಫಾರ್ ಪ್ರಾರ್ಥನೆಗಳು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವಂತಹದ್ದು ಆಗಿದ್ದರೆ, ಶತ್ರುಗಳು ಶತಪ್ರಯತ್ನಗಳನ್ನು ಮಾಡಿದ್ದರೂ ನಮಗೆ ಯಾವುದೇ ಹಾನಿಯನ್ನು ಉಂಟುಮಾಡಲು ಸಾಧ್ಯವಲ್ಲ. ಆದರೆ ಅಲ್ಲಾಹನು ನಮ್ಮೊಂದಿಗೆ ಸಂಪ್ರೀತನಾಗಿಲ್ಲವೆಂದಾದರೆ ಭೌತಿಕವಾದ ಯಾವುದೇ ಉಪಾಯ ನಮ್ಮ ಪ್ರಯೋಜನಕ್ಕೆ ಬಾರದು. ಯಾವುದೇ ಪ್ರಯತ್ನ ಲಾಭದಾಯಕವಾಗುವುದಿಲ್ಲ. ಆದ್ದರಿಂದ ನಾವು ನಮ್ಮ ಸಂಬಂಧವನ್ನು ಅಲ್ಲಾಹನೊಂದಿಗೆ ಸುದೃಢಗೊಳಿಸಬೇಕು.

ರಮಝಾನಿನ ದುಆಗಳಲ್ಲಿ ವಿರೋಧಿಗಳ ಉಪದ್ರಗಳಿಂದ ರಕ್ಷಣೆ ಪಡೆಯಲು ಸಹ ಬಹಳವಾಗ ದುಆ ಮಾಡಿರಿ. ನಾನು ಹೇಳಿದಂತೆ ಕೆಲವು ಜಾಗಗಳಲ್ಲಿ ಅಹ್ಮದಿಯರಿಗೆ ಬಹಳ ಕಷ್ಟತೆಗಳನ್ನು ಕೊಡಲಾಗುತ್ತಿವೆ. ಅಹ್ಮದಿಯರು ಬಹಳ ತೊಂದರೆಗಳಿಗೆ ಸಿಲುಕಿಕೊಂಡಿರುವರು. ಅಲ್ಲಾಹನು ಅವರ ಕಷ್ಟತೆಗಳನ್ನು ನೀಗಿಸಲಿ ಮತ್ತು ಎದುರಾಳಿಗಳ ಕುಕೃತ್ಯಗಳಿಂದ ಸುರಕ್ಷಿತಗೊಳಿಸಲಿ. ಪಾಕಿಸ್ತಾನದ ಅಹ್ಮದಿಯರು ಸಹ ವಿಶೇಷವಾಗಿ ಈ ದಿನಗಳಲ್ಲಿ ಅವರಿಗಾಗಿಯೂ ಜಮಾಅತಿಗಾಗಿಯೂ ಬಹಳ ದುಆಗಳನ್ನು ಮಾಡಬೇಕು. ಈಗ ಹರಡಿರುವ ಕೊರೋನ ಮಹಾಮಾರಿಯಿಂದ ಸುರಕ್ಷಿತಗೊಳ್ಳಲು ಸಹ ದುಆ ಮಾಡಿರಿ. ಅಲ್ಲಾಹನು ಈ ವಿಪತ್ತಿನಿಂದ ಲೋಕಕ್ಕೆ ಮುಕ್ತಿ ನೀಡಲಿ. ನಮ್ಮನ್ನು ಸುರಕ್ಷಿತಗೊಳಿಸಲಿ. ಅಲ್ಲಾಹನು ನಮ್ಮನ್ನು ನೈಜ ರೂಪದಲ್ಲಿ ದುರೂದ್ ಮತ್ತು ಇಸ್ತಿಗ್‌ಫಾರ್ ಮಾಡುವವರನ್ನಾಗಿ ಮಾಡಲಿ.

*********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕೆಲಸಕ್ಕೂ ಬರುವುದಿಲ್ಲ. ಹಾಗೆಯೇ ಯಾರು ಅಲ್ಲಾಹನ ಗುಣಗಳನ್ನು ಅರಿಯುವುದಿಲ್ಲವೋ, ಅವನು ಅವನ ಅನುಗ್ರಹಗಳಿಂದ ವಂಚಿತನಾಗುವನು. ಆದರೆ ಯಾರು ಸೃಷ್ಟಿಯನ್ನು ದೇವನನ್ನಾಗಿ ಮಾಡುವನು ಅವನು ಸೃಷ್ಟಿಯಿಂದಲೂ ಏನು ಲಾಭ ಪಡೆಯದಂತಾಗುವನು. ಉದಾಹರಣೆಗೆ ನೀರು ಮನುಷ್ಯನಿಗೆ ಒಂದು ಲಾಭದಾಯ ವಸ್ತುವಾಗಿದೆ. ಅದು ಮನುಷ್ಯನ ಹಿತಕ್ಕಾಗಿ ಸೃಷ್ಟಿಸಲಾಗಿದೆ. ಒಬ್ಬನು ನೀರಿಗೆ ಮಾನವನ ಸ್ಥಾನವನ್ನೇ ಕೊಟ್ಟು ಮನುಷ್ಯ ಮನುಷ್ಯನಿಗೆ ಕರೆದಂತೆ ಕೈಗಳನ್ನು ಚಾಚಿ ಕರೆಯಲು ಪ್ರಾರಂಭಿಸಿದರೆ ನೀರು ಅವನ ಹತ್ತಿರ ಬರಲಾರದು, ಹೀಗೆ ಅವನು ನೀರಿನ ಪ್ರಯೋಜನ ಪಡೆಯುವುದರಿಂದ ವಂಚಿತನಾಗುತ್ತಾನೆ. ಅದೇ ರೀತಿ ಸೃಷ್ಟಿಗಳನ್ನು ಸೃಷ್ಟಿಕರ್ತ (ದೇವ) ನನ್ನಾಗಿ ಮಾಡಿದರೆ ಆ ಸೃಷ್ಟಿಯಲ್ಲಿ ಅಡಗಿರುವ ಪ್ರಯೋಜನಗಳನ್ನು ಪಡೆಯುವುದರಿಂದ ವಂಚಿತನಾಗುತ್ತಾನೆ. ನಕ್ಷತ್ರಗಳನ್ನು, ನದಿಗಳನ್ನು ದೇವನನ್ನಾಗಿ ಮಾಡುವವರು ಎಂದೂ ಅದರ ಮೇಲೆ ಪ್ರಭುತ್ವವಹಿಸಲು ಸಾಧ್ಯವಾದೀತು. ಮತ್ತು ಮನುಷ್ಯರನ್ನು ದೇವನನ್ನಾಗಿ ಮಾಡುವವರು ಎಂದೂ ಅವರಿಂದ ಲಾಭ ಪಡೆಯಲು ಸಾಧ್ಯ?

ಒಬ್ಬ ಪ್ರವಾದಿಯನ್ನು ದೇವನನ್ನಾಗಿ ಮಾಡುವವನು, ಒಬ್ಬ ಪ್ರವಾದಿಯಿಂದ ಪಡೆಯುವಂತಹ ಅನುಗ್ರಹ ಪಡೆಯಲು ಸಾಧ್ಯವಾಗುವುದಿಲ್ಲ. ದೇವನಿಂದ ಪಡೆಯುವಂತಹ ಅನುಗ್ರಹ ಓರ್ವ ಪ್ರವಾದಿ ತಲುಪಿಸಲು ಸಾಧ್ಯವಿಲ್ಲ. ಅಂದ ಹಾಗೆ ಅದರ ನಿಜವಾದ ಪ್ರಯೋಜನ ಪಡೆಯುವುದರಿಂದ ಅಂತಹ ವ್ಯಕ್ತಿಯು ವಂಚಿತನಾಗುವನು. ಭಾರತದಲ್ಲಿ ಪ್ರಗತಿಯ ಮೈದಾನದಲ್ಲಿ ಎಲ್ಲರಿಗಿಂತ ಹಿಂದುಳಿಯಲು ಬಹು ದೊಡ್ಡ ಕಾರಣವೆಂದರೆ, ಈ ಜನರು ನೀರು (ನದಿ ದೇವತೆ ಮತ್ತು ಅಗ್ನಿಯನ್ನು (ಅಗ್ನಿದೇವ) ದೇವನನ್ನಾಗಿ ಮಾಡಿಕೊಂಡ ಕಾರಣ ಅದರ ಮುಂದೆ ಕೈಜೋಡಿಸಿಕೊಂಡು ಕುಳಿತುಕೊಂಡಿದ್ದಾರೆ. ಅದಾಗ್ಯೂ ಅದು ಪ್ರಗತಿಯ ನೆಲೆಗಳಾಗಿದ್ದವು. ಅದೇ ಜಾಗದಲ್ಲಿ ಯೂರೋಪಿಯನ್ನರು ಅದರಿಂದ ಕಾರ್ಯಸಾಧಿಸಿದರು. ಮತ್ತು ಪ್ರಗತಿಯ ಮೈದಾನದಲ್ಲಿ ಮುನ್ನಡೆ ಸಾಧಿಸಿದರು. ಹಿಂದುಳಿದ ಸ್ಥಿತಿ ಎಲ್ಲಿಗೆ ತಲುಪಿತ್ತೆಂದರೆ, ಬ್ರಿಟಿಷರು ನದಿಗಳಿಂದ ಕಾಲುವೆ ತೋಡುತ್ತಿರುವಾಗ ಬೊಬ್ಬೆ ಹಾಕಲು ಶುರುಮಾಡಿದರು. ಇವರು ಗಂಗೆಯಿಂದ ನಮ್ಮ ದೇವ ದೇವತೆಗಳನ್ನು ಕಡಿಯುತ್ತಿದ್ದಾರೆ ಎಂದು. ಮುಸಲ್ಮಾನರು ಸಹ ತನ್ನ ಅವನತಿಗೆ ಗುರಿಯಾಗಿ ಧರ್ಮ ಸಜ್ಜನರಿಗೆ ದೇವನ ಗುಣಗಳನ್ನು ನೀಡಿ ಅವರೊಂದಿಗೆ ಪ್ರಾರ್ಥಿಸತೊಡಗಿದರು. ಪರಿಣಾಮ ವೇನಾಯಿತೆಂದರೆ, ಆ ಸಜ್ಜನರಿಂದ ಪಡೆಯಬೇಕಾದಂತಹ ಸದ್ಗುಣಗಳಿಂದ ವಂಚಿತರಾದರು. ಪ್ರಾರ್ಥನೆಗಳನ್ನು ಸ್ವೀಕರಿಸುವ ಆಲಿಸುವ ಭಾಗ್ಯ (ಶಕ್ತಿ) ಆ ಸಜ್ಜನರಿಗೆ ಇರಲಿಲ್ಲ. ಅಂದ ಹಾಗೆ ಅವರಿಗೆ ಆ ಉನ್ನತವಾದ ಸ್ಥಾನವನ್ನು ನೀಡಿ ಸ್ವಯಂ ಅವರಿಗೆ ಏನು ಲಾಭ ದೊರೆಯಲಿಲ್ಲ. ಇವರು ಸಹ ಲಾಭದಿಂದ ವಂಚಿತರಾದರು. ಈ ವಚನದಲ್ಲಿ ಅರುಹಲಾಗಿದೆ. ದೇವನಿಗೆ ಸಹಭಾಗಿಯನ್ನಾಗಿ ಮಾಡುವವರು ಮಾನವ ಅಭಿವೃದ್ಧಿಯಲ್ಲಿ ಒಂದು ಬಹುದೊಡ್ಡ ತೊಡಕಾಗಿದ್ದಾರೆ. ದೇವನಿಗೆ ಸಹಭಾಗಿಯನ್ನಾಗಿ ಮಾಡಿದ ಕಾರಣ, ಮನುಷ್ಯ ಸೃಷ್ಟಿಯಿಂದ, ದೇವನು ಆ ಸೃಷ್ಟಿಯಲ್ಲಿ ಅಡಗಿಸಿಟ್ಟಂತಹ ಗುಣಗಳಿಂದ ಪ್ರಯೋಜನ ಪಡೆಯಲಾರನು. ವ ಮಾ ದುಆಉಲ್ ಕಾಫಿರೀನ ಇಲ್ಲಾ ಫೀ ಝಲಾಲ್" ಅವರ ಪ್ರಾರ್ಥನೆಗಳು ದೇವನಿಗೆ ತಲುಪದೇ ವ್ಯರ್ಥವಾಗುವುದು. ದೇವನು ಸ್ವೀಕರಿಸಿದರೆ ಮಾತ್ರ ಅದು ದುಆ ಆಗಿರುತ್ತದೆ. ಒಂದು ಪತ್ರ ಅಥವಾ ಸಂದೇಶವಾಹಕನು ತಲುಪಬೇಕಾದ ಸ್ಥಳಕ್ಕೆ ತಲುಪದೇ ಬೇರೆಡೆ ಹೋದರೆ ತನ್ನ ಉದ್ದೇಶ ಸಾದಿಸಿದಂತಾಗದು. ಆದುದರಿಂದ ಹೇಳಲಾಗಿದೆ. ಅವಿಶ್ವಾಸಿಗಳ ಪ್ರಾರ್ಥನೆ ಗುರಿಯಿಲ್ಲದ್ದಾಗಿರುತ್ತದೆ. ಪ್ರಾರ್ಥನೆ ಸ್ವೀಕಾರದ ಅಸಲು ಹಕ್ಕುದಾರ ದೇವನಾಗಿದ್ದಾನೆ. ಈ ಜನರು ತನ್ನ ಪ್ರಾರ್ಥನೆಗಳ ಮೇಲೆ ಅಲ್ಲಾಹನ ವಿಳಾಸ ಬರೆಯುತ್ತಿದ್ದರೆ ಅವರ ಪ್ರಾರ್ಥನೆಗಳು ಅವಶ್ಯವಾಗಿ ತಲುಪುತ್ತಿದ್ದವು ಮತ್ತು ಉತ್ತರವು ದೊರಕುತಿತ್ತು. ಆದರೆ ಈ ಜನರು ಸೃಷ್ಟಿಗಳ ವಿಳಾಸ ಬರೆಯಲು ಪ್ರಾರಂಭಿಸಿದ್ದರಿಂದ ಅವು ಪ್ರಾರ್ಥನೆ ಸ್ವೀಕಾರದ ಶಕ್ತಿ ಹೊಂದಿರುವುದಿಲ್ಲ. ಆದುದರಿಂದ ಅವು ವ್ಯರ್ಥಗೊಳ್ಳುತ್ತವೆ ಮತ್ತು ಎಲ್ಲ ತಂತ್ರಗಳು ವಿಫಲಗೊಳ್ಳುತ್ತವೆ. **(ತಫ್ಸೀರ್ ಕಬೀರ್ ಸಂಪುಟ 3, ಪುಟ, 397 ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅವರಿಗೆ ಮೂರು ಸಾವಿರ ನಗದು ಬಹುಮಾನ ಕೊಡಲಾಗುವುದು. ಮತ್ತು ನನ್ನ ದೇವವಾಣಿಯುನ್ನು ಸುಳ್ಳಾಗಿಸಲು ಒಂದು ಸುಲಭದ ದಾರಿ ಸಿಗುವಂತಾಗುವುದು, ಸಾವಿರ ಶಾಪದ ಕಲೆಯಿಂದಲೂ ರಕ್ಷಣೆ ಪಡೆಯಬಹುದಿತ್ತು. ತರುವಾಯು ಅವರು ಸೋಲು ಒಪ್ಪಿಕೊಂಡಂತಾಯಿತು ಮತ್ತು ನನ್ನ ದೇವವಾಣಿಯ ಸತ್ಯತೆಯನ್ನು ದೃಢಿಕರಿಸಿದಂತಾಯಿತು. ಆದರೆ ಶೇಖ್ ಸಾಹಿಬರು ಈ ಯಾವುದೇ ಮಾತುಗಳಿಗೂ ಕಿವಿಗೊಡಲಿಲ್ಲ. ಯಾವ ಸ್ವಾಭಿಮಾನವು ತೋರಿಸಲಿಲ್ಲ. ಅದಕ್ಕೆ ಕಾರಣವೇನಾಗಿತ್ತು? ಅಂದ ಹಾಗೆ ನನ್ನನ್ನು ಎದುರಿಸುವುದು ಅವರ ಶಕ್ತಿಗೆ ಮೀರಿದ ಮಾತಾಗಿತ್ತು. ಅಂದ ಹಾಗೆ ಅವರು ತನ್ನ ಸೋಲು ಒಪ್ಪಿಕೊಂಡಂತಾಯಿತು. ಇದು ದೇವವಾಣಿಯಾದ–ಇನ್ನಿ ಮುಹೀನುನ್ ಮನ್ ಅರಾದ ಇಹಾನತಕ" ಸತ್ಯತೆ ಪ್ರಕಟವಾದಂತಾಯಿತು. ಶೇಖ್ ಸಾಹಿಬರು ಗೋಪುರಗಳ ಮೇಲೆ ಸಾರಿ ಸಾರಿ ಹೇಳುತ್ತಿದ್ದರು. ನೂರಾರು ಸಂದರ್ಭಗಳಲ್ಲಿ ನನ್ನ ಬಗ್ಗೆ ಹೇಳುತ್ತಿದ್ದರು. ಈ ವ್ಯಕ್ತಿ ಅರಬಿ ಭಾಷೆಯ ಬಗ್ಗೆ ಏನೂ ತಿಳಿದಿರುವುದಿಲ್ಲ, ಅಜ್ಞಾನಿಯಾಗಿದ್ದಾನೆ, ಸುಳ್ಳುಗಾರನಾಗಿದ್ದಾನೆ, ದಜ್ಜಾಲಾಗಿದ್ದಾನೆ. ಅಷ್ಟಕ್ಕೆ ನಿಲ್ಲಲಿಲ್ಲ, ನೂರಾರು ಇಂತಹ ಪತ್ರಗಳನ್ನು ತನ್ನ ಮಿತ್ರರಿಗೆ ಬರೆದು ತಿಳಿಸಿದರು. ಎಲ್ಲೆಲ್ಲೋ ಅದೇ ಪ್ರಚಾರ ಮಾಡಿದರು. ತಮ್ಮ ಅಜ್ಞಾನಿ ಮಿತ್ರರ ಮನದಲ್ಲಿ ಅಚ್ಚಾಗದಂತೆ ಮಾಡಿದರು. ನಿಜವಾಗಿಯೂ ಈ ವ್ಯಕ್ತಿ ಮೋಸಗಾರನಾಗಿದ್ದಾನೆ. ಅಂದ ಹಾಗೆ ಅಲ್ಲಾಹನು ಅವರ ಅಹಂಕಾರವನ್ನು ಮಟ್ಟಹಾಕ ಬಯಸಿದನು. ಅವನ ಕೊರಳನ್ನು ಮುದುಡಿಹಾಕ ಬಯಸಿದನು, ಮತ್ತು ಅಲ್ಲಾಹನು ತನ್ನ ದಾಸರಿಗೆ ಹೇಗೆ ನೆರವಾಗುತ್ತಾನೆ ಎಂದು ತೋರಿಸಬಯಸಿದನು. ಅಂದ ಹಾಗೆ ಅಲ್ಲಾಹನ ದಯೆಯಿಂದ ಮತ್ತು ಅವನ ಅಪಾರವಾದ ಅನುಗ್ರಹದಿಂದ ಈ ಗ್ರಂಥಗಳನ್ನು ರಚಿಸುವ ಭಾಗ್ಯ ದೊರೆಯಿತು. ನಾವು ಕರಾಮತುಸ್ಸಾದಿಖೀನ್ ಮತ್ತು ನೂರುಲ್ ಹಖ್‌ನ ಸ್ಪರ್ಧೆಗೋಸ್ಕರ ಅಂತಿಮ ದಿನಾಂಕ ಆ ಮೌಲ್ವಿ ಮತ್ತು ಎಲ್ಲ ವಿರೋಧಿಗಳಿಗಾಗಿ ಆ ಜೂನ್ ಕೊನೆಯ ಭಾಗ 1894 ನಿಗದಿಪಡಿಸಿದ್ದೆ. ಅದು ಕಳೆದಾಯಿತು.

**(ಸಿರ್ರುಲ್ ಖಿಲಾಫ್, ರೂಹಾನಿ ಖಝಾಯಿನ್, ಸಂಪುಟ–8, ಪುಟ–398)**.

ಗ್ರಂಥ "ಕರಾಮತುಸ್ಸಾದಿಖೀನ್" ಅನಂತರ ಗ್ರಂಥ "ನೂರುಲ್ ಹಖ್" ಬರೆದ ನಂತರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) 1894 ರಲ್ಲಿ ಇನ್ನೊಂದು ಮೇರುಕೃತಿ "ಸಿರ್ರುಲ್ ಖಿಲಾಫ್" ಸಾಹಿತ್ಯದಿಂದ ಕೂಡಿದ ಅರಬಿಯಲ್ಲಿ ಬರೆದರು. ಅದರ ವಿರುದ್ಧವಾಗಿಯೂ ಬರೆಯಲು ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಆಹ್ವಾನ ನೀಡಿದರು.

ಅವರು ಗ್ರಂಥದ ಶೀರ್ಷಿಕೆಯಲ್ಲಿ ಬರೆದರು.

"ಈ ಗ್ರಂಥ ಶೇಖ್ ಮೊಹಮ್ಮದ್ ಹುಸೇನ್ ಬಟೌಲ್ವಿ ಮತ್ತು ಇತರ ಕಾಫಿರ್ ಎಂದು ಸಾರುತ್ತಿರುವ ಮೌಲ್ವಿಗಳ ಮೌಲ್ವಿತನದ ನೈಜತೆ ತಿಳಿಯಲು 27 ರೂಪಾಯಿ ಬಹುಮಾನದ ವಾಗ್ದಾನದೊಂದಿಗೆ ಪ್ರಕಟಪಡಿಸುತ್ತಿದ್ದೇನೆ. 27 ದಿನಗಳು ಬರೆಯಲು ಅವಧಿ ನೀಡಲಾಗಿದೆ. ಈ 27 ದಿನಗಳು ಮುದ್ರಣಗೊಂಡ ದಿನದಿಂದ ಹಿಡಿಯಲಾಗುವುದು."

ಅವರು ಈ ಗ್ರಂಥ ಬರೆಯುವ ಉದ್ದೇಶ ಗುರಿ ಮತ್ತು ಅದರ ಮಹಾನತೆಯ ಕುರಿತು ಮುಖ ಪುಟದಲ್ಲಿಯೇ ಬರಹ ನೀಡಿದರು.

"ಈ ಗ್ರಂಥ ಶಿಯಾ ಪಂಥ ಮತ್ತು ಸುನ್ನಿಗಳ ಮಧ್ಯ ನಿರ್ಣಾಯಕವಾಗಿದೆ. ಖಿಲಾಫತ್ ಪೈಕಿ ಮಾರ್ಗದರ್ಶನ ನೀಡುತ್ತದೆ ಮತ್ತು ವಿರೋಧಿಗಳ ನೆಪಗಳನ್ನು ರದ್ದುಗೊಳಿಸುತ್ತದೆ. ಸುಳ್ಳುಗಾರರ ಸುಳ್ಳನ್ನು ಬಯಲುಗೊಳಿಸುತ್ತದೆ. ನಿರ್ಲಜ್ಜರು ಮತ್ತು ಸತ್ಯವನ್ನು ಅರಿಯದವರು ಮಾತ್ರ ಅದನ್ನು ತಿರಸ್ಕರಿಸುವರು."

ಮುಖಪುಟದಲ್ಲಿಯೇ ತನ್ನ ಒಂದು ಅರಬಿ ಕವನ ಸಾಲಿನಲ್ಲಿ ಅರುಹಿದರು.

**ಕಿತಾಬುನ್ ಅಝೀಝುನ್ ಮುಹತಮುನ್ ಯುಫ್‌ಹಿಮುಲ್ ಇದಾ**
**ಫನಹಮದು ಬಾರಿಅನಾ ಅಲಾ ಮಾ ಅಸ್‌ಅದ"**

ಅರ್ಥಾತ್ ಇದು ಸರ್ವಶಕ್ತ ಪ್ರಭಾವಿ ಗ್ರಂಥವಾಗಿದೆ. ಅದು ತನ್ನ ಶತ್ರುಗಳನ್ನು ನಿರುತ್ತರಗೊಳಿಸುವುದು. ಅಂದ ಹಾಗೆ ನಾವು ಈ ಭಾಗ್ಯವನ್ನು ದಯಪಾಲಿಸಿದ ಅಲ್ಲಾಹನಿಗೆ ಕೃತಜ್ಞರಾಗಿದ್ದೇವೆ.

ಸಯ್ಯದ್‌ನಾ ಹಝುರತ್ ಮಸೀಹ್ ಮೌಊದ್(ಅ) ಗ್ರಂಥ "ಸಿರ್ರುಲ್ ಖಿಲಾಫ್," ನ ವಿರುದ್ಧವಾಗಿ ಬರೆಯಲು ಮತ್ತು ಇದರಂತೆ ಮತ್ತೊಂದು ಗ್ರಂಥ ರಚಿಸಿದರೆ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ 27 ರೂಪಾಯಿಯ ಬಹುಮಾನವನ್ನು ನಿಗಧಿಗೊಳಿಸಿದರು. ಹಾಗೂ ಅದರ ನ್ಯೂನತೆಗಳನ್ನು ಎತ್ತಿ ತೋರಿಸಿದರೆ ಒಂದೊಂದು ನ್ಯೂನತೆಗೆ ಒಂದೊಂದು ರೂಪಾಯಿಯಂತೆ, ಮತ್ತೆ ಅದನ್ನೂ ಹೆಚ್ಚಿಸಿ ಒಂದು ನ್ಯೂನತೆಗೆ ಎರಡು ರೂಪಾಯಿನ್ನಾಗಿ ಮಾಡಿದರು. ಶರತ್ತೇನೆಂದರೆ ಮುಹಮ್ಮದ್ ಹುಸೇನ್ ಬಟೌಲ್ವಿ ಎದುರಾಗಿ ಬರೆದು ತೋರಿಸಬೇಕು. ಕೇವಲ ಟೀಕೆ ಮಾಡಲು ಅನುಮತಿ ನೀಡಲಿಲ್ಲ. ಎಲ್ಲಿಯವರೆಗೆ ಈ ಗ್ರಂಥದ ಎದುರಾಗಿ ಗ್ರಂಥ ಒಂದನ್ನು ಬರೆದು ತನ್ನ ಜ್ಞಾನ ಪ್ರಕಟಪಡಿಸದೆ ಮಾನ್ಯ ಆಗದು. ಕೇವಲ ಟೀಕೆ ಟಿಪ್ಪಣಿ ಯಾರು ಸಹ ಮಾಡಬಹುದಾಗಿದೆ. ಇವೆಲ್ಲದರ ಬಗ್ಗೆ ನಾವು ಇನ್‌ಶಾಲ್ಲಾಹ್ ಮುಂದಿನ ಸಂಚಿಕೆಗಳಲ್ಲಿ ಪ್ರಸ್ತುತಪಡಿಸುವೆವು. **(ಮನ್ಸೂರ್ ಅಹ್ಮದ್ ಮನ್ಸೂರ್)**

---

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅವಲಂಬಿತವಾಗಿರುವುದು.

ಹುಝೂರ್ ಹೇಳಿದರು. ಮುಸ್ಲಿಮರ ಈ ದುಸ್ಥಿತಿಯ ಕುರಿತು ಭವಿಷ್ಯವಾಣಿ ನುಡಿಯುತ್ತ ಹಝ್ರತ್ ರಸೂಲುಲ್ಲಾಹ್(ಸ) ಈ ಸುಸಂಧಿಯೂ ನೀಡಿದ್ದರು. ಇಂತಹ ಕ್ಷೋಭೆ ಗೊಂದಲಕಾರಿ ಕಾಲದಲ್ಲಿ ಅಲ್ಲಾಹನು ಇಸ್ಲಾಮ್ ಧರ್ಮವನ್ನು ಪುನಶ್ಚೇತನಗೊಳಿಸಲು ಮತ್ತು ಅದರ ನಿಜವಾದ ಶಿಕ್ಷಣಗಳನ್ನು ಪ್ರಸಾರಗೊಳಿಸಲು ವ್ಯಕ್ತಿಯೊರ್ವನನ್ನು ಕಳುಹಿಸುವನು. ಅವನನ್ನು ಮಸೀಹ್ ಮೌಊದ್ ಮತ್ತು ಇಮಾಮ್ ಮಹದಿಯಾಗಿ ಕಳುಹಿಸಲಾಗುವುದು. ಅವನು ಇಸ್ಲಾಮಿನ ಶಾಂತಿಪೂರ್ಣ ಮತ್ತು ನಿಜವಾದ ಶಿಕ್ಷಣವನ್ನು ಲೋಕದಲ್ಲೆಲ್ಲ ಸ್ಥಾಪಿಸುವನು. ಅವನು ಮಾನವೀಯತೆಯನ್ನು ಇಸ್ಲಾಮಿನ ನಿಜವಾದ ಆಧ್ಯಾತ್ಮಿಕ ಪ್ರಕಾಶದಿಂದ ಪ್ರಕಾಶಿತನಾಗಿ ಮಾಡುವನು.

ಹುಝೂರ್ ಹೇಳಿದರು: ಇಂದು ನಾವು ಅಲ್ಲಾಹನ ಅನುಗ್ರಹದಿಂದ ನೋಡುತ್ತಿದ್ದೇವೆ. ಇಂದು ಆ ಮಹೋನ್ನತ ಭವಿಷ್ಯವಾಣಿಯ ಎರಡೂ ಭಾಗಗಳು ಅಕ್ಷರಶಃ ಪೂರ್ಣಗೊಂಡಿದೆ. ಅಂದರೆ ಒಂದೆಡೆ ಇಸ್ಲಾಮ್ ಮತ್ತು ಇಸ್ಲಾಮಿನ ಶಿಕ್ಷಣ ಕಲುಷಿತಗೊಂಡಿವೆ. ಇನ್ನೊಂದೆಡೆ ಅಲ್ಲಾಹನು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ರವರ ರೂಪದಲ್ಲಿ ಮಸೀಹ್ ಮೌಊದ್ ಮಹದಿ ಮೌಊದ್‌ರನ್ನು ಸಹ ಕಳುಹಿಸಿದ್ದಾನೆ. ಹಝ್ರತ್ ಅಖದಸ್(ಅ) ತನ್ನ ಜೀವಿತದಲ್ಲಿ ಇಸ್ಲಾಮಿನ ನಿಜವಾದ ರೂಪವನ್ನು ತೋರಿಸಿದರು. ಅದರ ಮಹೋನ್ನತವಾದ ಶಿಕ್ಷಣಗಳನ್ನು ಲೋಕದ ಮುಂದೆ ಪ್ರಸ್ತುತಪಡಿಸಿದರು. ಅವರು ಹಝ್ರತ್ ರಸೂಲುಲ್ಲಾಹ್(ಸ) ರವರೇ ಮಾನವೀಯತೆಯ ಇತಿಹಾಸದಲ್ಲಿ ಶಾಂತಿಯ ಸರ್ವಶ್ರೇಷ್ಠ ಸರದಾರರು ಹಾಗೂ ಮಾರ್ಗದರ್ಶಕರಾಗಿದ್ದಾರೆಂದು ಸಾಬೀತುಪಡಿಸಿದರು. ಆದುದರಿಂದ ಈ ಮಹೋನ್ನತ ಭವಿಷ್ಯವಾಣಿ ಪೂರ್ಣಗೊಂಡಿದೆ. ಈ ನಾಮಧಾರಿ ಮುಸ್ಲಿಮರ ಭಯಂಕರವಾದ ಕೃತ್ಯಗಳನ್ನು ನೋಡಿ ಅಹ್ಮದಿ ಮುಸ್ಲಿಮರ ವಿಶ್ವಾಸಕ್ಕೆ ಶಕ್ತಿ ದೊರೆಯುತ್ತದೆ.

ಹುಝೂರ್ ಹೇಳಿದರು. ಈ ಪರಿಚಯದ ನಂತರ ಈಗ ನಾನು ಸಂಕ್ಷಿಪ್ತವಾಗಿ ಹಝ್ರತ್ ರಸೂಲುಲ್ಲಾಹ್(ಸ) ರವರ ಆ ನಿಜವಾದ ಶಿಕ್ಷಣಗಳನ್ನು ಪ್ರಸ್ತುತ ಪಡಿಸಬಯಸುವೆನು. ಅದು ಲೋಕದಲ್ಲಿ ದೀರ್ಘಕಾಲದ ಶಾಂತಿ ಸ್ಥಾಪಿಸಲು ಹಝ್ರತ್ ರಸೂಲುಲ್ಲಾಹ್(ಸ) ರವರ ಪ್ರಯತ್ನಗಳ ಪ್ರೇರಣ ಶಕ್ತಿಯಾಗಿದೆ.

ಹುಝೂರ್ ಹೇಳಿದರು. ಒಂದು ಪ್ರಾಥಮಿಕ ಹಂತದ ಮತ್ತು ಮುಖ್ಯ ತತ್ವ ಇದಾಗಿದೆ. ಹಝ್ರತ್ ರಸೂಲುಲ್ಲಾಹ್(ಸ) ರವರು ನಮಗೆ ಕಲಿಸಿದ್ದೇನೆಂದರೆ ಲೋಕದಲ್ಲಿ ಪ್ರತಿಯೊಬ್ಬರ ಯೋಚನಾಶಕ್ತಿ ಮತ್ತು ಆಧ್ಯತೆ ಒಬ್ಬರಿಂದ ಮತ್ತೊಬ್ಬರಲ್ಲಿ ಭಿನ್ನವಾಗಿರುತ್ತದೆ. ಹೆಚ್ಚಿನ ಜನರು ಶಾಂತಿ ಬಯಸುತ್ತಾರೆ. ಇದು ಸತ್ಯವಾಗಿದೆ. ಆದರೆ ಹಲವರು ಕೇವಲ ತಮ್ಮ ಸುರಕ್ಷತೆ ಮತ್ತು ವೈಯಕ್ತಿಕ ಶಾಂತಿಗೆ ಆಧ್ಯತೆ ನೀಡುವವರಾಗಿದ್ದಾರೆ. ಅವರಿಗೆ ಇನ್ನೊಬ್ಬರ ಹಿತ ಬೇಕಾಗಿರುವುದಿಲ್ಲ. ಅಥವಾ ಬಯಸುವುದಿಲ್ಲ. ಮಾನವರ ಮನೋಜ್ಞಾನದಿಂದ ತಿಳಿದುಬರುತ್ತದೆ. ಎಲ್ಲಿ ಪ್ರತಿಯೊಬ್ಬ ವ್ಯಕ್ತಿ ಶಾಂತಿ ನೆಮ್ಮದಿಯಿಂದ ಇರಬಯಸುತ್ತಾನೋ, ಅಲ್ಲೇ ಹೆಚ್ಚಿನ ಜನರು ಅವರ ಶತ್ರುಗಳನ್ನು ಅಥವಾ ವಿರೋಧಿಗಳನ್ನು ಸಂತೋಷದಿಂದ ಮತ್ತು ಶಾಂತಿಯಿಂದ ಜೀವಿಸಲು ಇಷ್ಟಪಡುವುದಿಲ್ಲ. ಇದು ವಾಸ್ತವವಾಗಿದೆ.

ಹುಝೂರ್ ಹೇಳಿದರು. ಇದು ಸಹ ಒಂದು ಸತ್ಯ ಮಾತಾಗಿದೆ. ಜನರು ಶಾಂತಿಯ ವಿವಿಧ ವಿಧಾನಗಳಿಗೆ ಪ್ರಾಮುಖ್ಯತೆ ನೀಡುತ್ತಾರೆ. ಉದಾಹರಣೆಗೆ ಕೆಲವರು ಕೇವಲ ತಮ್ಮ ಮನಸ್ಸಿನ ಶಾಂತಿಗೆ ಪ್ರಾಮುಖ್ಯತೆ ನೀಡುತ್ತಾರೆ. ಕೆಲವರು ತಮ್ಮ ಮನೆಯ ಶಾಂತಿ ಹಾಗೂ ನೆಮ್ಮದಿಗೆ ಪ್ರಾಮುಖ್ಯತೆ ನೀಡುತ್ತಾರೆ. ಅದರ ಹೊರತು ಇತರರು ತಮ್ಮ ನೆರೆಹೊರೆಯವರ ಶಾಂತಿ ಬಯಸುವವರಾಗಿರುತ್ತಾರೆ. ಕೆಲ ಜನರು ತಮ್ಮ ಕ್ಷೇತ್ರಗಳಲ್ಲಿ ಮತ್ತು ನಗರಗಳಲ್ಲಿ ಇನ್ನಿತರರು ತಮ್ಮ ದೇಶವನ್ನು ಶಾಂತಿಗೋಸ್ಕರ ಪ್ರಾಧಾನ್ಯತೆ ನೀಡುವವರಾಗಿರುತ್ತಾರೆ. ಆದರೆ ತನ್ನ ವಿಶಿಷ್ಠ ಸ್ವಾರ್ಥ ಸಾಧನೆಗೆ ಹೊರತುಪಡಿಸಿ ಅವರಿಗೆ ಇನ್ನೊಬ್ಬರ ಬಗ್ಗೆ ಚಿಂತೆ ಇರುವುದಿಲ್ಲ. ಇತರ ನಗರಗಳಲ್ಲಿ ಮತ್ತು ದೇಶಗಳಲ್ಲಿ ಘಟಿಸುತ್ತಿದೆ. ಅವರಿಗೆ ಲೋಕದ ಇತರ ಭಾಗಗಳಲ್ಲಿ ವಾಸಿಸುವ ಜನರ ದುಃಖ ದುಮ್ಮಾನಗಳ ಬಗ್ಗೆ ಯಾವ ಅನುಕಂಪ ಮತ್ತು ಪ್ರೀತಿ ಲೆಕ್ಕಿಸುವುದಿಲ್ಲ.

ಹುಝೂರ್ ಹೇಳಿದರು. ಹಿಂದಿನ ಕಾಲಗಳಲ್ಲಿ ಇಂತಹ

ಉದಾಸೀನತೆಗಳಿಗೆ ಮತ್ತು ಅಲಸ್ಯತೆಗೆ ಕಾರಣಗಳಿದ್ದವು. ಏಕೆಂದರೆ ಸಮಾಜ ಮತ್ತು ಸಮುದಾಯಗಳು ಇಂದಿನಂತೆ ಸಂಪರ್ಕ ಹೊಂದಿರಲಿಲ್ಲ. ಆ ಕಾಲದಲ್ಲಿ ಸಂಪರ್ಕ ಸಾಧನೆಗಳು ತುಂಬ ಸೀಮಿತವಾಗಿದ್ದವು. ಒಂದು ಕ್ಷೇತ್ರ ಹಾಗೂ ಒಂದು ದೇಶದ ಪರಿಸ್ಥಿತಿಗಳನ್ನು ತಿಳಿಯಲು ಒಂದು ಕಾಲವೇ ಬೇಕಾಗುತ್ತಿತ್ತು. ಹೆಚ್ಚಿನ ಸುದ್ದಿಗಳು ತಲುಪುವವರೆಗೆ ಹಳೆಯದಾಗಿ ಬಿಡುತ್ತಿದ್ದವು. ಪರಿಸ್ತಿತಿಗಳು ಮತ್ತೆ ಬದಲಾಗುತ್ತಿದ್ದವು. ಆದುದರಿಂದ ಆ ಕಾಲದಲ್ಲಿ ಇನ್ನೊಬ್ಬರ ಕಷ್ಟ ದುಃಖಗಳನ್ನು ತಕ್ಷಣ ತಿಳಿದುಕೊಳ್ಳಲು ಮತ್ತು ಜನರಿಗೆ ನೆರವು ನೀಡುವುದು ತುಂಬ ಕಷ್ಟದ ಕೆಲಸವಾಗಿತ್ತು. ಆದರೆ ಇಂದು ಲೋಕವು ಅಪ್ಪಟ ಬದಲಾವಣೆ ಹೊಂದಿದೆ ಮತ್ತು Global Vilalge ಆಗಿಬಿಟ್ಟಿದೆ. ಅಂತೂ ಲೋಕವು ಪರಸ್ಪರ ಒಂದೂಗೂಡಿದೆ. ದೂರಗಳು ಅಳಿದಿವೆ ಮತ್ತು ಸಂಪರ್ಕದ ಅಡೆತಡೆಗಳು ದೂರವಾಗಿವೆ. ಈಗಲೂ ಈ ವಾಸ್ತವದಿಂದ ನಿರಾಕರಿಸುತ್ತಿದ್ದಾರೆ. ನಾವು ಪರಸ್ಪರ ಸಂಬಂಧ ಹೊಂದಬಹುದು ಮತ್ತು ಸಂಪರ್ಕಿಸಬಹುದು.

ಹುಝೂರ್ ಹೇಳಿದರು. ಉದಾಹರಣೆಗೆ ಹೆಚ್ಚಿನ ಜನರು ವಿಶ್ವಾಸ ಹೊಂದಿದವರಾಗಿದ್ದಾರೆ. ಮಧ್ಯ ಪ್ರಾಚ್ಯ ಅಥವಾ ಆಫ್ರಿಕಾದ ಪರಿಸ್ಥಿತಿಗಳಿಂದ ಯೂರೋಪ್ ಮತ್ತೆ ಉತ್ತರ ಅಮೇರಿಕಾದ ಪರಿಸ್ಥಿತಿಗಳ ಮೇಲೆ ಯಾವ ವ್ಯತ್ಯಾಸ ಬೀಳವುದಿಲ್ಲ. ಅದೇ ರೀತಿ ಆಸ್ಟ್ರೇಲಿಯಾ ಮತ್ತು ಪೂರ್ವ ಮಧ್ಯದಲ್ಲಿ ವಾಸಿಸುವ ಹೆಚ್ಚಿನ ಜನರು ಭಾವಿಸುವುದೇನೆಂದರೆ, ಲೋಕದ ಇತರ ಭಾಗಗಳಲ್ಲಿ ಉಂಟಾಗಿರುವ ಕ್ಷೋಭೆಗಳು, ಉದಾಹರಣೆಗೆ ಯುಕ್ರೇನ್ ಮತ್ತು ರಷ್ಯಾ ಮಧ್ಯದ ಸಮಸ್ಯೆ, ಈ ಕ್ಷೋಭೆಗಳದ್ದು. ಅವರ ಜೀವನಗಳ ಮೇಲೆ ಮತ್ತು ಆ ದೇಶಗಳ ಮೇಲೆ ಯಾವ ಪ್ರಭಾವವೂ ಇಲ್ಲ. ಸಾಮಾನ್ಯವಾಗಿ ತಿಳಿದಿರುವುದೇನೆಂದರೆ ಇಂದಿನ ಲೋಕದಲ್ಲಿ ಹೆಚ್ಚುತ್ತಿರುವ ಗೊಂದಲಗಳು ಮತ್ತು ಕ್ಷೋಭೆಗಳು ಕೇವಲ ಪ್ರಭಾವಿತ ಕ್ಷೇತ್ರಗಳಿಗೆ ಸೀಮಿತಗೊಂಡಿವೆ ಎಂದು. ಮತ್ತು ಇದರ ಪ್ರಭಾವ ಹೊರಗೆ ಹರಡುವುದಿಲ್ಲ ಎಂದು.

ಹುಝೂರ್ ಹೇಳಿದರು. ಈ ಮಾತುಗಳು ಒಂದೆಡೆ ಇರಲಿ. ಆದರೆ ಅದನ್ನು ಒರತುಪಡಿಸಿ ಒಂದು ಅತ್ಯಂತ ಮುಖ್ಯವಾದ ಸಮಸ್ಯೆಯಿದೆ. ಅದು ವರ್ತನೆಗಳ ಮೂಲಕ ಮತ್ತು ತಿಳುವಳಿಕೆಗಳಲ್ಲಿ ಒಂದು ದೊಡ್ಡ ಪರಿವರ್ತನೆ ಹುಟ್ಟು ಹಾಕುತ್ತಿದೆ. ನಾನು ಮಾತನಾಡುತ್ತಿರುವ ಆ ಸಮಸ್ಯೆಯು ವಲಸೆಯ (imigration) ಸಮಸ್ಯೆಯಾಗಿದೆ. ಅದಕ್ಕಿಂತ ವಿಶಾಲವಾದ ಸಮಸ್ಯೆ ವಲಸೆಗಳದ್ದು. ಹೊಸ ಸಮಾಜದಲ್ಲಿ ಬೆರೆಯುವುದಾಗಿದೆ. ಹಲವು ದೇಶಗಳಲ್ಲಿ ನಾವು ಕಾಣುತ್ತಿದ್ದೇವೆ. ವಲಸೆಯವರ ಯುವ ಪೀಳಿಗೆಗಳಲ್ಲಿ ಒಂದು ಅಸಮಾಧಾನ ಮತ್ತು ಉದಾಸೀನತೆ ಹೆಚ್ಚುತ್ತಿದೆ. ಅವರಲ್ಲಿ ಕೆಲ ಯುವಕರು ಎಷ್ಟರಮಟ್ಟಿಗೆ ಉದಾಸೀನರಾಗಿದ್ದಾರೆಂದರೆ ಅವರು ಉಗ್ರವಾದಿಗಳಾಗುತ್ತಿದ್ದಾರೆ. ಅದರಿಂದ ವಾಸ್ತವವಾಗಿಯೂ ಒಂದು ಭಯ ಉತ್ಪನ್ನವಾಗತೊಡಗಿದೆ. ಏಕೆಂದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ಭಾವನೆ ಬೆಳೆಯತೊಡಗಿದೆ. ತಮ್ಮ ಯುವಕರು ಪ್ರಭಾವಿತರಾಗುತ್ತಿದ್ದಾರೆ. ಈ ಬೆಳವಣಿಗೆಯು ತುಂಬ ಅಪಾಯಕರವಾಗಿದೆ. ಅದರ ಪ್ರತಿರೋಧ ನೆಲೆಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಸರ್ಕಾರಗಳು ಮತ್ತು ಕಾನೂನು ಸ್ಥಾಪನೆಯ ಸಂಸ್ಥೆಗಳು ಏಷಿಯನ್ ಜನರ ಮೇಲೆ ಪ್ರತಿಬಂಧ ಹೇರುವ ಉದ್ದೇಶವೇನೆಂದರೆ ಅವರಿಂದ ಅವರ ಸಮಾಜ ಮತ್ತು ಜನರು ಸುರಕ್ಷಿತವಾಗಿರುವವರು.

ಹುಝೂರ್ ಹೇಳಿದರು. ಆದರೆ ಈ ನಿಲುವು ತಪ್ಪಾಗಿರುತ್ತದೆ. ಈ ದಾರುಣ ಸಮಸ್ಯೆಗಳ ಪರಿಹಾರ ಕಂಡುಬರುತ್ತಿಲ್ಲ. ಈ ಸಮಸ್ಯೆಗೆ ತಕ್ಕುದಾದ ಮತ್ತು ಪರಿಪೂರ್ಣ ರೀತಿಯ ಪರಿಹಾರ ಹುಡುಕಬೇಕಾಗಿದೆ. ಆದುದರಿಂದ ನಾನು ನಿಮಗೆ ತಿಳಿಯಪಡಿಸ ಬಯಸುತ್ತೇನೆ. ಇಸ್ಲಮಿನ ಪವಿತ್ರ ಪ್ರವಾದಿ(ಸ) ನಮ್ಮ ಮುಂದೆ ಈ ಸಮಸ್ಯೆಗಳ ಪರಿಹಾರ ಸೂಚಿಸಿರುತ್ತಾರೆ. ತಮ್ಮ ಪ್ರಕಾಶಮಯ ಶಿಕ್ಷಣಗಳ ಮೂಲಕ ಅವರು ಶಾಂತಿಯ ಸುವರ್ಣಮಯ ಕೀಲಿಗೈಗಳು ನಮಗೆ ಒಪ್ಪಿಸಿರುತ್ತಾರೆ. ಹಝ್‌ರತ್ ರಸೂಲುಲ್ಲಾಹ್(ಸ) ಸ್ಪಷ್ಟಪಡಿಸಿದರು. ಕೇವಲ ಲೌಕಿಕ ಸಾಧನೆಗಳಿಂದ ಮತ್ತು ಭೌತಿಕ ಅಭಿಲಾಷೆಗಳ ಮೇಲೆ ಅವಲಂಬಿತರಾಗಿ ಶಾಂತಿ ಪಡೆಯಲಾಗುವುದಿಲ್ಲ. ಅವರು ಉಪದೇಶ ನೀಡಿದರು. ಎಲ್ಲ ಜನರಿಗೆ ಅವರು ಮುಸ್ಲಿಮರಾಗಿರಲಿ ಅಥವಾ ಅಮುಸ್ಲಿಮರು ಕ್ಷೋಭೆಗಳಿಂದ ರಕ್ಷಿಸಲ್ಪಡಲು ಮತ್ತು ನಿರಾಶೆಯ ಹಾಗೂ ದ್ವೇಷಗಳ ಜ್ವಾಲೆಗಳಿಂದ ರಕ್ಷಿಸಲ್ಪಡುವ ಕೇವಲ ಒಂದೇ ಮಾರ್ಗವಿದೆ.

ಹುಝೂರ್ ಹೇಳಿದರು. ಹಝುರತ್ ರಸೂಲುಲ್ಲಾಹ್(ಸ) ಉಪದೇಶ ನೀಡಿದರು. ನಿಜವಾದ ಶಾಂತಿ ಸ್ಥಾಪಿಸಲು ಮಾನವ ಕುಲಕ್ಕೆ ತನ್ನ ಸೃಷ್ಟಿಕರ್ತನ ಗುರುತಿಸುವಿಕೆ ಮತ್ತು ಅವನು ಮಾರ್ಗದಲ್ಲಿ ಶಿರಬಾಗಬೇಕಾಗಿದೆ. ಹಝ್‌ರತ್ ರಸೂಲುಲ್ಲಾಹ್(ಸ) ಮೊದಲೇ ಎಚ್ಚರಿಸಿದರು. ಒಂದು ಕಾಲ ಬರುವುದು. ಆಗ ಮುಸ್ಲಿಮರು ಸಹ ತನ್ನ ಧರ್ಮದ ನಿಜವಾದ ಶಿಕ್ಷಣ ಮರೆಯುವರು ಮತ್ತು ಅಲ್ಲಾಹನ ಬಗ್ಗೆ ಬರವಸೆ ಹೊಂದಿರುವುದಿಲ್ಲ. ಅವರ ವಿಶ್ವಾಸ ಕೇವಲ ನಾಲಿಗೆಯವರೆಗೆ ಸೀಮಿತವಾಗಿರುವುದು. ಅದೇ ರೀತಿ ಇತರ ಧರ್ಮಗಳ ಜನರು ಸಹ ಅಲ್ಲಾಹನನ್ನು ನಿಜವಾದ ರೂಪದಲ್ಲಿ ಗುರುತಿಸಲಾರರು ಮತ್ತು ಯಾರು ಧರ್ಮಗಳ ಮೇಲೆ ವಿಶ್ವಾಸ ಹೊಂದಿರುವುದಿಲ್ಲವೋ ಅವರು ದೇವದ ಅಸ್ತಿತ್ವವನ್ನೇ ಧಿಕ್ಕರಿಸುವರು.

ಹುಝೂರ್ ಹೇಳಿದರು. ಹಝ್‌ರತ್ ರಸೂಲುಲ್ಲಾಹ್(ಸ) ಗುರುತಿಸಿ ಕೊಟ್ಟಂತಹ ಅಲ್ಲಾಹನು ಸರ್ವಲೋಕಗಳ ಪರಿಪಾಲಕನಾಗಿದ್ದಾನೆ. ಆ ಪ್ರಭು ಹಲವು ಗುಣಗಳನ್ನು ಹೊಂದಿದವನಾಗಿದ್ದಾನೆ. ಅದರಲ್ಲಿ ಒಂದು “ಸಲಾಮ್” ಅಂದರೆ ಶಾಂತಿ ಸ್ಥಾಪಿಸುವವನು ಎಂದಾಗಿದೆ. ಅದಾಗ್ಯೂ ಪವಿತ್ರ ಖುರ್‌ಆನ್‌ನಲ್ಲಿ ಸೂರ ಹಶರ್ ವಚನ 24 ರಲ್ಲಿ ಅಲ್ಲಾಹನು ಹಝ್‌ರತ್ ರಸೂಲುಲ್ಲಾಹ್(ಸ) ರವರಿಗೆ ಹೇಳಿದನು. “ಲೋಕಕ್ಕೆ ತಿಳಿಸಿ ಹೇಳು. ಆ ಅಧಿಪತಿ ಮತ್ತು ಶಾಂತಿದೂತನ ಮೇಲೆ ವಿಶ್ವಾಸವಿರಿಸಿರಿ. “ಸಲಾಂ” ಅರ್ಥ ಲೋಕ್ಕೆ ಶಾಂತಿ ಪರಿಶುದ್ಧನು ನೀಡುವವನು. ಆ ಪ್ರಕಾಶದಿಂದ ಶಾಂತಿಯ ಕಿರಣಗಳು ಹೊರಡುತ್ತವೆ. ಆದುದರಿಂದ ಎಲ್ಲ ರೀತಿಯ ಶಾಂತಿದೂತ ಆದ ಕಾರಣ ಅಲ್ಲಾಹನು ಎಲ್ಲ ಜನರಲ್ಲಿ ಸೌಹಾರ್ಧತೆ ಮತ್ತು ಶಾಂತಿ ಬಯಸುತ್ತಾರೆ.

ಹುಝೂರ್ ಹೇಳಿದರು. ಯಾವ ರೀತಿ ಹೆತ್ತವರು ತಮ್ಮ ಮಕ್ಕಳು ಜಗಳವಾಡಲು ಬಯಸುವುದಿಲ್ಲವೋ, ಮನೆ ಕೆಡಲು ಬಯಸುವುದಿಲ್ಲವೋ, ಅದೇ ರೀತಿ ಅಲ್ಲಾಹನು ಅವನ ಸೃಷ್ಟಿಯಲ್ಲಿ ಕ್ಷೋಬೆ ಬಯಸುವುದಿಲ್ಲ. ಹೆತ್ತವರು ಯಾವಾಗಲೂ ಸೌಮ್ಯ ಹಾಗೂ ಶಾಂತಿಪೂರ್ಣ ಮಕ್ಕಳನ್ನೇ ಇಷ್ಟಪಡುತ್ತಾರೆ. ಅದೇ ರೀತಿ ದೇಶೀಯ ಕಾನೂನುಗಳು ಸಹ ಅವರನ್ನೇ ಇಷ್ಟಪಡುತ್ತವೆ. ಅಂದ ಹಾಗೆ ನಮ್ಮ ವಿಶ್ವಾಸವಿದೆ. ಅಲ್ಲಾಹನ ತಮ್ಮ ಭಾವನೆಗಳ ಮೇಲೆ ನಿಯಂತ್ರಣ ಸಾಧಿಸಿರುವವರೊಡನೆ ಪ್ರೀತಿಸುತ್ತಾನೆ. ನಾವು ಈ ತಥ್ಯದ ಮೇಲೆ ವಿಚಾರಿಸುವವರಾದರೆ ಪ್ರಖರ ಬೆಳಕಿನಂತೆ ಉಜ್ವಲಗೊಳ್ಳುವುದು. ಉಗ್ರವಾದಿಗಳಾದ ನಾಮಧಾರಿ ಮುಸ್ಲಿಮರು ತಮ್ಮ ವಾದದಲ್ಲಿ ಎಡವಿದ್ದಾರೆ. ಅಲ್ಲಾಹನು ಮುಸ್ಲಿಮರಿಗೆ ಖಡ್ಗಗಳ ಮೂಲಕ ರಕ್ತಪಾತ ಮಾಡಲು ಆಜ್ಞಾಪಿಸುತ್ತಾನೆ ಎಂಬ ವಾದ ಮಿಥ್ಯವಾಗಿದೆ.

ಹುಝೂರ್ ಹೇಳಿದರು. ಹಝ್‌ರತ್ ರಸೂಲುಲ್ಲಾಹ್(ಸ) ಅವರ ಕಾಲದಲ್ಲಿ ಆದ ಯುದ್ಧಗಳನ್ನು ಅದರ ನೈಜ ಸ್ಥಿತಿಗತಿಗಳನ್ನು ಪರಿಶೀಲಿಸಿ ನೋಡುವಂತಹದ್ದಾಗಿವೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಇಸ್ಲಾಮಿನ ಪ್ರಾರಂಭಿಕ ಕೆಲ ವರ್ಷಗಳಲ್ಲಿ ಹಝ್‌ರತ್ ರಸೂಲುಲ್ಲಾಹ್ (ಸ) ಮತ್ತು ಅವರ ಸಹಾಬರುಗಳು ನಿರ್ಧಯಿ ವಿರೋಧಗಳಿಗೆ ಮತ್ತು ಭಯಂಕರವಾದ ದೌರ್ಜನ್ಯಗಳಿಗೆ ಗುರಿಯಾಗಿದ್ದರು. ಹಲವು ವರ್ಷಗಳ ಸಹನೆಯ ನಂತರ ಹಝ್‌ರತ್ ರಸೂಲುಲ್ಲಾಹ್(ಸ) ರವರನ್ನು ಮುಸ್ಲಿಮೇತರ ಆಕ್ರಮಣಕಾರರ ವಿರುದ್ಧ ರಕ್ಷಣಾತ್ಮಕ ಯುದ್ಧಗಳಿಗೆ ಅಲ್ಲಾಹನಿಂದ ಅನುಮತಿ ದೊರಕಿತು. ಈ ಅನುಮತಿ ಪವಿತ್ರ ಖುರ್‌ಆನ್‌ನಲ್ಲಿ ಸೂರ ಹಜ್ಜ್ ವಚನ 40 ರಲ್ಲಿ ನೀಡಲಾಗಿದೆ. ಅಲ್ಲಿ ಅಲ್ಲಾಹನು ನುಡಿದನು. ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿಯಿದೆ, ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ, ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.

ಹುಝೂರ್ ಹೇಳಿದರು. ಪ್ರತಿ ಯುದ್ಧ ಮಾಡಲು ಏಕೆ ಅನಿವಾರ್ಯವಿತ್ತು. ಅದರ ಉತ್ತರ ಮುಂದಿನ ವಚನದಲ್ಲಿಯೇ ಅಂದರೆ ಸೂರ ಹಜ್ಜ್‌ನ 41 ವಚನದಲ್ಲಿ ಕೊಡಲಾಗಿದೆ. ಅಲ್ಲಾಹನು ನುಡಿದನು. ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು ಅವರು ಎಸಗುವ ದೌರ್ಜನ್ಯಗಳನ್ನು ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳು, ಇಗರ್ಜಿಗಳೂ ಹಯೂದಿ ಮಂದಿರಗಳೂ, ಮಸೀದಿಗಳೂ ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ.

ಹುಝೂರ್ ಹೇಳಿದರು. ಅಲ್ಲಾಹನು ಹಝ್‌ರತ್ ರಸೂಲುಲ್ಲಾಹ್(ಸ) ರವರಿಗೆ ದೌರ್ಜನ್ಯಗಳನ್ನು ಹಾಗೂ ಅನ್ಯಾಯವನ್ನು ಕೊನೆಗಾಣಿಸಲು ಯುದ್ಧಕ್ಕೆ ಅನುಮತಿ ನೀಡಲಾಯಿತು. ಈ ಅನುಮತಿ ಜನರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲು ಹವಣಿಸಿದ ಮತ್ತು ಹಕ್ಕುಗಳನ್ನು ದಮನಿಸಲು ಹೊರಟವರ ವಿರುದ್ಧ ನೀಡಲಾಯಿತು. ಈ ಅನುಮತಿ ಕೇವಲ ಇಸ್ಲಾಮಿನ ರಕ್ಷಣೆಗೋಸ್ಕರ ನೀಡಲಾಗಿರಲಿಲ್ಲ. ಬದಲು ಎಲ್ಲ ಧರ್ಮಗಳ ಹಾಗೂ ಎಲ್ಲ ವಿಶ್ವಾಸಿಗಳ ರಕ್ಷಣೆಗೋಸ್ಕರ ನೀಡಲಾಗಿತ್ತು. ಈ ವಚನದಿಂದ ನಮಗೆ ಇದು ಸಹ ಕಲಿಯಲು ಸಾಧ್ಯವಾಗುತ್ತದೆ. ಮಸೀದಿಗಳು ಮತ್ತು ಇತರ ಧಾರ್ಮಿಕ ಆರಾಧನೆ ಸ್ಥಳಗಳು ಶಾಂತಿಯ ತಾಣವಾಗಿರುತ್ತದೆ. ಇದು ಪ್ರೀತಿ ಸ್ನೇಹ ಪಸರಿಸಲು ನಿರ್ಮಿಸಲಾಗುತ್ತದೆಯೇ ಹೊರತು ಉಗ್ರವಾದ ಹರಡಿಸಲು ಅಲ್ಲ.

ಹುಝೂರ್ ಹೇಳಿದರು. ಮತ್ತೆ ಸೂರಾ ಅನ್‌ಫಾಲ್‌ನಲ್ಲಿ ವಚನ 62 ರಲ್ಲಿ ಅಲ್ಲಾಹನು ಹಝ್‌ರತ್ ರಸೂಲುಲ್ಲಾಹ್(ಸ) ರವರ ಮೇಲೆ ಅತ್ಯಂತ ಸುಂದರವಾದ ಶಿಕ್ಷಣವನ್ನು ಅವತರಿಸಿಕೊಟ್ಟಿದ್ದಾನೆ. ಅದು ಮುಸಲ್ಮಾನರಿಗೆ ಶಾಂತಿ ಮತ್ತು ರಕ್ಷಣೆ ಸ್ಥಾಪಿಸಲು ಮಾರ್ಗದರ್ಶನವಾಗಿದೆ. ಯುದ್ಧ ಸ್ಥಿತಿಯಲ್ಲೂ

ಮಾರ್ಗದರ್ಶನವಾಗಿದೆ. ಈ ವಚನದಲ್ಲಿ ಅಲ್ಲಾಹನು ಹೇಳಿದನು. ಅವರು ಶಾಂತಿಯೆಡೆಗೆ ವಾಲಿದರೆ ನೀವು ಸಹ ಅದಕ್ಕೆ ಒಪ್ಪು. ಅಲ್ಲಾಹನ ಮೇಲೆ ಭರವಸೆಯನ್ನಿಡು. ಇಲ್ಲಿ ಶತ್ರುಗಳ ನಿಯತ್ತಿನ ಮೇಲೆ ಗುಮಾನಿಪಡುವ ಬದಲು ಮುಸಲ್ಮಾನರಿಗೆ ಅಲ್ಲಾಹನ ಮೇಲೆ ಭರವಸೆಯನ್ನಿಡಲು ಸೂಚಿಸಲಾಗಿದೆ. ಅಲ್ಲಾಹನು ಮುಸಲ್ಮಾನರಿಗೆ ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ದ್ವೇಷಗಳನ್ನು ದೂರ ಮಾಡಲು ಉಪದೇಶಿಸಿದೆ. ಎಲ್ಲಿಯವರಗೆ ಎಂದರೆ ನಾಸ್ತಿಕರು ಅಲ್ಲಾಹನ ಮೇಲೆ ವಿಶ್ವಾಸವಿಲ್ಲದವರ ಮೇಲೂ ಅಂತೂ ಯಾವ ಸ್ಥಿತಿಯಲ್ಲೂ ಮುಸಲ್ಮಾನರಿಗೆ ಸೌಹಾರ್ಧತೆ ಒತ್ತು ನೀಡಿದೆ.

ಹುಝೂರ್ ಹೇಳಿದರು. ಇನ್ನೂ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಅಲ್ಲಾಹನು ಇನ್ನೊಂದು ವಚನದೆಡೆ ಗಮನಸೆಳೆದಿದೆ. ಅದು ಪವಿತ್ರ ಖುರ್‌ಆನ್‌ನ ಸೂರ ಹಾಮೀಮ್ ಸಜ್‌ದಾ: ವಚನ 35 ಆಗಿದೆ. ಅಲ್ಲಾಹನು ಹೇಳಿದನು. ಶಾಂತಿ ಸ್ಥಾಪನೆಗೋಸ್ಕರ ಕೆಡುಕಿನ ಉತ್ತರ ಒಳಗಿನಿಂದ ಕೊಡು. ಈ ವಚನದ ಹಿಂದೆ ಅಡಗಿರುವ ಜಾಣ್ಮೆ ಎಂದರೆ ದ್ವೇಷದ ಪ್ರತಿಯಾಗಿ ಪ್ರೀತಿ ತೋರಿಸಿದರೆ ಶತ್ರುತ್ವ ದೂರವಾಗಿ ಪ್ರೀತಿಯೆಡೆ ಬರಲು ಭರವಸೆ ಮೂಡುತ್ತದೆ.

ಇದು ಎಷ್ಟೊಂದು ಸುಂದರ ಶಿಕ್ಷಣವಾಗಿದೆ. ನಿಸ್ಸಂಶಯವಾಗಿಯೂ ಇಂತಹ ಅಗಣಿತ ಉದಾಹರಣೆಗಳಿವೆ. ಅದರಿಂದ ಸಾಬೀತಾಗುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ಶಾಂತಿ, ಸೌಹಾರ್ಧತೆ, ರಕ್ಷಣೆ ಮತ್ತು ಪ್ರೀತಿಯ ಶಿಕ್ಷಣವನ್ನು ತಂದಿರುತ್ತಾರೆ. ನಾನು ಅವುಗಳಲ್ಲಿ ಕೆಲವೊಂದು ಮಾತ್ರ ಪ್ರಸ್ತುತಪಡಿಸಿದ್ದೇನೆ. ಇದರಿಂದ ಸಾಬೀತಾಗುತ್ತಿದೆ. ಇಸ್ಲಾಮಿನ ಪ್ರಭು ಅಂದರೆ ಅಲ್ಲಾಹನು ತನ್ನ ಸೃಷ್ಟಿಗೋಸ್ಕರ ಶಾಂತಿ, ಪ್ರೀತಿ ಮತ್ತು ಸ್ನೇಹ ಬಯಸುವವನಾಗಿದ್ದಾನೆ.

ಹುಝೂರ್ ಹೇಳಿದರು. ಆದುದರಿಂದ ಯಾರು ಇಸ್ಲಾಮಿನ ಶಿಕ್ಷಣ ಉಗ್ರವಾದ ಅಥವಾ ದ್ವೇಷ ಹರಡಿಸುವಂತಹದ್ದಾಗಿದೆ ಎಂದು ಭಾವಿಸುತ್ತಾರೆ. ಅವರು ತನ್ನ ಮಿದುಳುಗಳಿಂದ ಮತ್ತು ಹೃದಯಗಳಿಂದ ಇಂತಹ ಆತಂಕಗಳನ್ನು ತಪ್ಪು ಕಲ್ಪನೆಗಳನ್ನು ಸದಾಕಾಲಕ್ಕಾಗಿ ಬಿಡಬೇಕಾಗಿದೆ. ಇಂದು ನಾವು ಕಾಣುತ್ತಿರುವ ಹತ್ಯೆಗಳು, ವಿನಾಶ ಮತ್ತು ದಂಗೆಯ ಅಪವಾದ ಇಸ್ಲಾಮ್ ಅಥವಾ ಇಸ್ಲಾಮಿನ ಶಿಕ್ಷಣದ ಮೇಲೆ ಸಾಧುವಾಗುವುದಿಲ್ಲ. ಬದಲು ಅದು ನಾಮಧಾರಿ ಮುಸಲ್ಮಾನರ ದುಷ್ಕೃತಗಳಾಗಿವೆ. ಅವು ದ್ವೇಷ ಮತ್ತು ಸ್ವಾರ್ಥದಿಂದ ತುಂಬಿಕೊಂಡಿವೆ. ಅವರು ತಮ್ಮ ವೈಯುಕ್ತಿಕ ಹಿತಕ್ಕಾಗಿ ಇಸ್ಲಾಮಿನ ನಿಜವಾದ ರೂಪವನ್ನು ಕಲುಷಿತಗೊಳಿಸುತ್ತಿದ್ದಾರೆ.

ಹುಝೂರ್ ಹೇಳಿದರು. ಇಂದು ಅಲ್ಲಾಹನ ವಾಗ್ದಾನ ಪ್ರಕಾರ ಕೇವಲ ಅಹ್ಮದಿಯಾ ಜಮಾಅತ್ ಇಸ್ಲಾಮಿನ ನಿಜವಾದ ಶಿಕ್ಷಣದಿಂದ ಪ್ರಕಾಶಮಯ ಗೊಳಿಸುತ್ತಿದೆ. ಅದೇ ಕಾರಣದಿಂದ ಪ್ರತಿವರ್ಷ ಲಕ್ಷೋಪ ಮುಸ್ಲಿಮ್ ಬಂಧುಗಳು ಮತ್ತು ಮುಸ್ಲಿಮೇತರು ಅಹ್ಮದಿಯಾ ಮುಸ್ಲಿಮ್ ಜಮಾಅತಿನಲ್ಲಿ ಸೇರ್ಪಡೆ ಗೊಳ್ಳುತ್ತಿದ್ದಾರೆ. ಅವರು ಕೇವಲ ಅಲ್ಲಾಹನ ಪ್ರೀತಿ ಪಡೆಯಲು ಮತ್ತು ನಿಜವಾದ ಶಾಂತಿ ಹಾಗೂ ನೆಮ್ಮದಿ ಪಡೆಯಲು ಅಹ್ಮದಿ ಮುಸ್ಲಿಮರಾಗುತ್ತಿದ್ದಾರೆ. ಅಹ್ಮದಿಯರು ಆ ಅನ್ಯ ಜನರ ಹಾಗೆ ಅಲ್ಲ. ಅವರಿಗೆ ತಮ್ಮ ಭಾವನೆಗಳನ್ನು ಹಾಗೂ ಪ್ರತಿರೋಧ ನಿಯಂತ್ರಣದಲ್ಲಿರಲು ಸಾಧ್ಯವಾಗುತ್ತಿಲ್ಲ. ಆದ್ದರಿಂದಲೇ ಅವರು ಉಗ್ರವಾದದ ಭಾಗವಾಗುತ್ತಿದ್ದಾರೆ. ಮತ್ತು ತನ್ನ ದೌರ್ಜನ್ಯಭರಿತ ರೀತಿಯಿಂದಾಗಿ ಇಸ್ಲಾಮಿನ ಪ್ರಿಯವಾದ ಹೆಸರು ಕೆಡಿಸುತ್ತಿದ್ದಾರೆ.

ಹುಝೂರ್ ಹೇಳಿದರು. ಇಂದು ಇಸ್ಲಾಮ್ ಧರ್ಮವನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ಪ್ರಸ್ತುತಪಡಿಸುತ್ತಿದ್ದಾರೆ. ನಾವು ಅಹ್ಮದಿಯರು ಧೃತಿಗೆಡುವುದಿಲ್ಲ. ಖಿನ್ನತೆಗೊಳಗಾಗುವುದಿಲ್ಲ. ನಾವು ದೃಢವಾಗಿ ನಂಬಿದ್ದೇವೆ. ನಾವು ವಿಜಯಿಗಳಾಗುವೆವು. ಮತ್ತು ಒಂದು ದಿನ ಲೋಕದಲ್ಲಿ ಇಸ್ಲಾಮಿನ ವಾಸ್ತವ ಸೂರ್ಯವು ಅವಶ್ಯವಾಗಿ ಉದಯವಾಗುವುದು, ಎಲ್ಲ ದೇಶ ಸಮುದಾಯಗಳು ಅದರ ಸುಂದರವಾದ ಶಿಕ್ಷಣವನ್ನು ತಿಳಿಯುವರು.

ಹುಝೂರ್ ಹೇಳಿದರು. ಈ ಪದಗಳೊಂದಿಗೆ ಮತ್ತೊಮ್ಮೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನನ್ನ ಮಾತುಗಳನ್ನು ಮುಗಿಸುತ್ತೇನೆ. ನಿಮಗೆ ಧನ್ಯವಾದಗಳು. ನೀವು ತಮ್ಮ ಸಮಯವನ್ನು ವ್ಯಯಮಾಡಿ ಇಲ್ಲಿಗೆ ಬಂದಿರುತ್ತೀರಿ. ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ. ನಿಮ್ಮೆಲ್ಲರಿಗೂ ತುಂಬಾ ಧನ್ಯವಾದಗಳು.

ಹುಝೂರ್‌ರವರ ಈ ಸಂಬೋಧನೆ 4.45 ಗಂಟೆಯವರಗೆ ನಡೆಯಿತು. ಸಂಬೋಧನೆಯ ನಂತರ ಹುಝೂರ್ ದುಆ ಮಾಡಿಸಿದರು. ತರುವಾಯ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಅತಿಥಿಗಳ ಅನಿಸಿಕೆಗಳು:**

ಹುಝೂರ್‌ರವರ ಈ ಸಂಬೋಧನೆ ಅತಿಥಿಗಳ ಮೇಲೆ ಗಾಢವಾದ ಪ್ರಭಾವ ಬೀರಿತು. ಹಲವು ಅತಿಥಿಗಳು ತಕ್ಷಣ ತಮ್ಮ ಪ್ರತಿಕ್ರಿಯೆಗಳನ್ನು ನೀಡಿದರು. ಖಲೀಫತುಲ್ ಮಸೀಹ್ ಅವರ ಸಂಬೋಧನೆ ನಮ್ಮ ಹೃದಯಗಳನ್ನು ಯಾವ ರೀತಿ ಪರಿವರ್ತಿತಗೊಳಿಸಿದೆ. ಎಂದು ಕೆಲ ಅತಿಥಿಗಳು ತಮ್ಮ ಅನಿಸಿಕೆಗಳನ್ನು ಬಹಿರಂಗೊಳಿಸಿದ್ದಾರೆ. ಅವು ಕೆಳಗಿನಂತಿವೆ.

* ಮಿರಾಕಶಿನ ಮಿತ್ರರೊಬ್ಬರಾದ ಮುಸ್ತಫಾ ಜಿನ್ನಾಹ್ ಸಾಹಿಬ್ ಹೇಳುತ್ತಾರೆ, ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಅಸಮರ್ಥನಾಗಿದ್ದೇನೆ. ಎಂತಹ ಆಧ್ಯಾತ್ಮಿಕ ದೃಶ್ಯ ಕಂಡಿದ್ದೇನೆಂದರೆ ಅದು ನನ್ನ ಆತ್ಮದ ಆಳ ಸೇರಿದೆ. ಇಸ್ಲಾಮಿನ ನಿಜರೂಪ ನನಗೆ ಇಲ್ಲಿ ಕಂಡುಬಂದಿತು. ನಾನು ಸುಮಾರು ಎರಡು ವರ್ಷಗಳಿಂದ ಜಮಾಅತಿನ ಬಗ್ಗೆ ತಿಳಿದಿದ್ದೇನೆ. ಆದರೆ ಮೂರು ತಿಂಗಳಿನಿಂದ ವಿಧಿವತ್ತಾಗಿ ಜಮಾಅತಿನ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ನೋಡುತ್ತಿದ್ದೇನೆ. ಆದರೆ ಖಲೀಫರನ್ನು ಕಂಡು ಮತ್ತು ಅವರ ಭಾಷಣಗಳನ್ನು ಕೇಳಿ ಅಹ್ಮದಿಯತ್ತಿನ ಬಗ್ಗೆ ನನ್ನ ದೃಷ್ಟಿ ಬದಲಾಯಿತು. ಅಲ್ಲಾಹನು ನನಗೆ ಎಂತಹ ಬೈಅತ್ತಿನ ಭಾಗ್ಯ ದಯಪಾಲಿಸಬೇಕೆಂದರೆ, ನಾನು ಧರ್ಮದ ಸೇವಕನಾಗಿರಬೇಕು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಸಂದೇಶವನ್ನು ಲೋಕಾದ್ಯಂತ ತಲುಪಿಸುವವನಾಗಬೇಕು.

* ಬೆಲ್ಜಿಯಂನಿಂದ ಮರಾಕಶಿನ ಒಬ್ಬ ಮಿತ್ರರು ಮುಹಮ್ಮದ್ ಅಯಾನಿ ಸಾಹಿಬ್ ಜಲ್ಸಕ್ಕೆ ಬಂದಿದ್ದರು. ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೀಗೆ ಹೇಳಿದರು. ನಾನು ಒಂದು ವರ್ಷದಿಂದ ಅಹ್ಮದಿಯಾ ಮಸೀದಿ ಬ್ರಸೆಲ್ಸ್ ಹತ್ತಿರ ವಾಸಿಸುತ್ತಿದ್ದೇನೆ. ಸುಮಾರು ಮೂರು ತಿಂಗಳಿನಿಂದ ಅಹ್ಮದಿಅತ್ತಿನ ಬಗ್ಗೆ ಅಧ್ಯಯನ ಮಾಡುತ್ತಿದ್ದೇನೆ. ನಾನು ಅಹ್ಮದಿಅತ್ ಸಹ ಇತರ ಜಮಾಅತುಗಳಂತೆ "ಬಿದ್‌ಅತ್" (ನವೀನಾಚರಣೆ)ಗೆ ಒಳಪಟ್ಟಿದೆ. ಅಧ್ಯಯನ ಮಾಡುತ್ತಿದ್ದಂತೆಯೇ ನನ್ನ ಯೋಚನೆ ಬದಲಾಗುತ್ತ ಹೋಯಿತು. ಆದರೆ ನಾನು ಅಹ್ಮದಿಯಾಗುತ್ತೇನೆ ಎಂದು ಯೋಚಿಸಿರಲಿಲ್ಲ. ಈಗ ನನಗೆ ಮನಶ್ಯಾಂತಿ ದೊರೆತಿದೆ. ಈ ಸುಂದರ ನೈತಿಕತೆ, ಜಮಾಅತಿನಲ್ಲಿರುವ ಈ ವರ್ಣಭೇದರಹಿತ ಪ್ರೀತಿ, ಇದು ಮನುಷ್ಯರ ಪ್ರಯತ್ನಗಳಿಂದ ಸಾಧ್ಯವಿಲ್ಲ. ಅದು ಈ ಜಮಾಅತಿನ ಮೇಲೆ ಅಲ್ಲಾಹನ ಆಶ್ರಯವಿದೆ. ನಾನು ಖಲೀಫತುಲ್ ಮಸೀಹ್‌ರನ್ನು ಕಾಣುತ್ತಲೇ ಬೈಅತ್ ಮಾಡಲು ನಿರ್ಧರಿಸಿಕೊಂಡೆ. ಈಗ ಅಲ್ಲಾಹನು ನನ್ನ ಪತ್ನಿ ಮಕ್ಕಳಿಗೆ ಸಹ ಹಿದಾಯತ್ ನೀಡುವಂತಾಗಲಿ.

**(ಮುಂದುವರಿಯುವುದು)**

## ತಹ್ರೀಕ್ ಜದೀದ್ ಸಂಪೂರ್ಣ ಚಂದಾ ಪಾವತಿಸಲು ಗಮನವಹಿಸಿ

ಜಮಾಅತ್ ಬಾಂಧವರಿಗೆ ತಿಳಿದಿರುವಂತೆ ತಹ್ರೀಕ್ ಜದೀದ್‌ನ ಹೊಸ ವರ್ಷ ಪ್ರಾರಂಭಗೊಂಡು ಆರು ತಿಂಗಳಿಗಿಂತ ಹೆಚ್ಚು ಅವಧಿ ಕಳೆದುಹೋಗಿದೆ. ವಕಾಲತ್ ಮಾಲ್‌ನ ಮಾಹಿತಿ ಪ್ರಕಾರ ಇನ್ನು ಬಹಳಷ್ಟು ವಾಗ್ದಾನ ಮಾಡಿರುವವರು ಚಂದ ನೀಡಬೇಕಾಗಿದೆ. ಭಾರತದ ಎಲ್ಲ ಜಿಲ್ಲಾ ಅಮೀರುಗಳು, ಸ್ಥಳಿಯ ಅಮಿರರು, ಅಧ್ಯಕ್ಷರುಗಳು, ತಹ್ರೀಕ್ ಜದೀದ್ ಕಾರ್ಯದರ್ಶಿಗಳೊಂದಿಗೆ ವಿನಂತಿಸಿ ಕೊಳ್ಳುವುದೇನೆಂದರೆ ಅವರು ಸ್ಥಳಿಯ ಮುಬಲ್ಲಿಗೀನ್ ಅಥವಾ ಮುಅಲ್ಲಿಮೀನ್ ಅವರ ಸಹಯೋಗದೊಂದಿಗೆ ತಹ್ರೀಕ್ ಜದೀದ್ ಚಂದ ಪಾವತಿಯ ಕುರಿತು "ತಹ್ರೀಕ್ ಜದಿದ್ ಹಫ್ತಮಾಲ್" ಆಚರಿಸಬೇಕು. ಏಕೆಂದರೆ ಸಯ್ಯದ್‌ನಾ ಹುಝೂರೆ ಅನ್ವರ್ (ಅಬಅ) ರವರು ನಿಗದಿಪಡಿಸಿದ ಗುರಿಯ ಪ್ರಕಾರ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಗುರಿ ಸಾಧಿಸುವ ಭಾಗ್ಯ ನಮ್ಮದಾಗಲಿ. ಆಮೀನ್!

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ನುಡಿದರು. "ತಹ್ರೀಕ್ ಜದೀದ್ ನನ್ನ ಕರೆಯಾಗಿದೆ ಎಂದು ಭಾವಿಸಬೇಡಿರಿ. ಬದಲು ಅದರ ಒಂದೊಂದು ಪದ ನಾನು ಪವಿತ್ರ ಖುರ್‌ಆನ್‌ನಿಂದ ಸಾಬೀತು ಪಡಿಸುವೆನು. ಮತ್ತು ಅದರ ಒಂದೊಂದು ಆಜ್ಞೆಯು ಸಹ ರಸೂಲೆ ಕರೀಂ(ಸ) ರವರ ನುಡಿಗಳಿಂದ ತೋರಿಸಬಲ್ಲೆನು. ಆದರೆ ಯೋಚಿಸಲು ಮಿದುಳು ಮತ್ತು ವಿಶ್ವಾಸ ಹೊಂದಿದ ಹೃದಯದ ಅಗತ್ಯವಿದೆ. ಆದುದರಿಂದ ಅದನ್ನು ನಾನು ಹೇಳುತ್ತಿದ್ದೇನೆ ಎಂದೂ ಭಾವಿಸಬೇಡಿರಿ, ನನ್ನ ಕಡೆಯಿಂದ ಎಂದೂ ಭಾವಿಸಬೇಡಿರಿ. ಬದಲು ಯಾರ ಕೈಯಲ್ಲಿ ನಿಮ್ಮ ಜೀವವಿದೆಯೇ ಅದು ಅವನ ಮಾತಾಗಿದೆ. ನಾನು ತೀರಿಹೋದರೂ ಅವನು ಇತರರಿಂದಲೂ ಅದೇ ಹೇಳಿಸುವನು, ಅವರು ತೀರಿಹೋದರೆ ಅವರ ನಂತರ ಬೇರೆಯವರಿಂದಲೂ.... ಅಂತೂ ನೀವು ಅದನ್ನು ಪಾಲಿಸುವವರೆಗೆ ಅವನು ಬಿಡಲಾರನು. (ಖುತ್‌ಬ ಜುಮುಅ 13 ಡಿಸೆಂಬರ್ 1935, ಅಲ್‌ಫಝ್ಲ್ 21 ಡಿಸೆಂಬರ್ 1935)

ಅಲ್ಲಾಹನು ಎಲ್ಲಾ ತಹ್ರೀಕ್ ಜದೀದ್ ಚಂದಾದಾರರ ಸಂಪತ್ತುಗಳಲ್ಲಿ ಮತ್ತು ಆತ್ಮಗಳಲ್ಲಿ ಅಸಾಮಾನ್ಯ ಅನುಗ್ರಹ ದಯಪಾಲಿಸಲಿ. ಆಮೀನ್.

**(ವಕೀಲುಲ್ ಮಾಲ್ ತಹ್ರೀಕ್ ಜದೀದ್ ಖಾದಿಯಾನ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 03 June 2021, Issue No. 22

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 21ರ ವರದಿಯ ಉಳಿದ ಭಾಗ)**

ಹುಝೂರರ ಈ ಸಂಬೋಧನೆ 1.25 ಗಂಟೆಯವರಿಗೆ ನಡೆಯಿತು. ಅನಂತರ ಹುಝೂರ್ ದುಆ ಮಾಡಿಸಿದರು. ಅನಂತರ ಲಜ್ನ ಸದಸ್ಯೆಯರು ಮತ್ತು ನಾಸಿರಾತ್ ವಿಭಿನ್ನ ತಂಡಗಳ ಮೂಲಕ ಅರೇಬಿ, ಉರ್ದು ಜರ್ಮನ್, ಸ್ಪ್ಯಾನಿಶ್, ತುರ್ಕಿ, ಇಂಗ್ಲಿಷ್, ಬಾಂಗ್ಲ, ಕಾಶ್ಮೀರಿ ಮತ್ತು ಪಂಜಾಬಿ ಭಾಷೆಗಳಲ್ಲಿ (ನಝುಮ್) ಗೀತೆಗಳನ್ನು ಪ್ರಸ್ತುತಪಡಿಸಿದರು.

ಅನಂತರ ಹುಝೂರ್ ಸಣ್ಣ ವಯಸ್ಸಿನ ಮಕ್ಕಳ ಮಾರ್ಕಿನ ಕಡೆ ತೆರಳಿದರು. ಹುಝೂರರನ್ನು ತಮ್ಮ ಮಧ್ಯೆ ಕಂಡು ಮಹಿಳೆಯರ ಮತ್ತು ಮಕ್ಕಳ ಸಂತೋಷ ನೋಡತಕ್ಕದ್ದಾಗಿತ್ತು. ಈ ಮಾರ್ಕಿಯಲ್ಲಿಯೂ ಪ್ರೀತಿಯ ಇಮಾಮರೆಡೆಯಲ್ಲಿ (ನಝುಮ್) ಗೀತೆಗಳನ್ನು ಪ್ರಸ್ತುತಪಡಿಸಲಾಯಿತು.

ಅನಂತರ ಹುಝೂರ್ 2 ಗಂಟೆಗೆ ಪುರುಷರ ಜಲ್ಸ ಸ್ಥಳಗಳಲ್ಲಿ ಬಂದು ಝುಹರ್ ಮತ್ತು ಅಸರ್ ನಮಾಝ್‌ಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಕಾರ್ಯಕ್ರಮದನ್ವಯ 4 ಗಂಟೆಗೆ ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಜರ್ಮನ್ ಅತಿಥಿಗಳೊಂದಿಗೆ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿದರು. ಜರ್ಮನಿಯ ವಿವಿಧ ನಗರಗಳಿಂದ ಹಾಗೂ ಕ್ಷೇತ್ರಗಳಿಂದ ಅವರು ಬಂದಿದ್ದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅತಿಥಿಗಳ ಸಂಖ್ಯೆ 1488 ಆಗಿತ್ತು. ಜರ್ಮನಿಯಲ್ಲಿ ನೆಲೆಸಿದ ವಿವಿಧ ಸಮುದಾಯಗಳೊಂದಿಗೆ ಸಂಬಂಧಿಸಿದ 445 ಅತಿಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದಲ್ಲದೆ ವಿವಿಧ ಅರೇಬಿ ರಾಷ್ಟ್ರಗಳ 218 ಅತಿಥಿಗಳು ಶಾಮೀಲಾಗಿದ್ದರು.

ಅದಲ್ಲದೆ ಬಲ್‌ಗಾರಿಯಾ, ಮೆಸೆಡೋನಿಯಾ, ತುರ್ಕಿ, ಸಿರಿಯಾ, ಬೋಸ್ನಿಯಾ, ಅಲ್ಬಾನಿಯಾ, ಕೋಸೋವೋ, ಇಟಲಿ, ಸ್ಪೇನ್, ಬೆಲ್ಜಿಯಂ, ಲುಥ್ವಾನಿಯಾ, ಕ್ರೋಶಿಯಾ ಆಸ್ಟ್ರಿಯಾ, ಹಾಲೆಂಡ್, ಫ್ರಾನ್ಸ್, ಇಸ್ಟೋನಿಯಾ, ಹಂಗರಿ, ಮಾಂಟೆಗರೋಗಳಿಂದ ಅತಿಥಿಗಳು ಬಂದು ಸೇರಿದ್ದರು.

ಹುಝೂರ್ ಆಗಮಿಸಿದ ನಂತರ ಈ ಕಾರ್ಯಕ್ರಮದ ಅಂತಿಮ ಅಧಿವೇಶನ ಪವಿತ್ರ ಖುರ್‌ಆನ್ ಪಠಣದೊಂದಿಗೆ ಮತ್ತು ಅದರ ಅನುವಾದ ಜರ್ಮನ್ ಭಾಷೆಯೊಂದಿಗೆ ಪ್ರಾರಂಭವಾಯಿತು.

ಅನಂತರ 4.15 ಗಂಟೆಗೆ ಹುಝೂರ್ ಇಂಗ್ಲೀಷ್ ಭಾಷೆಯಲ್ಲಿ ಸಂಬೋಧಿಸಿದರು.

### ಹುಝೂರ್‌ರವರ ಜಲ್ಸ ಸಾಲಾನ ಜರ್ಮನಿಯ ಎರಡನೆಯ ದಿನ ಅಹ್ಮದಿಯೇತರ ಜರ್ಮನ್ ಅತಿಥಿಗಳೊಡನೆ ಸಂಬೋಧನೆ

ತಶಹುದ್ ತವೂಝ್ ನಂತರ ಹುಝೂರ್ ಹೇಳಿದರು. ಅಸ್ಸಲಾಮು ಅಲೈಕುಂ ವ ರಹ್‌ಮತುಲ್ಲಾಹ್ ವ ಬರಕಾತುಹೂ, ನಾವೆಲ್ಲರೂ ಶಾಂತಿ ಸಮಾಧಾನದಿಂದ ಇರುವಂತಾಗಲಿ ಮತ್ತು ಅಲ್ಲಾಹನು ನಿಮ್ಮೆಲ್ಲರಿಗೂ ಅನುಗ್ರಹಿಸುವಂತಾಗಲಿ.

ಪ್ರಪ್ರಥಮವಾಗಿ ನಾನು ನನ್ನ ಅಹ್ಮದಿಯೇತರ ಅತಿಥಿಯರಿಗೆ ಮನಃ ಪೂರ್ವಕವಾಗಿ ಕೃತಜ್ಞತೆಯನ್ನು ಸಲ್ಲಿಸಬಯಸುತ್ತೇನೆ. ಅವರು ನಮ್ಮ ಜಮಾಅತಿನ ಸದಸ್ಯರಲ್ಲದಿದ್ದರೂ ನಮ್ಮ ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದಾರೆ. ಇಂದು ನಾನು ತನ್ನ ಸಂಬೋಧನೆಯಲ್ಲಿ ಇಸ್ಲಾಮ್ ಸ್ಥಾಪಕರಾದ ಹಝ್ರತ್ ಮುಹಮ್ಮದ್(ಸ) ರವರ ಚರಿತ್ರೆಯು ಕುರಿತು ಸಂಕ್ಷಿಪ್ತವಾಗಿ ಮಾತನಾಡಬಯಸುತ್ತೇನೆ. ಹಝ್ರತ್ ರಸೂಲುಲ್ಲಾಹ್(ಸ) ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡಲು ಪ್ರಯತ್ನಪಟ್ಟ ಅವಿರತ ಚಟುವಟಿಕೆಗಳ ಬಗ್ಗೆ ಬೆಳಕು ಚೆಲ್ಲುವೆನು.

ಹುಝೂರ್ ಹೇಳಿದರು. ನೀವು ಇದನ್ನು ಹೇಳಿ ಅಚ್ಚರಿಪಡುವ ಸಂಭವವಿದೆ. ಇಂದು ಹಲವು ನಾಮಧಾರಿ ಮುಸ್ಲಿಮರು ಲೋಕದ ಶಾಂತಿಯನ್ನು ಭಂಗಗೊಳಿಸುತ್ತಿದ್ದಾರೆ ಮತ್ತು ತನ್ನ ಈ ಉಗ್ರವಾದ ಹೆಜ್ಜೆಗಳನ್ನು ಪವಿತ್ರ ಖುರ್‌ಆನ್ ಹಾಗೂ ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ತಳಕು ಹಾಕಲು ಹೊರಟಿದ್ದಾರೆ. ಅವರು ತನ್ನ ಬರ್ಬರತೆ, ಪಿತೂರಿ ಮತ್ತು ಭಯೋತ್ಪಾದನೆ ಮಾಡುವ ಜೊತೆಯಲ್ಲಿ ತನ್ನ ಕೃತ್ಯಗಳನ್ನು ಇಸ್ಲಾಮಿನ ನೈಜ ಶಿಕ್ಷಣಕ್ಕೆ ಹೋಲಿಸುತ್ತಿದ್ದಾರೆ.

ಹುಝೂರ್ ಹೇಳಿದರು. ನೀವು ಇದನ್ನು ಕೇಳಿ ಇನ್ನಷ್ಟು ಅಚ್ಚರಿಪಡುವಿರಿ. ಈ ನಾಮಧಾರಿ ಮುಸ್ಲಿಮರು ಕ್ಷೋಭೆ ಮತ್ತು ಉಗ್ರವಾದವನ್ನು ಹರಡುತ್ತಿದ್ದಾರೆ. ಅವರನ್ನು ನೋಡಿ ನನ್ನ ಮತ್ತು ನಿಶ್ಚಯವಾಗಿಯೂ ಪ್ರತಿಯೊಬ್ಬ ಅಹ್ಮದಿಯ ವಿಶ್ವಾಸ ಇನ್ನಷ್ಟು ದೃಢವಾಗುತ್ತದೆ. ಬಹುಶಃ ನೀವು ಈ ಮಾತಿನಿಂದ ಅಚ್ಚರಿಪಡಬಹುದು ಮತ್ತು ಗಾಬರಿಗೊಳ್ಳಬಹುದು. ಇತರ ಮುಸ್ಲಿಮರ ಉಗ್ರವಾದದ ಹೆಜ್ಜೆಗಳಿಂದ ಓರ್ವ ಅಹ್ಮದಿ ಮುಸಲ್ಮಾನನ ವಿಶ್ವಾಸ ಹೇಗೆ ದೃಢಗೊಳ್ಳುತ್ತದೆ ಎಂದು. ಅಹ್ಮದಿ ಮುಸ್ಲಿಮರು ಸಹ ಇತರ ಮುಸಲ್ಮಾನರಂತೆ ಉಗ್ರವಾದಕ್ಕೆ ಪ್ರೋತ್ಸಹ ನೀಡುತ್ತಿದ್ದಾರೆಂದು ಯೋಚಿಸುತ್ತಿರಬೇಕು. ಆದರೆ ನಿಮ್ಮ ಈ ವಿಚಾರ ಸರ್ವಥಾ ತಪ್ಪಾಗಿರುತ್ತದೆ.

ಹುಝೂರ್ ಹೇಳಿದರು. ಆದುದರಿಂದ ನಾನು ಮೊದಲು ಸ್ಪಷ್ಟಪಡಿಸ ಬಯಸುತ್ತೇನೆ. ಅಹ್ಮದಿ ಮುಸ್ಲಿಮರು ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡುವ ಕಾರ್ಯದ ಪ್ರಯತ್ನಗಳಲ್ಲಿ ಅತ್ಯಂತ ನಿಷ್ಠರಾಗಿದ್ದಾರೆ. ಅವರು ಏನು ಪ್ರಚಾರ ಮಾಡುತ್ತಿದ್ದಾರೆ. ಅದೇ ಕೃತಿಯಲ್ಲಿ ಮಾಡಿ ತೋರಿಸುತ್ತಿದ್ದಾರೆ. ನಮ್ಮ ಅಂತರಂಗ ಹಾಗೂ ಬಹಿರಂಗ ಒಂದೇ ಆಗಿದೆ. ಅದರಲ್ಲಿ ಯಾವ ವಿರೋಧಭಾಸವಿಲ್ಲ. ನಾವು ಯಾವ ಶಿಕ್ಷಣವನ್ನು ಇಸ್ಲಾಮಿನ ನಿಜವಾದ ಶಿಕ್ಷಣ ಎಂದು ಭಾವಿಸುತ್ತೇವೆಯೋ ಅದರಂತೆಯೇ ಜೀವಿಸುತ್ತಿದ್ದೇವೆ. ನಾನು ಇದನ್ನು ಸಹ ಸ್ಪಷ್ಟಪಡಿಸ ಬಯಸುತ್ತೇನೆ. ಅಹ್ಮದಿ ಮುಸ್ಲಿಮ್ ಶಾಂತಿ, ರಕ್ಷಣೆ ಮತ್ತು "ಪ್ರೀತಿ ಎಲ್ಲರಿಗೂ" ಎಂಬ ಪ್ರಚರ ಮಾಡುವುದಾದರೆ ಇದು ಯಾವ ಹೊಸ ವಾದ ಏನೂ ತಾವು ಮಂಡಿಸುತ್ತಿಲ್ಲ, ಬದಲು ಇಸ್ಲಾಮಿನ ಸತ್ಯವಾದ ಶಿಕ್ಷಣಗಳ ಪ್ರಚಾರವೇ ಮಾಡುತ್ತಿದ್ದೇವೆ. ಇಸ್ಲಾಮ್ ಎಲ್ಲ ವಿಧದಿಂದಲೂ ಶಾಂತಿ ಸಹೋದರತೆ, ಸಹನೆ ಮತ್ತು ಪ್ರೀತಿಯ ಧರ್ಮವಾಗಿದೆ. ನಿಶ್ಚಯವಾಗಿಯೂ ಇಸ್ಲಾಮಿನ ಈ ಶಿಕ್ಷಣದ ಫಲವಾಗಿಯೇ ಅಹ್ಮದಿಯರು ಎಲ್ಲ ಸಮುದಾಯಗಳೊಡನೆ ಅವರು ಮುಸ್ಲಿಮರಾಗಿರಲಿ ಅಥವಾ ಅಮುಸ್ಲಿಮರು ಪ್ರೀತಿಯ ಭಾವ ಹೊಂದಿರುತ್ತೇವೆ. ಇದು ಕೇವಲ ಇಸ್ಲಾಮ್ ಆಗಿದೆ. ಆದ ಕಾರಣ ನಾವು ಲೋಕದಲ್ಲಿ ನಿಜವಾದ ಶಾಂತಿ ಬಯಸುತ್ತೇವೆ ಮತ್ತು ಆ ಉದ್ದೇಶ ಸಾಧಿಸಲು ಎಲ್ಲ ರೀತಿಯ ಪ್ರಯತ್ನಗಳು ಮಾಡುತ್ತಿದ್ದೇವೆ.

ಹುಝೂರ್ ಹೇಳಿದರು. ಈ ಬಾಹ್ಯ ವಿರೋಧಭಾಸ ಮತ್ತು ಗೊಂದಲಗಳಿಗೆ ಅನವಶ್ಯಕವಾಗಿ ನಾನು ನಿಮ್ಮನ್ನು ಸಿಲುಕಿಸಲು ಇಷ್ಟಪಡುವುದಿಲ್ಲ. ಅಂದರೆ ಒಂದೆಡೆ ಅಹ್ಮದಿ ಮುಸಲ್ಮಾನರು ಇತರ ಮುಸಲ್ಮಾನರ ಉಗ್ರವಾದದ ಹೆಜ್ಜೆಗಳನ್ನು ಖಂಡಿಸುವುದಾದರೆ ಇನ್ನೊಂದೆಡೆ ಇಂತಹ ಉಗ್ರವಾದ ಹೆಜ್ಜೆಗಳಿಂದ ತಮ್ಮ ವಿಶ್ವಾಸ ವೃದ್ಧಿಸುತ್ತದೆ ಎನ್ನುತ್ತಾರೆ. ಅದನ್ನು ಬಹಿರಂಗಗೊಳಿಸಲು ಮತ್ತು ಮನವರಿಕೆ ಮಾಡಿಕೊಡಲು ನಾನು ನಿಮಗೆ 1400 ವರ್ಷಗಳ ಹಿಂದೆ ಇಸ್ಲಾಮ್ ಸ್ಥಾಪಕರಾದ ಹಝ್ರತ್ ಮುಹಮ್ಮದ್(ಸ) ರವರ ಕಾಲಾವಧಿಗೆ ತರಬಯಸುತ್ತೇನೆ. ಆ ಕಾಲದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಭವಿಷ್ಯ ಸಂಬಂಧವಾಗಿ ಒಂದು ಮಹೋನ್ನತವಾದ ಭವಿಷ್ಯವಾಣಿ ನುಡಿದಿದ್ದರು. ಹಝ್ರತ್ ರಸೂಲುಲ್ಲಾಹ್(ಸ) ನುಡಿದಿದ್ದರು. ಮುಸಲ್ಮಾನರ ಮೇಲೆ ಒಂದು ಆಧ್ಯಾತ್ಮಿಕ ಅಂಧಕಾರದ ಕಾಲ ಬರುವುದು. ಆಗ ಅವರು ವಿಶ್ವಾಸದಿಂದ ವಂಚಿತರಾಗುವರು. ಆ ಕಾಲದಲ್ಲಿ ಮುಸ್ಲಿಮರ ಕೃತ್ಯಗಳು ಇಸ್ಲಾಮಿನ ನಿಜವಾದ ಶಿಕ್ಷಣಗಳಿಗೆ ಅಪ್ಪಟ ವಿರುದ್ಧವಾಗಿರುವುದು. ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ಸಹ ನುಡಿದಿದ್ದರು. ನಾಮಧಾರಿ ಮುಸ್ಲಿಮ್ ಮತಪಂಡಿತರು (ಉಲಮಾರ್) ಮತ್ತು ಮಾರ್ಗದರ್ಶನಗಳು (ಮುಖಂಡರು) ಇಸ್ಲಾಮಿನ ಶಿಕ್ಷಣಕ್ಕೆ ಅಪ್ಪಟ ವಿರೋಧವಾಗಿ ವ್ಯಾಖ್ಯಾನ ಬರೆಯುವರು. ಅವರ ಬುದ್ಧಿವಂತಿಕೆ ಕೇವಲ ಕ್ಷೋಭೆ ಉಂಟು ಮಾಡಲು ಮತ್ತು ಅನ್ಯಾಯದ ಮೇಲೆ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.